# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ದಾವಣಗೆರೆ
ಭಾನುವಾರ, ಅಕ್ಟೋಬರ್ 03, 2021

ಸಂಪುಟ : 48 ಸಂಚಿಕೆ : 143 ☎ 254736 91642 99999 RNI No: 27369/75 KA/SK/CTA-275/2021-2023. O/P @ B.V. Nagar P.O. ಪುಟ : 8 ರೂ : 4.00 www.janathavani.com janathavani@mac.com



**TAPOVANA INSTITUTE OF NURSING, DAVANGERE.**

**ADMISSIONS OPEN FOR 2021-22**

**COURSE : GNM NURSING**

*For More Details Kindly Contact :*

**Ph. : 73383 36887, 86605 31618**



## ತರಳಬಾಳು ಶ್ರೀಗಳಿಗೆ ಅಭಿನಂದನೆಗಳು






ಶ್ರೀ ತರಳಬಾಳು ಜಗದ್ಗುರು
ಡಾ. ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿ
ಅವರ ಸತತ ಪರಿಶ್ರಮದ ಫಲವಾಗಿ ಭರಮಸಾಗರ
ಬಿಚ್ಚುಗತ್ತಿ ಭರಮಣ್ಣನಾಯಕ ಕೆರೆಗೆ ತುಂಗಭದ್ರಾ
ನದಿ ನೀರು ಹರಿದು ಬಂದಿದ್ದು,
ಭರಮಸಾಗರ ಹಾಗೂ ಸುತ್ತಮುತ್ತಲಿನ ಜನತೆಯ
ದಶಕಗಳ ಬೇಡಿಕೆ ಈಡೇರಿಸಿದ
ಶ್ರೀಗಳಿಗೆ ಭಕ್ತಿಪೂರ್ವಕ ಅಭಿನಂದನೆಗಳು....

**ಜಿ. ಮಹದೇವಪ್ಪ ಗೌಡ್ರು ಅಮರಾವತಿ**
ಸಾಧು ವೀರಶೈವ ಸಮಾಜದ ಅಧ್ಯಕ್ಷರು, ಹರಿಹರ ತಾಲ್ಲೂಕು
ಹಾಗೂ ಎ.ಪಿ.ಎಂ.ಸಿ. ಮಾಜಿ ಅಧ್ಯಕ್ಷರು ಹಾಗೂ
ಹಾಲಿ ಸದಸ್ಯರು, ಹರಿಹರ.





## ಪ್ರಥಮ ವರ್ಷದ ಪುಣ್ಯಸ್ಮರಣೆ

ದಾವಣಗೆರೆ ನಗರದ ಪಿ.ಜೆ. ಬಡಾವಣೆ ನಿವಾಸಿ
ಶ್ರೀ ವಿನಾಯಕ ರೈಸ್ ಮಿಲ್ ಮಾಲೀಕರೂ,
ಗಣ್ಯ ವರ್ತಕರೂ, ಕೊಡುಗೈ ದಾನಿಗಳೂ ಆದ

**ಶ್ರೀಯುತ ಜಿ. ವೇದಮೂರ್ತಿ (ಮೂರ್ತೆಪ್ಪ)**

(ನಿಧನ : 15.10.2020)


ನೀವು ನಮ್ಮನ್ನಗಲಿ ಇಂದಿಗೆ ಒಂದು ವರ್ಷವಾಯಿತು.
ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಾ
ಸದಾ ನಿಮ್ಮ ಸ್ಮರಣೆಯಲ್ಲಿರುವ...

✦ ಶ್ರೀಮತಿ ಮಂಜುಳ ಮತ್ತು ಸತೀಶ್ ಟಿ.ಬಿ.
✦ ಶ್ರೀಮತಿ ಅಶ್ವಿನಿ ಮತ್ತು ಪ್ರಶಾಂತ್ ಎನ್.ಸಿ.
✦ ಶ್ರೀಮತಿ ಅನುಷಾ ಮತ್ತು ಸಿದ್ದೇಶ್ ವಿ.
✦ ಶ್ರೀಮತಿ ನೇತ್ರಾವತಿ ಮತ್ತು ವಿನಯಕುಮಾರ್ ಎ.ಎಸ್.
✦ ಮೊಮ್ಮಕ್ಕಳಾದ : ಲಿಖಿತಾ, ದಿಶಾ, ಅಖಿಲ್, ಹರ್ಷಿತಾ, ಉಷಾ, ಪ್ರಣವ್, ಮನ್ವಿತ್, ಅನ್ವಿತಾ

**ಶ್ರೀ ವಿನಾಯಕ ರೈಸ್‌ಮಿಲ್ ಸಿಬ್ಬಂದಿ ವರ್ಗ**



## ಇಂದು ಕೊನೆಯ ಅವಕಾಶ









*FOR THOSE WHO EXPECT MORE*

**PROJECT HIGHLIGHTS**

- 24x7 bus facility
- 24x7 Water & Power supply
- Automatic LED Street Lights
- Clear Files • Execellent Location
- Entire Layout As per Vaastu
- Execellent Water Table

**AMENITIES**

- Entrance Arch with Gate
- Asphalted Roads
- Kids Play Area
- Underground drainage system
- Round the clock security

- Harihar City : 05 Minutes
- Davangere City : 10 Minutes

Execellent connectivity and proximity to premier educational institutions.

Healthcare facilities and a wide range of work places.

## ಕರ್ನಾಟಕ ರಾಜ್ಯ ಸರ್ಕಾರಿ ನೌಕರರಿಗೆ ಬಂಪರ್ ಕೊಡುಗೆ

ನಾವು ನೂತನವಾಗಿ ನಿರ್ಮಿಸಿರುವ
**ಅನ್ನಪೂರ್ಣೇಶ್ವರಿ ಎನ್‌ಕ್ಲೇವ್ (A.P. Enclave)ನಲ್ಲಿ**
'ಎ' ಬಡಾವಣೆ ಮತ್ತು 'ಬಿ' ಬಡಾವಣೆಗಳ
ನಿರ್ಮಾಣ ಮುಕ್ತಾಯಗೊಂಡಿದ್ದು,
ಇನ್ನು 'ಸಿ' ಮತ್ತು 'ಡಿ' ಬಡಾವಣೆಗಳ
ನಿರ್ಮಾಣ ಪ್ರಕ್ರಿಯೆ ಆರಂಭಗೊಂಡಿದೆ.
ಈ ಬಡಾವಣೆಗಳಲ್ಲಿನ ನಿವೇಶನಗಳಿಗೆ
**ಕರ್ನಾಟಕ ರಾಜ್ಯ ಸರ್ಕಾರಿ ನೌಕರರಿಂದ**
**250** ಅರ್ಜಿಗಳನ್ನು ಆಹ್ವಾನಿಸಲಾಗಿದ್ದು,
ಈ ಅರ್ಜಿಗಳಲ್ಲಿ **150** ಅರ್ಜಿಗಳನ್ನು ಮಾತ್ರ
ಲಕ್ಕಿ ಡ್ರಾ ಮೂಲಕ ಆಯ್ಕೆ ಮಾಡಲಾಗುವುದು.

**ಕೆಲವೇ ಅರ್ಜಿಗಳು ಮಾತ್ರ** | **ಮೊದಲು ಬಂದವರಿಗೆ ಆದ್ಯತೆ**

**ನಿವೇಶನಗಳ ಅಳತೆ : 30×50 ಅಡಿಗಳು**

ನಿವೇಶನಕ್ಕೆ 250 ಅರ್ಜಿಗಳನ್ನು ಕೊಡಲಾಗುತ್ತದೆ.
ಅರ್ಜಿ ಒಂದಕ್ಕೆ ರೂ. 1050/- (ಹಿಂತಿರುಗಿಸುವ ಶುಲ್ಕ)

ಅರ್ಜಿ ವಿತರಿಸುವ ದಿನಾಂಕ :
**03-10-2021ರ ಭಾನುವಾರ**
ಅರ್ಜಿ ವಿತರಿಸುವ ಸಮಯ : ಬೆಳಿಗ್ಗೆ 10 ಗಂಟೆಯಿಂದ ಸಂಜೆ 4.30ರವರೆಗೆ
ಅರ್ಜಿ ಸಿಗುವ ಸ್ಥಳ : **ಎ.ಪಿ. ಎನ್‌ಕ್ಲೇವ್**
ಹರಿಹರ-ದಾವಣಗೆರೆ ಸಮಾನಂತರ ರಸ್ತೆ,
ರೈಲ್ವೆ ಗೇಟ್ ಹತ್ತಿರ, ಹರಿಹರ.

(ಷರತ್ತುಗಳು ಅನ್ವಯಿಸುತ್ತವೆ)

ಹೆಚ್ಚಿನ ಮಾಹಿತಿಗಾಗಿ
**ಎ.ಪಿ. ಡೆವಲಪರ್ಸ್**
ಮೊ. 81235 31456, 97392 23456

# ಕ್ರೆಡಿಟ್ ಕಾರ್ಡ್ ದುರ್ಬಳಕೆಯಾದರೆ ಗ್ರಾಹಕರೇ ಹೊಣೆ

### ಮಹಮ್ಮದ್ ಮಜಹರ್ ಪ್ರಕರಣದಲ್ಲಿ ಜಿಲ್ಲಾ ಗ್ರಾಹಕರ ಆಯೋಗದ ತೀರ್ಪು

ಹರಿಹರ, ಅ.2- ಅಂತರ್ಜಾಲ ವಹಿವಾಟು ಅಥವಾ ಎಟಿಎಂನಲ್ಲಿ ಯಾವುದೇ ರೀತಿ ಕ್ರೆಡಿಟ್ ಕಾರ್ಡ್ ದುರ್ಬಳಕೆಯಾದರೂ ಅದಕ್ಕೆ ಗ್ರಾಹಕರೇ ಸಂಪೂರ್ಣ ಹೊಣೆ ಎಂದು ಜಿಲ್ಲಾ ಗ್ರಾಹಕರ ಆಯೋಗ ಮಂಗಳವಾರ ಪ್ರಕರಣವೊಂದರಲ್ಲಿ ಆದೇಶ ನೀಡಿದೆ.

**ಪ್ರಕರಣದ ಹಿನ್ನೆಲೆ:** ನಗರದ ಎಕ್ಸಿಸ್ ಬ್ಯಾಂಕ್‌ನಲ್ಲಿ ಉಳಿತಾಯ ಖಾತೆ ಹೊಂದಿದ್ದ ಮಹಮ್ಮದ್ ಮಜಹರ್ ವಿಳಾಸಕ್ಕೆ 2017ರ ಜನವರಿಯಲ್ಲಿ ಅವರ ಹಾಗೂ ಅವರ ಪತ್ನಿ ಹೆಸರಿಗೆ ಎರಡು ಕ್ರೆಡಿಟ್ ಕಾರ್ಡ್‌ಗಳು ಬಂದಿದ್ದವು. ಅನಾರೋಗ್ಯದ ನಿಮಿತ್ಯ ಅವರು ಇದನ್ನು ಪ್ರಶ್ನಿಸಲಾಗದೆ ಚಿಕಿತ್ಸೆ ಪಡೆಯುತ್ತಿದ್ದರು.

ಒಂದು ವರ್ಷದ ನಂತರ 2018ರ ಮಾರ್ಚ್‌ನಲ್ಲಿ ಅವರ ಉಳಿತಾಯ ಖಾತೆಯಿಂದ 1,783 ರೂ. ಕಡಿತವಾಗಿದ್ದು, ಬ್ಯಾಂಕ್‌ಗೆ ತೆರಳಿ ವಿಚಾರಿಸಿದಾಗ ಸದರಿ ಕಾರ್ಡ್ ನಂಬರ್‌ನಲ್ಲಿ ಯಾರೋ ಆನ್‌ಲೈನ್ ಮೂಲಕ ಸುಮಾರು 50 ಸಾವಿರ ರೂ. ಸರಕು ಖರೀದಿಸಿದ್ದು, ಈ ಮೊತ್ತವನ್ನು ಇಎಂಐ ಆಗಿ ಪರಿವರ್ತಿಸಿ, ಅವರ ಉಳಿತಾಯ ಖಾತೆಯಿಂದ ಹಣ ಜಮೆ ಮಾಡಿಕೊಳ್ಳುತ್ತಿರುವುದು ತಿಳಿದು ಕಾರ್ಡ್ ಬ್ಲಾಕ್ ಮಾಡಿಸಿದ್ದರು.

ತಾವು ಕೇಳದಿದ್ದರೂ ಕಾರ್ಡ್ ಕಳಿಸಿದ್ದೇಕೆ, ಆಕ್ಟಿವೇಷನ್ ಮಾಡದಿದ್ದರೂ ಅವು ಬಳಕೆಯಾಗಿದ್ದು ಹೇಗೆ, ಆನ್‌ಲೈನ್ ಬ್ಯಾಂಕಿಂಗ್‌ಗೆ ಕಾರ್ಡ್ ರಿಜಿಸ್ಟರ್ ಮಾಡಿದ್ದು ಹೇಗೆ, ತಮ್ಮ ಒಪ್ಪಿಗೆಯಿಲ್ಲದೆ ಕ್ರೆಡಿಟ್ ಕಾರ್ಡ್ ಬಾಕಿ ಮಾಸಿಕ ಕಂತುಗಳಾಗಿ ಪರಿವರ್ತಿಸಿದ್ದೇಕೆ ಎಂದೆಲ್ಲಾ ಮಾಹಿತಿ ಕೋರಿ ಅರ್ಜಿ ಸಲ್ಲಿಸಿದ್ದಕ್ಕೆ ಬ್ಯಾಂಕಿನವರು ನೀವೇನು ಹಣ ಕಟ್ಟಬೇಕಿಲ್ಲ, ಸರಿಪಡಿಸುತ್ತೇವೆ ಎಂದು ತಿಳಿಸಿದ್ದರು. ಆದರೆ, 2018ರ ಅಕ್ಟೋಬರ್‌ನಲ್ಲಿ ಕ್ರೆಡಿಟ್ ಕಾರ್ಡ್ ಖಾತೆ ಬಾಕಿ 70 ಸಾವಿರ ರೂ. ಪಾವತಿ ಸಲು ಲೀಗಲ್ ನೋಟೀಸ್ ಕಳಿಸಿದ್ದಾರೆಂದು ಮಜಹರ್ ಜಿಲ್ಲಾ ಗ್ರಾಹಕರ ಆಯೋಗಕ್ಕೆ 30.03.2019ರಂದು ದೂರು ಸಲ್ಲಿಸಿದ್ದರು.

ವಿಚಾರಣೆ ನಡೆಸಿದ ಆಯೋಗದ ಅಧ್ಯಕ್ಷ ಜಿ. ಗೋಖಲೆ, ಸದಸ್ಯರಾದ ಶಿವಕುಮಾರ್, ಜ್ಯೋತಿ ರಾಧೇಶ್ ಜಂಬಗಿ, ಕ್ರೆಡಿಟ್ ಕಾರ್ಡ್ ಬಳಸಿ ತಾನು ಖರೀದಿ ಮಾಡಿಲ್ಲ ಎಂಬುದನ್ನು ರುಜುವಾತು ಪಡಿಸುವ ಸಂಪೂರ್ಣ ಭಾರ ಅಥವಾ ಹೊಣೆ ಗ್ರಾಹಕರ ಮೇಲಿದ್ದು, ಅದನ್ನು ಸಾಬೀತುಪಡಿಸುವಲ್ಲಿ ದೂರುದಾರರು ವಿಫಲರಾಗಿದ್ದಾರೆ ಎಂದು ದೂರು ವಜಾ ಮಾಡಿ ಆದೇಶಿಸಿದ್ದಾರೆ.

## ನೈಸರ್ಗಿಕ ನ್ಯಾಯಕ್ಕೆ ವಿರುದ್ಧವಾದ ಆದೇಶ!

ಯಾವುದೇ ಆನ್‌ಲೈನ್ ವಹಿವಾಟು ತಾನು ಮಾಡಿದ್ದಲ್ಲ ಎಂದು ಗ್ರಾಹಕ ಆಕ್ಷೇಪಿಸಿದಾಗ ಆ ಬಗ್ಗೆ ಸೂಕ್ತ ಸಾಕ್ಷ್ಯಾಧಾರಗಳನ್ನು ಹಾಜರುಪಡಿಸುವುದು ಬ್ಯಾಂಕುಗಳ ಕರ್ತವ್ಯ. ಹ್ಯಾಕರ್ಸ್‌ಗಳು ಗ್ರಾಹಕರ ದತ್ತಾಂಶ ದುರ್ಬಳಕೆ ಮಾಡಿಕೊಂಡರೆ ಅದಕ್ಕೆ ಬ್ಯಾಂಕುಗಳೇ ಹೊಣೆ. ಇಂತದ್ದನ್ನು ತಡೆಯುವಂತಹ ತಂತ್ರಜ್ಞಾನ ರೂಪಿಸಿಕೊಳ್ಳುವುದು ಬ್ಯಾಂಕುಗಳ ಜವಾಬ್ದಾರಿ. ಗ್ರಾಹಕರ ನಿರ್ಲಕ್ಷ್ಯವಿರದ ವಿವಾದಿತ ವಹಿವಾಟುಗಳಿಗೆ ಅವರನ್ನು ಹೊಣೆ ಮಾಡುವಂತಿಲ್ಲ ಎಂಬ ಉನ್ನತ ನ್ಯಾಯಾಲಯಗಳ ನಿರ್ಣಿತ ತೀರ್ಪುಗಳನ್ನು ಸಲ್ಲಿಸಿದ್ದರೂ ಆಯೋಗ ಪರಿಗಣಿಸಿಲ್ಲ.

ಒಂದು ವೇಳೆ ಗ್ರಾಹಕರ ನಿರ್ಲಕ್ಷ್ಯ, ದಡ್ಡತನವಿದ್ದಾಗ್ಯೂ ವಿವಾದಿತ ವಹಿವಾಟು ನಡೆದ 24 ಗಂಟೆಯೊಳಗೆ ದೂರು ನೀಡಿದರೆ ಗ್ರಾಹಕರ ಹೊಣೆಗಾರಿಕೆ ಶೂನ್ಯ ಎಂದು ಆರ್‌ಬಿಐ ಸುತ್ತೋಲೆಯಿದೆ. ದೂರುದಾರರು ಕ್ರೆಡಿಟ್ ಕಾರ್ಡ್‌ನಿಂದ 06.04.2018 ರಂದು ಕೊನೆಯ 10 ಸಾವಿರ ರೂ. ವಹಿವಾಟು ನಡೆದಿದ್ದು, ಅದೇ ದಿನ ದೂರು ನೀಡಿದ್ದರೂ ಬ್ಯಾಂಕ್ ಅದರ ಪಾವತಿ ತಡೆಯದೇ ನಿರ್ಲಕ್ಷ್ಯ ವಹಿಸಿರುವುದನ್ನು ಆಯೋಗ ಗ್ರಹಿಸಿಲ್ಲ. ನಕಾರಾತ್ಮಕವಾದದ್ದನ್ನು ರುಜುವಾತು ಮಾಡಲಾಗದು ಎಂಬ ನೈಸರ್ಗಿಕ ನ್ಯಾಯ ತತ್ವಕ್ಕೆ ವಿರುದ್ಧವಾಗಿರುವ ಜಿಲ್ಲಾ ಆಯೋಗದ ಆದೇಶ ಪ್ರಶ್ನಿಸಿ ಮೇಲ್ಮನವಿ ಸಲ್ಲಿಸಲಾಗುವುದೆಂದು ದೂರುದಾರರ ಪರ ವಕೀಲ ಬಿ.ಎಂ. ಸಿದ್ದಲಿಂಗಸ್ವಾಮಿ ತಿಳಿಸಿದ್ದಾರೆ.

## ಉದ್ಯಮಿ ಪ್ರಕರಣದಲ್ಲಿ ಬ್ಯಾಂಕ್ ಕ್ಷಮಾಪಣೆ ಕೇಳಿತ್ತು!

ಹರಿಹರದ ಎಕ್ಸಿಸ್ ಬ್ಯಾಂಕ್‌ನಲ್ಲಿ ನಾನು ಉಳಿತಾಯ ಖಾತೆ ಹೊಂದಿದ್ದೇನೆ. 2018ರ ನವೆಂಬರ್‌ನಲ್ಲಿ ಮಹಿಳೆಯೊಬ್ಬರು ನನಗೆ ಕರೆ ಮಾಡಿ ಕ್ರೆಡಿಟ್ ಕಾರ್ಡ್ ಬೇಕಾ ಎಂದು ಕೇಳಿದ್ದರು. ನಾನು ನೇರವಾಗಿ ಭೇಟಿ ಮಾಡಿ ಮಾಹಿತಿ ನೀಡಲು ಕೋರಿದ್ದೆ. ಇದಾಗಿ ಕೆಲ ದಿನಗಳ ನಂತರ ನನ್ನ ವಿಳಾಸಕ್ಕೆ ಎಕ್ಸಿಸ್ ಬ್ಯಾಂಕ್‌ನ ಕ್ರೆಡಿಟ್ ಕಾರ್ಡ್ ಬಂತು.

ಬ್ಯಾಂಕ್‌ಗೆ ತೆರಳಿ ಪ್ರಶ್ನಿಸಿದಾಗ ಸಬೂಬು ಹೇಳಿದ್ದರು. ನಾನು ಬ್ಯಾಂಕ್ ವಿರುದ್ಧ ಪ್ರಕರಣ ದಾಖಲಿಸುವುದಾಗಿ ಲಿಖಿತ ದೂರು ಕೊಟ್ಟ ನಂತರ ಬ್ಯಾಂಕ್‌ನವರು 14/04/2019 ರಂದು ನಿಮ್ಮ ಒಪ್ಪಿಗೆಯಿಲ್ಲದೆ, ನಿಮ್ಮ ಹೆಸರಿನಲ್ಲಿ ಕ್ರೆಡಿಟ್ ಕಾರ್ಡ್ ನೀಡಿದ್ದಕ್ಕೆ ಕ್ಷಮಿಸಿ ಎಂದು ಲಿಖಿತ ದಾಖಲೆ ಕೊಟ್ಟು ಕಾರ್ಡ್ ವಾಪಾಸ್ ಪಡೆದಿದ್ದರು ಎನ್ನುತ್ತಾರೆ ಉದ್ಯಮಿ ಡಿ.ಜಿ. ರಘುನಾಥ್.

# ವಿನೂತನ ಮಹಿಳಾ ಸಮಾಜದಿಂದ ಗಾಂಧಿಜೀ, ಶಾಸ್ತ್ರಿಜೀ ಜಯಂತಿ ಆಚರಣೆ



ದಾವಣಗೆರೆ, ಅ.2 - ವಿನೂತನ ಮಹಿಳಾ ಸಮಾಜದಲ್ಲಿ ಗಾಂಧಿಜೀ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿಜೀಯವರ ಜನ್ಮ ದಿನಾಚರಣೆ ಆಚರಿಸಲಾಯಿತು. ರೇಖಾ ಓಂಕಾರಪ್ಪ ಅಧ್ಯಕ್ಷತೆಯಲ್ಲಿ, ಲೀಲಾ ಶೇಖರ್ ನಿರೂಪಿಸಿದರು. ಚೇತನ ಮಂಜುನಾಥ್ ಸತ್ಯ ಅಹಿಂಸೆ ಯಿಂದ ಸ್ವಾತಂತ್ರ್ಯ ತಂದ ಮಹಾತ್ಮ ಗಾಂಧೀಜಿಯವರನ್ನು ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿಯವರ ಜೀವನದಲ್ಲಿ, ಅವರು ಹುಟ್ಟಿದ ದಿನ, ಪ್ರಧಾನ ಮಂತ್ರಿಯಾದ ದಿನ, ಮರಣ ಹೊಂದಿದ ದಿನ ಹೀಗೆ ಏಳು ಪ್ರಮುಖ ಘಟನೆಗಳು ಮಂಗಳವಾರವೇ ಆಗಿರುವುದು ವಿಶೇಷವಾಗಿದೆ ಎಂದು ನೆನಪಿಸಿದರು.

ಸುಜಾತ ಆಚಾರ್ ಮಾತನಾಡಿ, ಶಾಸ್ತ್ರೀಜಿಯವರು ಭಾರತದ ಎರಡನೇ ಪ್ರಧಾನ ಮಂತ್ರಿಗಳಾಗಿ ಎರಡು ವರ್ಷದ ಕಾರ್ಯವೈಖರಿಯಲ್ಲಿ ಯಾರಿಗೂ ಬಗ್ಗದೆ ಯಾರ ಮುಲಾಜಿಗೂ ಒಳಗಾಗದೆ, ಸರಳ ವ್ಯಕ್ತಿತ್ವ, ನಿಸ್ವಾರ್ಥ ಸೇವೆ ಸಲ್ಲಿಸಿದರಿಂದಲೇ ಭಾರತ ರತ್ನ ಪ್ರಶಸ್ತಿಗೆ ಭಾಜನರಾಗಿದ್ದರು ಎಂದು ಸ್ಮರಿಸಿದರು. .ಚಂದ್ರಿಕಾ ಜಗನ್ನಾಥ್ ಪ್ರಾರ್ಥಿಸಿದರು, ಶೈಲಜಾ ತಿಮ್ಮೇಶ್ ಸ್ವಾಗತಿಸಿದರು, ಸುಧಾ ಪಾಟೀಲ್ ವಂದಿಸಿದರು. ಗಿರಿಜಾ ಬಿಲ್ಲಳ್ಳಿ, ರತ್ನ ಎ. ಪಾಟೀಲ್, ಸಾವಿತ್ರಿ ನವ್ವಿ, ಎಲ್ಲರೂ ಸೇರಿ ಭಜನೆ ಮಾಡುವುದರ ಮೂಲಕ ಈ ಇಬ್ಬರು ಮಹಾತ್ಮರ ಜಯಂತಿ ಆಚರಿಸಲಾಯಿತು.

# ಹಳೇಬಾತಿಯಲ್ಲಿ ಪೊಲೀಸ್ ಚೌಕಿ ಉದ್ಘಾಟನೆ



ದಾವಣಗೆರೆ, ಅ.2 - ಹಳೇ ಬಾತಿ ಗ್ರಾಮದ ದರ್ಗಾದ ಬಳಿ ಪೊಲೀಸ್ ಚೌಕಿ ಉದ್ಘಾಟನೆಯನ್ನು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಿಷ್ಯಂತ್ ಉದ್ಘಾಟಿಸಿದರು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಜಿಲ್ಲಾಧಿಕಾರಿ ಮಹಾಂತೇಶ್ ಬೀಳಗಿ, ಗ್ರಾ.ಪಂ ಅಧ್ಯಕ್ಷ ಸಿದ್ದೇಶ್, ಗ್ರಾ.ಪಂ ಸದಸ್ಯ ಉಮೇಶ್, ಚಮನ್ ಷಾವಾಲಿ ದರ್ಗಾದ ಅಧ್ಯಕ್ಷ ವೆಂಕಟೇಶ್, ಡಿವೈಎಸ್ಪಿ ಬಸವರಾಜ್ ನಾಯ್ಕ, ಪೊಲೀಸ್ ಇಲಾಖೆಯ ಮಂಜುನಾಥ್ ಭಾಗವಹಿಸಿದ್ದರು.

# ನಗರದಲ್ಲಿ ಇಂದು ಸೈಕಲ್ - ನಡಿಗೆ ಜಾಥಾ

ಲೈಫ್ ಲೈನ್ ಸ್ವಯಂ ಪ್ರೇರಿತ ರಕ್ತದಾನಿಗಳ ಸಮೂಹದಿಂದ ರಾಷ್ಟ್ರೀಯ ರಕ್ತದಾನ ದಿನಾಚರಣೆ ಅಂಗವಾಗಿ ಸೈಕಲ್ ಜಾಥಾ ಹಾಗೂ ನಡಿಗೆ ಜಾಥಾ ಹಮ್ಮಿಕೊಳ್ಳಲಾಗಿದೆ.

ಇಂದು ಬೆಳಿಗ್ಗೆ 7.30ಕ್ಕೆ ದಾವಣಗೆರೆ ಬೈಸಿಕಲ್ ಅಸೋಸಿಯೇಷನ್ ಮತ್ತು ಲಿಯೋ ಕ್ಲಬ್ ಜೆ.ಜೆ.ಎಂ. ಮೆಡಿಕಲ್ ಕಾಲೇಜು ಘಟಕದ ಸಹಯೋಗದೊಂದಿಗೆ ಸೈಕಲ್ ಜಾಥಾ ಹಾಗೂ ಸಿದ್ಧಗಂಗಾ ವಿದ್ಯಾಸಂಸ್ಥೆ ಸಹಯೋಗದೊಂದಿಗೆ ನಡಿಗೆ ಜಾಥಾ ನಡೆಯಲಿದೆ. ಜಾಥಾವು ಬೆಳಿಗ್ಗೆ 7.30ಕ್ಕೆ ಜಯದೇವ ವೃತ್ತದಿಂದ ಆರಂಭವಾಗಿ, 9.30ರ ತನಕ ವಿವಿಧ ಬಡಾವಣೆಗಳಲ್ಲಿ ಸಂಚರಿಸಲಿದೆ. ಕಾರ್ಯಕ್ರಮದ ಸಾನ್ನಿಧ್ಯವನ್ನು ಶ್ರೀ ಬಸವಪ್ರಭು ಸ್ವಾಮೀಜಿ ವಹಿಸಲಿದ್ದಾರೆ. ಜಾಥಾದ ಉದ್ಘಾಟನೆಯನ್ನು ದೇವರಮನೆ ಶಿವಕುಮಾರ್, ಬಸವರಾಜ್ ದೊಡ್ಮನಿ, ಡಾ.ಎ.ಎಂ. ಶಿವಕುಮಾರ್ ನೆರವೇರಿಸಲಿದ್ದಾರೆ.

# ಮಾನಸ ಪ್ಯಾರಾ ಮೆಡಿಕಲ್‌ನಲ್ಲಿ ಸ್ವಾಗತ ಕಾರ್ಯಕ್ರಮ



ದಾವಣಗೆರೆ, ಅ.2- ನಗರದ ಮಾನಸ ಪ್ಯಾರಾ ಮೆಡಿಕಲ್ ಕಾಲೇಜು ಆವರಣದಲ್ಲಿ ಈ ಸಾಲಿನ ವಿದ್ಯಾರ್ಥಿಗಳನ್ನು ಸ್ವಾಗತಿಸಲಾಯಿತು.

ಕಾಲೇಜು ಪ್ರಾಂಶುಪಾಲರಾದ ಬಿ.ಎನ್. ಲಕ್ಷ್ಮಿ ಅಧ್ಯಕ್ಷತೆಯಲ್ಲಿ ಮುಖ್ಯ ಅತಿಥಿಗಳಾಗಿ ಬಾಪೂಜಿ ಹೈಟೆಕ್ ಆಸ್ಪತ್ರೆಯ ಸಿಎಂಒ ಡಾ. ಕಲವೀರಪ್ಪ ಗಡಾದ ಆಗಮಿಸಿದ್ದರು.

ಕಾಲೇಜು ಆಡಳಿತಾಧಿಕಾರಿ ಎಂ.ಎನ್. ಮಹೇಶ್, ಡಾ. ಕಲವೀರಪ್ಪ ಗಡಾದ ಅವರು ಸಲ್ಲಿಸಿರುವ ವೈದ್ಯಕೀಯ ಸೇವೆ ಪರಿಗಣಿಸಿ, ಕಾಯಕ ಯೋಗಿ ಬಿರುದನ್ನು ನೀಡಿ ಗೌರವಿಸಿದರು. ಕಾಲೇಜು ಸಂಯೋಜಕ ಸತೀಶ್ ವಿದ್ಯಾರ್ಥಿಗಳ ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು.

# ಧೂಳೆಹೊಳೆ : ಗಾಂಧೀಜಿ-ಶಾಸ್ತ್ರೀಜಿ ಜಯಂತಿ




ಮಲೇಬೆನ್ನೂರು, ಅ.2- ಧೂಳೆಹೊಳೆ ಗ್ರಾಮದ ಜಿಎಂಸಿಜಿ ಪ್ರೌಢಶಾಲೆಯಲ್ಲಿ ಮಹಾತ್ಮ ಗಾಂಧಿ ಮತ್ತು ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಶಾಲಾ ಸುಧಾರಣಾ ಸಮಿತಿ ಉಪಾಧ್ಯಕ್ಷ ಎನ್.ಜಿ. ನಾಗನಗೌಡ್ರು ಮಾತನಾಡಿ, ಜಯಂತಿಗಳನ್ನು ಆಚರಿಸಿದರಷ್ಟೇ ಸಾಲದು, ಅವರ ಆದರ್ಶಗಳನ್ನು ಪಾಲಿಸಬೇಕು. ಮಹಾತ್ಮ ಗಾಂಧಿ ಸರಳ, ಸಜ್ಜನಿಕೆಯ ಸಾಕಾರಮೂರ್ತಿಯಾಗಿದ್ದರು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ನಿವೃತ್ತ ಶಿಕ್ಷಕ ಎಸ್. ನಿಜಲಿಂಗಪ್ಪ, ಜಿಲ್ಲಾ ಉತ್ತಮ ಶಿಕ್ಷಕಿ ಪ್ರಶಸ್ತಿ ಪಡೆದ ಸ.ಹಿ.ಪ್ರಾ. ಶಾಲೆ ಧೂಳೆಹೊಳೆಯ ಟಿ.ವಿ. ಹೇಮಾ ಮತ್ತು ಉತ್ತಮ ನಲಿಕಲಿ ಶಿಕ್ಷಕಿ ಪ್ರಶಸ್ತಿ ಪಡೆದ ಲೈಖಾಬಾನು, ಉತ್ತಮ ನಲಿಕಲಿ ಶಿಕ್ಷಕ ಪ್ರಶಸ್ತಿ ಪಡೆದ ನಂದಿಗಾವಿ ಸ.ಹಿ.ಪ್ರಾ. ಶಾಲೆಯ ಶಿಕ್ಷಕ ಕೆ.ಎಂ.ರುದ್ರಪ್ಪ ಹಾಗೂ ತಾಲ್ಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯದರ್ಶಿ ಶರಣ್ ಕುಮಾರ್ ಹೆಗಡೆ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಹುಲುಗಿನಹೊಳೆ ಎಂ. ಚಂದ್ರಯ್ಯ, ತಾ.ಪಂ. ಮಾಜಿ ಅಧ್ಯಕ್ಷ ಕೆ.ಜಿ. ನಿಜಲಿಂಗಪ್ಪ, ಶಾಲಾ ಸುಧಾರಣಾ ಸಮಿತಿ ಸದಸ್ಯರಾದ ಹೊಳೆಸಿರಿಗೆರೆಯ ಎಂ.ಜಿ. ಪರಮೇಶ್ವರ ಗೌಡ, ಕಮಲಾಪುರದ ಕೆ. ಈಶ್ವರಪ್ಪ, ನಿವೃತ್ತ ಶಿಕ್ಷಕ ಡಿ.ಪಿ. ವಿರುಪಾಕ್ಷಗೌಡ, ಮುಖ್ಯ ಶಿಕ್ಷಕ ಕೆ.ಎಂ. ಗುರುಬಸಯ್ಯ, ಬಸವರಾಜಪ್ಪ, ಜಿ. ನೀಲನಗೌಡ, ರಶ್ಮಿ ಸಂತೋಷ್ ಕುಮಾರ್, ಜಿ. ಮಲ್ಲಪ್ಪ, ಡಿ.ಹೆಚ್. ವೀರಭದ್ರಯ್ಯ, ಪ್ರಾಥಮಿಕ ಶಾಲೆಯ ಶಿಕ್ಷಕರಾದ ಉಮೇಶಯ್ಯ, ಕೆ. ಮಂಗಳ, ಬಿ.ಜಿ.ರಶ್ಮಿ ಉಪಸ್ಥಿತರಿದ್ದರು.

### ಲಿಂಗೈಕ್ಯ ಶ್ರೀಯುತ ಜಿ. ವೇದಮೂರ್ತ್ಯಪ್ಪ ಅವರ ಪ್ರಥಮ ಪುಣ್ಯ ಸ್ಮರಣೆಯ ನುಡಿ ನಮನ



ಅರಿವಿನ ಕುರುಹು ಗುರುವಾಗಿ ಬರುವಾಗ, ಮತ್ತೆ ಮಾತಾಡುವ ಸಮಯ ನಮಗರಿವಿಲ್ಲದೇನೇ ಮತ್ತೆ ಹೊತ್ತು ಬಿತ್ತರಿಸಿ ಹೂವಂತೆ ಅರಳಿ ನಿಂತಿರುವಾಗ, ಮರೆಯಾದ ಶಕ್ತಿ ಮರಳಿ ಮೈದುಂಬುವ ಗಳಿಗೆ. ಅದುವೇ ಅಪ್ಪಾಜಿಯ ಪುಣ್ಯ ಸ್ಮರಣೆಯ ಈ ಗಳಿಗೆ.

ಮಾತಾಡುವವರ ಕುರಿತು ಮಾತಾಡುವುದರಲ್ಲೇನಿದೆಯೋ ನಾವರಿಯೆವು.. ಆದರೆ ಮಾತಿಲ್ಲದೆ ಮೌನದಲ್ಲೇ ಎಲ್ಲಾ ಮಾತಾಡಿದವರ ಕುರಿತಾಡಲು, ತರುವ ಶಬ್ದಗಳಾದರೂ ಎಲ್ಲಿ ? ಬಹುಶಃ ಪದಕೋಶಗಳಲ್ಲಂತೂ ಅಲ್ಲ, ಮತ್ತೆಲ್ಲಿ ಅಂತ ಹುಡುಕಾಡುವ ಮುನ್ನ, ತೆರೆದ ಅಂತರಂಗದ ಪ್ರತಿ ಧಮನಿಯೊಂದರೊಂದೊಂದು ದನಿಯೆಲ್ಲವೂ ಬರೀ ಶ್ರೀಯುತರೇ ಭಾವಸಂಪುಟವಾಗಿರುವಾಗ, ಅದರಲ್ಲಂದೊಂದು ಅಕ್ಷರಗಳನ್ನೇ ಹೆಕ್ಕಿ ಮುಕ್ಕುವಾ ಸಮಯಕ್ಕೆ, ಭವದಿಂದ ಜಾರಿ ಯೋಗ ಶಿಖರವ ಏರಿ ಶಿವ ಸಮಾಧಿ ಸಿಂಹಾಸನದಿ ವಿರಾಜಮಾನನಾಗಿಹ ವೇದಶ್ರೀಯವರಿಗೊಂದು ಇದೊಂದು ನಮ್ಮೆದೆಯಾಳದ ಪ್ರೀತಿಯ ನುಡಿ ನಮನ.

ಕಷ್ಟಗಳನ್ನುಂಡವರು ನೀವು ಆದರೆ ನಿಮ್ಮ ಸಹವಾಸಿಗಳಿಗೆಲ್ಲ ಸಿಹಿಯನ್ನಷ್ಟೇ ಹಂಚಿ ಅಳಿದರೂ ಉಳಿದವರು ನೀವು. ಶೂನ್ಯದಿಂದ ಅಸಂಖ್ಯ ಮೊತ್ತವಾಗಿ ಕೊನೆಗೆ ಆ ಭವ ಲೆಕ್ಕಾಚಾರಗಳ ಎಲ್ಲಾ ಅಂಕಿ ಸಂಖ್ಯೆಗಳ ಕಳೆದು ಪುನಃ ಶೂನ್ಯವಾಗಿಯೇ ಉಳಿದ ನಿರಹಂಕಾರ, ನಿರಾಡಂಬರದ ಪರಮಯೋಗಿಯಾದವರು ನೀವು. ಎಲ್ಲವನು ಕೊಟ್ಟು ಏನೂ ಕೊಡದಂತವರಂತೆ ನಿಂತವರು ನೀವು.


ಎಷ್ಟು ಕೊಟ್ಟರೂ ತೀರದ ದಾಹವ ತಣಿಸಿದ ನಿಜ ಜಗದೊಡವೆಯೆಂದರೆ ನೀವಲ್ಲದೆ ಮತ್ತಿನ್ನಾರು ? ತೊರೆದು ಜೀವಿಸುವ ಹರ ಕೂಡ ಹೊಟ್ಟೆಗೆ ಕಿಚ್ಚು ಹತ್ತಿಸಿಕೊಳ್ಳುವನೇನೋ ? ಕಾರಣ ತಿರುಗಿ ಬಾರದ ಮುಕ್ತಿಯ ಬಾಗಿಲು ತೆರೆದರೂ ಮಮಕಾರದ ಜವಾಬ್ದಾರಿಗೆ ಹಾಗೂ ನಮ್ಮೆಡೆಗೆ ತಿರುಗಿ ನಿಂತಿರುವ ನಿನ್ನ ಕರುಳ ಪ್ರೇಮದ ಕರೆಗೆ.

ಮೂರ್ತ್ಯಪ್ಪ ನೀವೊಂದು ಪ್ರೇಮ ಸಾಗರದೊಳಾಳದ ಅವ್ಯಕ್ತ, ಅವಿಚ್ಛಿನ್ನ ಮುತ್ತು, ಜೊತೆಗೆ ಸ್ನೇಹ ಸಾಮ್ರಾಜ್ಯದ ಬತ್ತಲಾರದ ಗಂಗೆ ನೀವು, ನಿಮಗೆಂದೆಂದಿಗೂ ನಮ್ಮೆದೆಯ ಮಾತೊಂದೆ.

ನಿಮ್ಮ ಆದರ್ಶಗಳ ಸಂಸ್ಕಾರ ನಮ್ಮೊಳಗಿರುವವರೆಗೂ ನೀವೊಂದು ಅಜರಾಮರ ಅನವರತ ಅನುಸ್ಮರಣೀಯ.

**ಬಂಧು ವರ್ಗ ಹಾಗೂ ಸ್ನೇಹ ಬಳಗ**

# ಗಾಂಧಿ ಜಯಂತಿಗೆ ಹಾಜರಾಗದ ಅಧಿಕಾರಿ ವರ್ಗಕ್ಕೆ ನೋಟಿಸ್




## ಅಧಿಕಾರಿ-ಸಿಬ್ಬಂದಿ ಕಡ್ಡಾಯ ಹಾಜರಾತಿಗೆ ಹರಿಹರದ ಶಾಸಕ ರಾಮಪ್ಪ ಸೂಚನೆ

ಹರಿಹರ, ಅ.2- ಗಾಂಧಿ ಜಯಂತಿ ಸಮಾರಂಭದಲ್ಲಿ ಪಾಲ್ಗೊಳ್ಳದೇ ಇರುವ ಅಧಿಕಾರಿಗಳಿಗೆ ನೋಟಿಸ್ ನೀಡಿ, ಮುಂದೆ ಸರ್ಕಾರಿ ಸಮಾರಂಭದಲ್ಲಿ ಎಲ್ಲಾ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗದವರು ತಪ್ಪದೇ ಹಾಜರಾಗಲು ತಿಳಿಸುವಂತೆ ಶಾಸಕ ಎಸ್. ರಾಮಪ್ಪ ತಹಶೀಲ್ದಾರ್ ಅವರಿಗೆ ನಿರ್ದೇಶನ ನೀಡಿದ್ದಾರೆ.

ತಾಲ್ಲೂಕು ಆಡಳಿತದ ವತಿಯಿಂದ ಗುರು ಭವನದಲ್ಲಿ ನಡೆದ ಗಾಂಧಿ ಜಯಂತಿ ಸಮಾರಂಭದಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧಿಯವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಅವರು ಮಾತನಾಡಿದರು.

ದೇಶಕ್ಕಾಗಿ ತಮ್ಮ ಪ್ರಾಣವನ್ನೇ ಅರ್ಪಿಸಿದ ರಾಷ್ಟ್ರಪಿತ ಮಹಾತ್ಮ ಗಾಂಧಿಯವರ ಜನ್ಮ ದಿನಾಚರಣೆಯಲ್ಲಿ ಅಧಿಕಾರಿ ವರ್ಗದವರು ಪಾಲ್ಗೊಳ್ಳದೇ ಇರುವುದು ಅಗೌರವ ತೋರಿಸಿದಂತೆ. ಅವರ ಶ್ರಮದ ಫಲವಾಗಿ ಇಂದು ನಾವು ಸ್ವಾತಂತ್ರ್ಯ ಪಡೆದಿದ್ದು, ಸುಭದ್ರ ಹಾಗೂ ಶಾಂತಿಯುತ ಜೀವನ ನಡೆಸುತ್ತಿದ್ದೇವೆ. ಅಂತಹ ಮಹಾನ್ ವ್ಯಕ್ತಿಗಳ ಸ್ಮರಣೆ ಮಾಡುವ ಸಮಾರಂಭದಲ್ಲಿ ಜನರು ಮತ್ತು ಅಧಿಕಾರಿಗಳು ಪಾಲ್ಗೊಳ್ಳದೇ ಇರುವುದು ದುರದೃಷ್ಟಕರ ಎಂದರು.

ಸಭೆಯಲ್ಲಿ ಹೆಚ್ಚು ಮಾತನಾಡದೆ ಮತ್ತು ಸಮಾರಂಭದಲ್ಲಿ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಬಗ್ಗೆ ಭಾಷಣದಲ್ಲಿ ಏನೂ ಹೇಳದೆ ಭಾಷಣ ಮುಗಿಸುತ್ತಿದ್ದಾಗ ಸಭಿಕರು ಲಾಲ್ ಬಹದ್ದೂರ್ ಶಾಸ್ತ್ರಿ ಬಗ್ಗೆ ಮಾತನಾಡಿ ಎಂದು ಗಮನಕ್ಕೆ ತಂದಾಗ ಅವರು ದೇಶದ ಪ್ರಧಾನಿಯಾಗಿದ್ದ ಸಮಯದಲ್ಲಿ ದೇಶದ ಒಳಿತಿಗಾಗಿ ಶ್ರಮಿಸಿದ ಮಹಾನ್ ವ್ಯಕ್ತಿಗಳು ಎಂದು ಹೇಳಿ ಸಮಾರಂಭದಲ್ಲಿ ಜನರು ಮತ್ತು ಅಧಿಕಾರಿಗಳು ಇರದೇ ಇರುವುದರಿಂದ ಅನ್ಯ ಕಾರ್ಯಕ್ರಮ ಇದೆ ಎಂದು ಹೇಳಿ ತೆರಳಿದರು.

ತಹಶೀಲ್ದಾರ್ ಕೆ.ಬಿ. ರಾಮಚಂದ್ರಪ್ಪ ಮಾತನಾಡಿ, ಗಾಂಧೀಜಿಯವರ ತತ್ವ, ಆದರ್ಶಗಳನ್ನು ಮೆಚ್ಚಿ, ಗಾಂಧೀಜಿ ಹುಟ್ಟಿದ ದಿನವನ್ನು ವಿಶ್ವ ಸಂಸ್ಥೆ ಅಂತರರಾಷ್ಟ್ರೀಯ ಅಹಿಂಸಾ ದಿನವನ್ನಾಗಿ ಆಚರಣೆ ಮಾಡುತ್ತದೆ ಎಂದರೆ ಗಾಂಧಿಯವರ ಹೋರಾಟದ ಗಟ್ಟಿತನ ಎಷ್ಟಿತ್ತು ಎಂಬುದನ್ನು ತೋರಿಸುತ್ತದೆ. ಅವರ ಚಿಂತನೆಗಳು ಮತ್ತು ತತ್ವಾದರ್ಶಗಳು ಇಂದಿನ ಯುವಕರಿಗೆ ದಾರಿದೀಪವಾಗಿವೆ.

ಹಿರಿಯ ಸಾಹಿತಿ ಪ್ರೊ. ಹೆಚ್.ಎ. ಭಿಕ್ಷಾವರ್ತಿಮಠ ಮಾತನಾಡಿ, ಗಾಂಧೀಜಿ ಬ್ರಿಟಿಷ್ ಸರ್ಕಾರದ ವಿರುದ್ಧ ಭಾರತದ ಬಿಟ್ಟು ತೊಲಗಿ ಎಂದು ಉಪವಾಸ ಸತ್ಯಾಗ್ರಹ ಆರಂಭಿಸಿದರು. ನಂತರದಲ್ಲಿ ದಂಡಿ ಯಾತ್ರೆ, ಅಸಹಕಾರ ಚಳವಳಿ ನಡೆಸಿದರು. ಯಾವುದಕ್ಕೂ ಎದೆಗುಂದದೆ ತಮ್ಮ ಹೋರಾಟವನ್ನು ಮಾಡಿದ ಫಲವಾಗಿ ಬ್ರಿಟಿಷರನ್ನು ದೇಶದಿಂದ ತೊಲಗಿಸಲು ಸಾಧ್ಯವಾಯಿತು ಎಂದು ಹೇಳಿದರು.

ಈ ಸಂದರ್ಭದಲ್ಲಿ ಎಪಿಎಂಸಿ ಅಧ್ಯಕ್ಷ ಮಂಜುನಾಥ್ ಪಾಟೀಲ್, ನಗರಸಭೆ ಅಧ್ಯಕ್ಷೆ ರತ್ನ ಡಿ. ಉಜ್ಜೇಶ್, ಪೌರಾಯುಕ್ತೆ ಎಸ್. ಲಕ್ಷ್ಮಿ, ಸಿಪಿಐ ಸತೀಶ್ ಕುಮಾರ್, ಇಓ ಗಂಗಾಧರನ್, ಬಿಇಓ ಸಿದ್ದಪ್ಪ, ನಗರಸಭೆ ಸದಸ್ಯರಾದ ಪಕ್ಕಿರಮ್ಮ, ರತ್ನಮ್ಮ ಉಷಾ ಮಂಜುನಾಥ್, ಲೋಕೋಪಯೋಗಿ ಇಲಾಖೆಯ ಶಿವಮೂರ್ತಿ, ಡಾ. ಚಂದ್ರಮೋಹನ್, ಸಿಡಿಪಿಓ ನಿರ್ಮಲಾ, ಪರ್ವಿನ್ ಬಾನು, ಸುಜಾತ ಇನ್ನಿತರರಿದ್ದರು.

# ಸಿಡಿಲಿಗೆ ಮೂರು ಕುರಿಗಳು ಬಲಿ



**ಹರಪನಹಳ್ಳಿ**

ಹರಪನಹಳ್ಳಿ, ಅ.2- ತಾಲ್ಲೂಕಿನ ಅರಸೀಕೆರೆ ಸಮೀಪದ ಕೆರೆಗುಡಿಹಳ್ಳಿ ಗ್ರಾಮದ ಬಸವರಾಜಪ್ಪ ತಂದೆ ಬಿಸಟೆಪ್ಪ ಎಂಬುವರಿಗೆ ಸೇರಿದ ಕಣದಲ್ಲಿ ಇದ್ದ ಮೂರು ಕುರಿಗಳು ಸಿಡಿಲು ಬಡಿದು ಸಾವನ್ನಪ್ಪಿವೆ.

# ಅನುದಾನಿತ ಶಾಲಾ ಶಿಕ್ಷಕರ ಸಮಸ್ಯೆ ಪರಿಹರಿಸಲು ಆಗ್ರಹ

**ಮಲೇಬೆನ್ನೂರು**




ಮಲೇಬೆನ್ನೂರು, ಅ.2- ರಾಜ್ಯದ ಅನುದಾನಿತ ಶಾಲಾ ಶಿಕ್ಷಕರು ತೊಂದರೆಗೆ ಸಿಲುಕಿದ್ದು ವೇತನ, ಪಿಂಚಣಿ, ರಜೆ ಇನ್ನಿತರೆ ಸಮಸ್ಯೆ ಪರಿಹರಿಸುವಂತೆ ರಾಜ್ಯ ಅನುದಾನಿತ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಹರಿಹರ ತಾಲ್ಲೂಕು ಘಟಕದ ಅಧ್ಯಕ್ಷ ದಂಡಿ ತಿಪ್ಪೇಸ್ವಾಮಿ ಸರ್ಕಾರವನ್ನು ಒತ್ತಾಯಿಸಿದರು.

ಶನಿವಾರ ಪಟ್ಟಣದ ಎಸ್‌ಬಿಕೆಎಂ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಸಂಘದ ತಾಲ್ಲೂಕು ಘಟಕದ ಸರ್ವ ಸದಸ್ಯರ ಸಭೆಗೂ ಮುನ್ನ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಅವರು ಮಾತನಾಡಿದರು.

ಶಾಲೆಗಳಿಗೆ ನೀಡುವ ಅನುದಾನ, ಮಕ್ಕಳಿಗೆ ಸಮವಸ್ತ್ರ, ಶೂ, ಶಿಕ್ಷಕರಿಗೆ ವಿಷಯಾಧಾರಿತ ತರಬೇತಿಯನ್ನು, ಅನುದಾನಿತ ಶಾಲಾ ಶಿಕ್ಷಕರಿಗೂ ನೀಡುವಂತೆ ಮನವಿ ಮಾಡಿದರು.

ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಎಸ್.ಎಂ. ಮಡಿವಾಳರ ಮಾತನಾಡಿ ವೇತನ, ಬಡ್ತಿ, ಆರೋಗ್ಯ ಭಾಗ್ಯ ಯೋಜನೆ, ನಗದು ರಹಿತ ಚಿಕಿತ್ಸೆ ವಿಸ್ತರಣೆ ಸಮಸ್ಯೆ ನೆನೆಗುದಿಗೆ ಬಿದ್ದಿದೆ. ಕೋವಿಡ್ ವೇಳೆ ಕರ್ತವ್ಯ ನಿರ್ವಹಿಸಿದ್ದಕ್ಕೆ, ಗಳಿಕೆ ರಜೆ ಮಂಜೂರು ಮಾಡುವಂತೆ ಕೋರಿದರು.

ಪಿಂಚಣಿ ವಂಚಿತ ಅನುದಾನಿತ ಶಾಲಾ ಶಿಕ್ಷಕರ ಸಂಘದ ರಾಜ್ಯ ಕಾರ್ಯದರ್ಶಿ ಕೆ.ಎನ್. ಹಳ್ಳಿ ನಾಗೇಂದ್ರಪ್ಪ ಮಾತನಾಡಿ, ಶಾಸಕ ಬಸವರಾಜ್ ಹೊರಟ್ಟಿ ನೇತೃತ್ವದ ಸಮಿತಿಯು ಅನುದಾನಿತ ಶಾಲಾ ಶಿಕ್ಷಕರ ಸಮಸ್ಯೆ ಪರಿಹ ರಿಸಲು ಸರ್ಕಾರಕ್ಕೆ ನೀಡಿದ ಶಿಫಾರಸ್ಸು ಗಳನ್ನು ಯಥಾವತ್ತಾಗಿ ಜಾರಿ ಮಾಡಬೇಕು. ಮಹಿಳಾ ಶಿಕ್ಷಕಿಯರಿಗೆ ಶಿಶು ಪಾಲನೆ ರಜೆ ಮಂಜೂರಾತಿ ಮಾಡಬೇಕು, 1983ರ ಶಿಕ್ಷಣ ಮಸೂದೆ ತಿದ್ದುಪಡಿ ಮಾಡಿ, ಅನುದಾನಿತ ಶಾಲೆಗಳ ಶಿಕ್ಷಕರ ಸಮಸ್ಯೆ ಪರಿಹರಿಸಲು ಸರ್ಕಾರ, ಜನ ಪ್ರತಿನಿಧಿಗಳು ಸಹಕರಿಸಿ ಎಂದರು.

ಶಿಕ್ಷಕರಾದ ಡಿ.ಕೆ. ಕರಿಬಸಪ್ಪ, ಕೆ. ಚಂದ್ರಶೇಖರಪ್ಪ, ಎಸ್.ಡಿ. ಪುರುಷೋತ್ತಮ, ಹೆಚ್. ಆನಂದಪ್ಪ, ಕಡೇಮನಿ ಹನುಮಂತಪ್ಪ, ಶಿರಸಾಚಾರಿ, ಅಶೋಕ್ ಅರಳಿಕಟ್ಟೆ, ಎಸ್. ಶಿವಕುಮಾರ್, ಜಿ. ಪರಮೇಶ್ವರಪ್ಪ, ಪುಷ್ಪಲತಾ, ಕೆ. ಬಸವರಾಜ್. ಮಾಲತೇಶ್ ಹಾಜರಿದ್ದರು.

# ಭರಮಸಾಗರ: ಇಂದು ಅಭಿನಂದನಾ ಸಮಾರಂಭ

ವಿದ್ಯಾವಿಭೂಷಣ ಅಂತರರಾಷ್ಟ್ರೀಯ ಪ್ರಶಸ್ತಿಗೆ ಭಾಜನರಾಗಿರುವ ಸಾಲಿಗ್ರಾಮ ಗಣೇಶ್ ಶೆಣೈ ಅವರಿಗೆ ಪವಮಾನ ಪ್ರತಿಷ್ಠಾನದಿಂದ ಇಂದು ಮಧ್ಯಾಹ್ನ 4 ಕ್ಕೆ ವಾಣಿ ನಿವಾಸದಲ್ಲಿ ಅಭಿನಂದನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಪ್ರತಿಷ್ಠಾನದ ಸಂಸ್ಥಾಪಕ ಬಿ.ಜೆ. ಅನಂತಪದ್ಮನಾಭ ರಾವ್ ತಿಳಿಸಿದ್ದಾರೆ. ಭರಮಸಾಗರ ಗ್ರಾ.ಪಂ. ಅಧ್ಯಕ್ಷರಾದ ಪುಷ್ಪಲತಾ ಜಗದೀಶ್ ಅಧ್ಯಕ್ಷತೆ ವಹಿಸಲಿದ್ದು, ಸಮಾಜ ಸೇವಕರಾದ ಬಿ. ಲೋಲಾಕ್ಷಮ್ಮ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದಾರೆ ಎಂದು ಪ್ರತಿಷ್ಠಾನದ ಪ್ರಧಾನ ಕಾರ್ಯದರ್ಶಿ ವಿಜಯಲಕ್ಷ್ಮಿ ಅನಂತಪದ್ಮನಾಭ ರಾವ್ ತಿಳಿಸಿದ್ದಾರೆ.

ಮುಖ್ಯ ಅತಿಥಿಗಳಾಗಿ ಸಾಮಾಜಿಕ ಕಾಳಜಿ ಹೊಂದಿರುವ ಸುಮಾ ಟಿ.ಆರ್. ಚನ್ನೇಶ್, ಬಣಜಿಗ ಸಮಾಜದ ಅಧ್ಯಕ್ಷ ಬಸೆಟ್ರು ಬಿ. ಬಸವರಾಜಪ್ಪ ಆಗಮಿಸಲಿದ್ದಾರೆ ಎಂದು ಗೌರವಾಧ್ಯಕ್ಷೆ ಜಯಮ್ಮ ಜಯರಾವ್ ತಿಳಿಸಿದ್ದಾರೆ.


## ತೃತೀಯ ವರ್ಷದ ಪುಣ್ಯಸ್ಮರಣೆ



**ಶ್ರೀಮತಿ ಪ್ರೇಮ ಭತ್ತದ್**


ಲಿಂಗೈಕ್ಯ : 3-10-2018 (ನಿವೃತ್ತ ಉಪನ್ಯಾಸಕರು ಎ.ವಿ.ಕೆ. ಕಾಲೇಜ್)

ನೀವು ನಮ್ಮನ್ನಗಲಿ ಇಂದಿಗೆ ಮೂರು ವರ್ಷಗಳಾದವು.
ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ ಮುನ್ನಡೆಯುತ್ತಾ
ಸದಾ ನಿಮ್ಮ ಸ್ಮರಣೆಯಲ್ಲಿರುವ,

ಇಂತಿ ದುಃಖತಪ್ತರು :
ಪತಿ : **ಸುರೇಶ್ ವೈ. ಅಥಣಿಕರ್** (ವಕೀಲರು)
ಮಕ್ಕಳು, ಅಳಿಯಂದಿರು ಮತ್ತು ಮೊಮ್ಮಕ್ಕಳು, ದಾವಣಗೆರೆ. 93410 14016



## ಸವಿನೆನಪು



ದಾವಣಗೆರೆ ನಗರದ ಪಿ.ಜೆ. ಬಡಾವಣೆ ನಿವಾಸಿ
ಶ್ರೀ ವಿನಾಯಕ ರೈಸ್ ಮಿಲ್ ಮಾಲೀಕರೂ,
ಗಣ್ಯ ವರ್ತಕರೂ, ಕೊಡುಗೈ ದಾನಿಗಳೂ ಆದ

**ಶ್ರೀ ಜಿ. ವೇದಮೂರ್ತಿ (ಮೂರ್ತ್ಯೆಪ್ಪ)**

ನೀವು ನಮ್ಮೆಲ್ಲರನ್ನಗಲಿ ಇಂದಿಗೆ ಒಂದು ವರ್ಷವಾಯಿತು.
ನೀವು ಹಾಕಿಕೊಟ್ಟ ಮಾರ್ಗದರ್ಶನದಲ್ಲಿ
ಮುನ್ನಡೆಯುತ್ತ ಸದಾ ನಿಮ್ಮ ಸ್ಮರಣೆಯಲ್ಲಿರುವ
ಭಗವಂತನು ನಿಮ್ಮ ಆತ್ಮಕ್ಕೆ
ಶಾಂತಿ ನೀಡಲೆಂದು ಪ್ರಾರ್ಥಿಸುವ.


✦ ರಾಜು ಏಜೆನ್ಸೀಸ್ (ರಾಜು)
✦ ಕುಮಾರಸ್ವಾಮಿ ✦ ರುದ್ರಮುನಿ

# ಜನತಾ ವಾಣಿ

ಸಂಪಾದಕರು :
ವಿಕಾಸ್ ಷಡಾಕ್ಷರಪ್ಪ ಮೆಳ್ಳೇಕಟ್ಟೆ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಭಾನುವಾರ, ಅಕ್ಟೋಬರ್ 03, 2021



ದಾವಣಗೆರೆಯ ಶ್ರೀರಾಮನಗರ ಬಳಿ ನೂತನವಾಗಿ ನಿರ್ಮಾಣಗೊಂಡಿರುವ ಗಾಂಧಿ ಭವನದಲ್ಲಿ ಶನಿವಾರ ಮಹಾತ್ಮಾ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜಯಂತಿ ಆಚರಣೆ ಸಮಾರಂಭ ಉದ್ಘಾಟಿಸಿ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ್ ಮಾತನಾಡಿದರು.

## ಅಧಿಕಾರದಲ್ಲಿದ್ದಾಗ ನಿರೀಕ್ಷೆ ಮೀರಿ ಕೆಲಸ ಮಾಡಿದ್ದೇವೆ: ಎಸ್ಸೆಸ್ಸೆಂ

### ಬೇತೂರು ಗ್ರಾಮದಲ್ಲಿ ಗ್ರಾಮ ಸ್ವರಾಜ್ ಕಾರ್ಯಕ್ರಮಕ್ಕೆ ಚಾಲನೆ

ದಾವಣಗೆರೆ, ಅ. 2- ನಿಮ್ಮ ಪ್ರೋತ್ಸಾಹ ಸಹಕಾರ ಎಲ್ಲಿಯವರೆಗೂ ಇರುತ್ತದೋ ಅಲ್ಲಿಯವರೆಗೂ ನಮ್ಮಿಂದ ಅಭಿವೃದ್ಧಿ ಕಾರ್ಯಗಳು ನಡೆಯಲಿವೆ ಎಂದು ಮಾಜಿ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಹೇಳಿದರು.

ದಾವಣಗೆರೆ ಉತ್ತರ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಗ್ರಾಮಾಂತರ ಘಟಕದ ವತಿಯಿಂದ ಬೇತೂರು ಗ್ರಾಮದ ಅಂಬೇಡ್ಕರ್ ಸಮುದಾಯ ಭವನದಲ್ಲಿ ಏರ್ಪಡಿಸಿದ್ದ ಗ್ರಾಮ ಸ್ವರಾಜ್ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ನೀವು ಬೆಂಬಲ ಕೊಟ್ಟು ಅಧಿಕಾರಕ್ಕೆ ಬಂದಾಗ ನಿಮ್ಮ ನಿರೀಕ್ಷೆಗೂ ಮೀರಿ ಅನೇಕ ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದೇವೆ. ಇಂದು ಆ ಕೆಲಸಗಳನ್ನು ನಿರ್ವಹಣೆ ಮಾಡುವಲ್ಲಿ ಆಡಳಿತಸ್ಥರಿಗೆ ಆಗುತ್ತಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಅಧ್ಯಕ್ಷತೆ ವಹಿಸಿದ್ದ ಗ್ರಾಮಾಂತರ ಘಟಕದ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ.ಕೆ.ಪರಶುರಾಮ್ ಮಾತನಾಡಿ, ಎಸ್.ಎಸ್.ಮಲ್ಲಿಕಾರ್ಜುನ್ ಅವರು ಮಂತ್ರಿಗಳಾಗಿದ್ದ ವೇಳೆ ಜನಸಾಮಾನ್ಯರಿಗೆ ತೊಂದರೆ ಆಗದ ರೀತಿ ಆಡಳಿತ ಸಿಗುತ್ತಿತ್ತು. ಆದರೆ ಇಂದು ಹಣವಿಲ್ಲದೇ (6ನೇ ಪುಟಕ್ಕೆ)



## ಅಹಿಂಸಾ ಮಾರ್ಗವೇ ಶ್ರೇಷ್ಠವೆಂದ ಗಾಂಧೀಜಿ

### ಗಾಂಧೀಜಿ ಹಾಗೂ ಶಾಸ್ತ್ರೀಜಿ ಜಯಂತಿಯಲ್ಲಿ ಸಚಿವ ಭೈರತಿ ಬಸವರಾಜ್

ದಾವಣಗೆರೆ ಅ.2- ಭಾರತ ಬ್ರಿಟೀಷರ ದಾಸ್ಯದಿಂದ ಬಿಡುಗಡೆ ಹೊಂದಿ, ಸ್ವಾತಂತ್ರ್ಯ ಪಡೆಯುವಂತಾಗಲು ಅಹಿಂಸಾ ಮಾರ್ಗವೇ ಶ್ರೇಷ್ಠವೆಂದು ನಂಬಿ, ಅದರಂತೆಯೇ ಕಾರ್ಯ ರೂಪಕ್ಕೆ ತಂದು ಸ್ವಾತಂತ್ರ್ಯ ದೊರಕಿಸಿಕೊಟ್ಟವರು ಮಹಾತ್ಮಾಗಾಂಧೀಜಿ ಎಂದು ನಗರಾಭಿವೃದ್ಧಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ. ಬಸವರಾಜ್ ಹೇಳಿದರು.

ನಗರದ ಶ್ರೀರಾಮನಗರ ಬಳಿ ನೂತನವಾಗಿ ನಿರ್ಮಾಣಗೊಂಡಿರುವ ಗಾಂಧಿ ಭವನದಲ್ಲಿ ಶನಿವಾರ ಜಿಲ್ಲಾಡಳಿತದ ವತಿಯಿಂದ ಏರ್ಪಡಿಸಲಾದ ಮಹಾತ್ಮಾ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜಯಂತಿ ಆಚರಣೆ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಗಾಂಧೀಜಿಯವರು ಅಹಿಂಸಾ ತತ್ವವನ್ನು ಅನುಸರಿಸುವುದೇ ಶ್ರೇಷ್ಠ ಮಾರ್ಗವೆಂದು ನಂಬಿ, ಅದನ್ನು ಮೈಗೂಡಿಸಿಕೊಂಡು, ಅದರಂತೆಯೇ ನಡೆದು ನಮಗೆ ಸ್ವಾತಂತ್ರ್ಯ ದೊರಕಿಸಿಕೊಟ್ಟರು. ಇಂತಹ ಮಹಾನ್ ಚೇತನವನ್ನು ಸ್ಮರಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ ಎಂದರು.

ದಾವಣಗೆರೆ ಜಿಲ್ಲೆಗೂ ಗಾಂಧೀಜಿಯವರ ನಂಟಿದ್ದು, 1934 ರಲ್ಲಿ ದಾವಣಗೆರೆಗೆ ಗಾಂಧೀಜಿಯವರು ಬಂದಿದ್ದು, ಇಲ್ಲಿನ ಸ್ವಾತಂತ್ರ್ಯ ಹೋರಾಟಗಾರರನ್ನು ಹುರಿದುಂಬಿಸಿದ್ದು, ಕಾಸಲ್ ಶ್ರೀನಿವಾಸ ಶೆಟ್ಟಿ ಮತ್ತು ಚನ್ನಗಿರಿ ರಂಗಪ್ಪ ಅವರ ನೆರವಿನಿಂದ ಹರಿಜನ ವಿದ್ಯಾರ್ಥಿಗಳಿಗಾಗಿ ಇಲ್ಲಿ ಹಾಸ್ಟೆಲ್ ನಿರ್ಮಾಣಕ್ಕೆ ಕಾರಣೀಭೂತರಾದುದನ್ನು ಇದೇ ಸಂದರ್ಭದಲ್ಲಿ ಸಚಿವರು ಸ್ಮರಿಸಿದರು.

ದೇಶದ ಅಭಿವೃದ್ಧಿಗೆ ಶಾಸ್ತ್ರೀಜಿ ಅವರ ಕೊಡುಗೆ ಅಪಾರವಾಗಿದ್ದು, ಅವರು ದೇಶಕ್ಕೆ ನೀಡಿದ 'ಜೈ ಜವಾನ್, ಜೈ ಕಿಸಾನ್' ಕರೆ ದೇಶವನ್ನು ಸ್ವಾವಲಂಬಿಯಾಗಿಸಲು ಪ್ರೇರಣೆಯಾಯಿತು. ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಧುಮುಕಿದ್ದ ಶಾಸ್ತ್ರೀಜಿಯವರು, ಅಸಹಕಾರ ಚಳುವಳಿಯಲ್ಲಿ ತೊಡಗಿಸಿಕೊಂಡಿದ್ದರು. ಅವರ ಸರಳತೆ ಹಾಗೂ ಸಜ್ಜನಿಕೆ ನಮ್ಮೆಲ್ಲರಿಗೂ ಆದರ್ಶಪ್ರಾಯವಾಗಿದೆ. ಇಂತಹ ಮಹಾನ್ ನಾಯಕರು ಹಾಕಿಕೊಟ್ಟ ಮಾರ್ಗದಲ್ಲಿ ನಾವು ನಡೆದು, (4ನೇ ಪುಟಕ್ಕೆ)

## ಗ್ರಾಮೀಣರಿಗೆ 'ಆರೋಗ್ಯದ ಅಮೃತ'

### ಗ್ರಾ.ಪಂ. ಅಭಿಯಾನಕ್ಕೆ ಸಚಿವ ಭೈರತಿ ಬಸವರಾಜ್ ಚಾಲನೆ

ದಾವಣಗೆರೆ, ಅ.2- ಗ್ರಾಮ ಪಂಚಾಯತ್ ಆರೋಗ್ಯ ಅಮೃತ ಅಭಿಯಾನದ ಮೂಲಕ ಗ್ರಾಮೀಣ ಜನ ಸಮುದಾಯವನ್ನು ಕೋವಿಡ್ ಮುಕ್ತ ಸಮುದಾಯ



ವನ್ನಾಗಿ ಮಾಡಲು ಗ್ರಾಮ ಪಂಚಾಯತಿಗಳು ಸಕ್ರಿಯವಾಗಿ ಶ್ರಮಿಸಲಿವೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಬಿ.ಎ. ಬಸವರಾಜ ತಿಳಿಸಿದರು.

ಅವರು, ಇಂದು ನಗರದ ಜಿಲ್ಲಾಸ್ಪತ್ರೆ ಆವರಣದಲ್ಲಿ ಸರ್ಕಾರದ ನೂತನ ಯೋಜನೆಯಾಗಿರುವ ಗ್ರಾಮ ಪಂಚಾಯತ್ ಆರೋಗ್ಯ ಅಮೃತ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದರು.

ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭದಲ್ಲಿ ರಾಜ್ಯದ 14 ಜಿಲ್ಲೆಗಳ 110 ತಾಲ್ಲೂಕುಗಳಲ್ಲಿ 2816 ಗ್ರಾಮ ಪಂಚಾಯ್ತಿಗಳ ವ್ಯಾಪ್ತಿಯಲ್ಲಿ ಈ ಅಭಿಯಾನ ಜಾರಿಯಾಗುತ್ತಿದೆ. ಗ್ರಾಮ ಪಂಚಾಯತಿ ಆರೋಗ್ಯ ಅಮೃತ ಅಭಿಯಾನ ಹೆಸರೇ ಹೇಳುವಂತೆ ಮುಂಬರುವ ಕಾಲಮಾನದಲ್ಲಿ ಗ್ರಾಮ ಸಮಾಜಕ್ಕೆ ಪಂಚಾಯತ್‌ಗಳು ಆರೋಗ್ಯದ ಅಮೃತವನ್ನು (4ನೇ ಪುಟಕ್ಕೆ)

## ವಿವಿಧ ಕಾಮಗಾರಿಗಳಿಗೆ ಎಸ್ಸೆಸ್ ಚಾಲನೆ

ದಾವಣಗೆರೆ, ಅ.2- ಶಾಸಕರ ಸ್ಥಳೀಯ ಪ್ರದೇಶಾಭಿವೃದ್ಧಿ ಯೋಜನೆಯಡಿ ವಿವಿಧ ಅಭಿವೃದ್ಧಿ ಕಾಮಗಾರಿಗಳ ನಿರ್ಮಾಣಕ್ಕೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಶಾಸಕ ಡಾ. ಶಾಮನೂರು ಶಿವಶಂಕರಪ್ಪ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, 7.50 ಲಕ್ಷ ರೂ ವೆಚ್ಚದಲ್ಲಿ ವಾರ್ಡ್ ನಂ. 5ರ ವ್ಯಾಪ್ತಿಯಲ್ಲಿ ಬರುವ ಬಡಾವಣೆಯ ವಿವಿಧ ಮುಖ್ಯ ಮತ್ತು ಅಡ್ಡ ರಸ್ತೆಗಳಲ್ಲಿ ಬೀದಿ ದೀಪಗಳನ್ನು ಅಳವಡಿಸಲು ಬೀದಿ ದೀಪ ಮಾರ್ಗ ಹಾಗೂ ಅಗತ್ಯ ಮೂಲಭೂತ ಸೌಕರ್ಯ ಕಲ್ಪಿಸುವ ಕಾಮಗಾರಿ ಮತ್ತು 14.85 ಲಕ್ಷ ರೂ. ವೆಚ್ಚದಲ್ಲಿ ವಾರ್ಡ್‌ನಂ.45 ಎಸ್.ಜೆ.ಎಂ. ನಗರದಲ್ಲಿರುವ 10 ಅಡ್ಡ ರಸ್ತೆಗಳಿಗೆ ರಸ್ತೆಬದಿ ಚರಂಡಿ ಕಾಮಗಾರಿ ಹಾಗೂ 13.00 ಲಕ್ಷ ರೂ. ವೆಚ್ಚದಲ್ಲಿ ವಾರ್ಡ್.ನಂ. 07 ದೇವರಾಜ್ ಅರಸ್ ಬಡಾವಣೆ 'ಬಿ' ಬ್ಲಾಕ್ 4ನೇ ಕ್ರಾಸ್‌ನಲ್ಲಿ ರಸ್ತೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ಕೊರೊನಾದಿಂದಾಗಿ ಶಾಸಕರ ಅನುದಾನದ ಕಾಮಗಾರಿಗಳನ್ನು ಆರಂಭಿಸಲು ವಿಳಂಬವಾಗಿದ್ದು, ಕಾಮಗಾರಿಗಳನ್ನು ಗುಣಮಟ್ಟದಲ್ಲಿ ನಿರ್ಮಿಸುವಂತೆ (7ನೇ ಪುಟಕ್ಕೆ)

## 4 ರಂದು ರೋಂನಲ್ಲಿ ಶೃಂಗ ಸಭೆ


### ಪ್ರವಾಸ ರದ್ದುಪಡಿಸಿದ ತರಳಬಾಳು ಶ್ರೀ



ಸಿರಿಗೆರೆ, ಸೆ.2- ಇದೇ ಅ. 4 ರಂದು ಸೋಮವಾರ ರೋಂ ನಲ್ಲಿ ಹವಾಮಾನ ವೈಪರೀತ್ಯ ಕುರಿತು (Climate Change) ನಡೆಯಲಿರುವ ಶೃಂಗ ಸಭೆಗೆ ಸಿರಿಗೆರೆಯ ಶ್ರೀ ತರಳಬಾಳು ಜಗದ್ಗುರು ಡಾ.ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮೀಜಿಯವರಿಗೆ ಆಹ್ವಾನಿಸಲಾಗಿತ್ತು.

ಶೃಂಗ ಸಭೆಗೆ ಬರುವ ಆಹ್ವಾನಿತರು ಕೊರೊನಾ ಕಾರಣದಿಂದ ಕಡ್ಡಾಯವಾಗಿ 10 ದಿನಗಳ ಕಾಲ ಮುಂಚಿತವಾಗಿ ಕ್ವಾರಂಟೈನ್ ಆಗಬೇಕೆಂಬ ಬಿಗಿಯಾದ ನಿಯಮ ಇಟಲಿಯಲ್ಲಿದ್ದ ಕಾರಣ, ಅಷ್ಟು ದಿನಗಳ ಕಾಲ ಮುಂಚಿತವಾಗಿ ಬಂದು ವೈಯಕ್ತಿಕವಾಗಿ ಭಾಗವಹಿಸಲು ಸಾಧ್ಯವಾಗದೇ ಇರುವುದಕ್ಕೆ ಸಂಯೋಜಕರಿಗೆ ವಿಷಾದ ವ್ಯಕ್ತಪಡಿಸಿ ತರಳಬಾಳು ಶ್ರೀಗಳು ತಮ್ಮ ವಿದೇಶ ಪ್ರವಾಸವನ್ನು ರದ್ದುಪಡಿಸಿದ್ದಾರೆ. ಶೃಂಗ ಸಭೆಗೆ ಜಗತ್ತಿನಾದ್ಯಂತ ಅನೇಕ (7ನೇ ಪುಟಕ್ಕೆ)

## ಖಾದಿ-ಗ್ರಾಮೋದ್ಯೋಗಕ್ಕೆ ಆದ್ಯತೆ



ಬೆಂಗಳೂರು, ಅ. 2- ರಾಜ್ಯದಲ್ಲಿ ಖಾದಿ ಮತ್ತು ಗ್ರಾಮೋದ್ಯೋಗ ಅಭಿವೃದ್ಧಿಗೆ ಆದ್ಯತೆ ನೀಡಲಾಗುವುದು. ಇದಕ್ಕಾಗಿ ವಿಶೇಷ ಕಾರ್ಯಕ್ರಮ ರೂಪಿಸಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಿಳಿಸಿದರು.

ಅವರು ಇಂದು ನಗರದ ಗಾಂಧಿ ಭವನದಲ್ಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಗಾಂಧಿ ಸ್ಮಾರಕ ನಿಧಿ ಮತ್ತು ಇತರೆ ಸಂಘ-ಸಂಸ್ಥೆಗಳ ಸಂಯುಕ್ತ ಆಶ್ರಯದಲ್ಲಿ ಗಾಂಧಿ ಜಯಂತಿ ಆಚರಣೆ ಹಾಗೂ ಗಾಂಧಿ ಸೇವಾ ಪುರಸ್ಕಾರ ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದರು.

ಗಾಂಧೀಜಿ ಒಬ್ಬ ವ್ಯಕ್ತಿಯಲ್ಲ. ಅವರು ಸ್ವಾತಂತ್ರ್ಯ ಹೋರಾಟಗಾರರಷ್ಟೇ ಅಲ್ಲ, ನೈತಿಕ ಭಾರತವನ್ನು ಕಟ್ಟುವ ಶಕ್ತಿ ಎಂದು ಅವರು ತಿಳಿಸಿದರು.

ನಾವು ಇಂದು ದೇಶಕ್ಕಾಗಿ ದುಡಿಯುವ ಮೂಲಕ ವಿಶ್ವದಲ್ಲಿ ಅಗ್ರ ಸ್ಥಾನ ಪಡೆಯಲು ಶ್ರಮಿಸಬೇಕು. ಇಂದಿನ ಸಮಾಜದಲ್ಲಿ ನಾವು ನಾಗರಿಕ ಜವಾಬ್ದಾರಿಯ ಕೊರತೆಯನ್ನು ಕಾಣುತ್ತೇವೆ. ಕರ್ತವ್ಯ ಪ್ರಜ್ಞೆ ಮೂಡಿಸಿಕೊಂಡು ಕೆಲಸ ಮಾಡಿದರೆ, ಯಾವ ಸವಾಲೂ ದೊಡ್ಡದಲ್ಲ. (7ನೇ ಪುಟಕ್ಕೆ)

## ಜಿಲ್ಲೆಯಲ್ಲಿ 42.87 ಮಿ.ಮೀ. ಮಳೆ

### ಶೇಂಗಾ, ಭತ್ತ, ಮನೆಗಳಿಗೆ ಹಾನಿ. 17.75 ಲಕ್ಷ ರೂ. ನಷ್ಟ

ದಾವಣಗೆರೆ ಅ.2- ಶನಿವಾರ ಸಂಜೆಯಿಂದ ತಡ ರಾತ್ರಿವರೆಗೆ ಸುರಿದ ಮಳೆ ನಗರವನ್ನು ತಂಪಾಗಿಸಿತ್ತು. ರಸ್ತೆಗಳ ಮೇಲೆ ನೀರು ನುಗ್ಗಿ ರಾತ್ರಿ ವಾಹನ ಸಂಚಾರಕ್ಕೆ ತುಸು ತೊಂದರೆಯಾಗಿತ್ತು. ಜಿಲ್ಲೆಯಲ್ಲಿ ಭತ್ತ ಹಾಗೂ ಶೇಂಗಾ ಬೆಳೆಗಳಿಗೆ ಹಾನಿಯಾಗಿದೆ.

ಇತ್ತೀಚೆಗಷ್ಟೇ ನವೀಕರಣಗೊಂಡ ರೈಲ್ವೇ ನಿಲ್ದಾಣದ ಎರಡನೇ ಪ್ಲಾಟ್ ಫಾರಂನಲ್ಲಿ ಕೆಳಗಿನಿಂದ ನೀರು ಚಿಮ್ಮುತ್ತಿದ್ದುದು ಪ್ರಯಾಣಿಕರ ಆತಂಕಕ್ಕೆ ಕಾರಣವಾಗಿತ್ತು. ಕೋಟ್ಯಾಂತರ ರೂಪಾಯಿ ವೆಚ್ಚ ಮಾಡಿ ನವೀಕರಣವಾದ ಕೆಲವೇ ದಿನಗಳಲ್ಲಿ ಈ ರೀತಿ ನೀರು ಚಿಮ್ಮುತ್ತಿರುವುದಕ್ಕೆ ಸಾಮಾಜಿಕ ಜಾಲ ತಾಣಗಳಲ್ಲಿ ಸಾರ್ವಜನಿಕರಿಂದಲೂ ಕಾಮಗಾರಿ ಬಗ್ಗೆ ಅಸಮಾಧಾನ ವ್ಯಕ್ತವಾಗಿದೆ.


ಒಟ್ಟಾರೆ ಶನಿವಾರ ಜಿಲ್ಲೆಯಲ್ಲಿ 42.87 ಮಿ.ಮೀ ಮಳೆಯಾಗಿದ್ದು, 17.75 ಲಕ್ಷ ರೂ. ನಷ್ಟ ಸಂಭವಿಸಿದೆ.

ಚನ್ನಗಿರಿ ತಾಲ್ಲೂಕಿನಲ್ಲಿ 34.25 ಮಿ.ಮೀ., ದಾವಣಗೆರೆ 80.66 , ಹರಿಹರ 38.55, ಹೊನ್ನಾಳಿ 49.40 ಹಾಗೂ (7ನೇ ಪುಟಕ್ಕೆ)

### ಮನೆಗಳಿಗೆ ನುಗ್ಗಿದ ನೀರು ನಾಗರಿಕರಿಂದ ರಸ್ತೆ ತಡೆ

ದಾವಣಗೆರೆ, ಅ.2- ಶುಕ್ರವಾರ ರಾತ್ರಿ ಸುರಿದ ಮಳೆಯಿಂದಾಗಿ ತಗ್ಗು ಪ್ರದೇಶವಾದ ನಗರದ 5ನೇ ವಾರ್ಡ್ ಬೂದಾಳ್ ರಸ್ತೆಯ ಬಾಪೂಜಿ ನಗರ, ಬಾಬು ಜಗಜೀವನರಾಮ್ ನಗರದಲ್ಲಿನ ಮನೆಗಳಿಗೆ ನೀರು ನುಗ್ಗಿ ರಾತ್ರಿಯೆಲ್ಲಾ ಜನಜೀವನ ಅಸ್ತವ್ಯಸ್ತವಾಗಿತ್ತು. ಇದರಿಂದ ರೋಸಿ ಹೋದ ಅಲ್ಲಿನ ನಿವಾಸಿಗಳು ಇಂದು ಜಿಲ್ಲಾಡಳಿತ ಹಾಗೂ ನಗರ ಪಾಲಿಕೆ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

ಬೂದಾಳ್ ಮುಖ್ಯರಸ್ತೆಯಲ್ಲಿ ಪ್ರತಿಭಟನಾ ಧರಣಿ ಮುಖೇನ (7ನೇ ಪುಟಕ್ಕೆ)



ಮಳೆಯಿಂದಾಗಿ ಮನೆಗಳಿಗೆ ನೀರು ನುಗ್ಗಿದ್ದರಿಂದ ದಾವಣಗೆರೆ 5ನೇ ವಾರ್ಡ್ ನಿವಾಸಿಗಳು ಶಾಶ್ವತ ಪರಿಹಾರಕ್ಕಾಗಿ ಬೂದಾಳ್ ಮುಖ್ಯರಸ್ತೆಯಲ್ಲಿ ಧರಣಿ ನಡೆಸಿದರು.

## ಪತ್ರಿಕಾ ರಂಗ ಸಮಾಜದ ಕಣ್ತೆರೆಸುವ ಕೆಲಸ ಮಾಡುತ್ತಿದೆ





### ಜಿಲ್ಲಾ ವರದಿಗಾರರ ಕೂಟದಿಂದ ಮಾಧ್ಯಮ ದಿನಾಚರಣೆ ಹಾಗೂ ಮಾಧ್ಯಮ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ

ದಾವಣಗೆರೆ, ಅ. 2 - ಸ್ವಾತಂತ್ರ್ಯ ಪೂರ್ವದ ಕಾಲದಿಂದಲೂ ಪತ್ರಿಕೋದ್ಯಮ ಸಮಾಜದ ಸೇವೆ ಸಲ್ಲಿಸುತ್ತಾ ಬಂದಿದೆ. ಈಗಲೂ ಸರ್ಕಾರದ ಮೂರು ಅಂಗಗಳ ಜೊತೆ ನಾಲ್ಕನೇ ಅಂಗವಾಗಿ ಪರಿಣಾಮಕಾರಿಯಾಗಿ ಕೆಲಸ ಮಾಡುವ ಜವಾಬ್ದಾರಿ ಹೊಂದಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಭೈರತಿ ಬಸವರಾಜ ತಿಳಿಸಿದ್ದಾರೆ.

ನಗರದ ಕುವೆಂಪು ಕನ್ನಡ ಭವನದಲ್ಲಿ ಜಿಲ್ಲಾ ವರದಿಗಾರರ ಕೂಟದ ವತಿಯಿಂದ ಆಯೋಜಿಸಲಾಗಿದ್ದ ಮಾಧ್ಯಮ ದಿನಾಚರಣೆ ಹಾಗೂ ಮಾಧ್ಯಮ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡುತ್ತಿದ್ದರು.

ಶಾಸಕಾಂಗ, ಕಾರ್ಯಾಂಗ ಹಾಗೂ ನ್ಯಾಯಾಂಗಗಳ ಜೊತೆಗೆ ಪತ್ರಿಕಾ ರಂಗ ನಾಲ್ಕನೇ ಅಂಗವಾಗಿ ಜನಪ್ರತಿನಿಧಿಗಳ ಹಾಗೂ ಸಮಾಜದ ಕಣ್ತೆರೆಸುವ ಕೆಲಸ ಮಾಡುತ್ತಿದೆ. ಸಮಾಜದ ನ್ಯೂನತೆಗಳ ಬಗ್ಗೆ ಗಮನ ಸೆಳೆಯುವ ಮಹತ್ವದ ಜವಾಬ್ದಾರಿ ಪತ್ರಿಕಾ ರಂಗದ ಮೇಲಿದೆ ಎಂದವರು ಹೇಳಿದರು.

ಸರ್ಕಾರದ ಪ್ರಾಧಿಕಾರಗಳ ಮೂಲಕ ವಿತರಿಸುವ ನಿವೇಶನಗಳಲ್ಲಿ ಪತ್ರಕರ್ತರಿಗೆ ಶೇ.5ರಷ್ಟು ನಿವೇಶನ ನೀಡಲು ಹಿಂದಿನ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಜೊತೆ ಚರ್ಚಿಸಿ ನಿರ್ಧಾರ ತೆಗೆದುಕೊಂಡಿದ್ದನ್ನು ತಿಳಿಸಿದ ಭೈರತಿ, ಪತ್ರಕರ್ತರಿಗೆ ಆದ್ಯತೆ ಮೇಲೆ ನನ್ನ ಅವಧಿಯಲ್ಲಿ ನಿವೇಶನ ವಿತರಿಸುವುದಾಗಿ ಹೇಳಿದರು.

ವರದಿಗಾರರ ಕೂಟದಿಂದ ಪ್ರಶಸ್ತಿ ಪಡೆದಿರುವ ಐವರಿಗೆ ಬಹುಮಾನವಾಗಿ ತಾವೂ ಸಹ ತಲಾ ಹತ್ತು ಸಾವಿರ ರೂ. ನೀಡುವುದಾಗಿ ಸಚಿವರು ಇದೇ ಸಂದರ್ಭದಲ್ಲಿ ತಿಳಿಸಿದರು.

ಮುಖ್ಯ ಅತಿಥಿಯಾಗಿದ್ದ ದೂಡಾ ಅಧ್ಯಕ್ಷ ದೇವರಮನೆ ಶಿವಕುಮಾರ್ ಮಾತನಾಡಿ, ಸಿ.ಎ. ನಿವೇಶನ ವಿತರಣೆ ಸಂದರ್ಭದಲ್ಲಿ ವರದಿಗಾರರ ಕೂಟಕ್ಕೂ ನಿವೇಶನ ನೀಡಲಾಗುವುದು ಎಂದು ಭರವಸೆ ನೀಡಿದರು.

ಪ್ರಶಸ್ತಿ ಪ್ರದಾನ ಮಾಡಿ ಮಾತನಾಡಿದ ವಿಜಯವಾಣಿ ಪತ್ರಿಕೆಯ ಶಿವಮೊಗ್ಗ ಸ್ಥಾನಿಕ ಸಂಪಾದಕ ಎನ್.ಡಿ. ಶಾಂತಕುಮಾರ್, ಪತ್ರಕರ್ತರ ವರದಿಗಳಿಗೆ ಸರ್ಕಾರ ಹಾಗೂ ಸಮಾಜದಿಂದ ಸಿಗುವ ಪ್ರತಿಕ್ರಿಯೆಯೂ ಪ್ರಶಸ್ತಿಯಂತೆ ಎಂದು ಹೇಳಿದರು.

ವರದಿಗಾರರ ಕೂಟದ ಮಾಜಿ ಅಧ್ಯಕ್ಷ ಮಲ್ಲಿಕಾರ್ಜುನ ಕಬ್ಬೂರು ಮಾತನಾಡಿ, ಬೇರೆ ಜಿಲ್ಲೆಗಳ ರೀತಿಯಲ್ಲೇ ದಾವಣಗೆರೆ ಜಿಲ್ಲಾ ವರದಿಗಾರರ ಕೂಟವೂ ಸ್ವಂತ ಭವನ ಹೊಂದುವಂತಾಗಲಿ ಎಂದು ಆಶಿಸಿದರು.

ಈ ಸಂದರ್ಭದಲ್ಲಿ ಜನತಾವಾಣಿ ಉಪ ಸಂಪಾದಕ ಇ.ಎಂ. ಮಂಜುನಾಥ, ಸಂಯುಕ್ತ ಕರ್ನಾಟಕದ ಉಪ ಸಂಪಾದಕ ಎ.ಎನ್. ನಿಂಗಪ್ಪ, ನಗರವಾಣಿ ವರದಿಗಾರ ಸುರೇಶ್ ಕೋಲ್ಕುಂಟೆ, ಸಂಜೆವಾಣಿ ಸ್ಥಾನಿಕ ಸಂಪಾದಕ ಬಿ.ಎಂ. ಶಿವಕುಮಾರ್ ಹಾಗೂ ಟಿವಿ9 ವಿಡಿಯೋ (6ನೇ ಪುಟಕ್ಕೆ)

# ವಾರ ಭವಿಷ್ಯ

**ದಿನಾಂಕ : 03.10.2021 ರಿಂದ 09.10.2021**

**- ಜಯತೀರ್ಥಾಚಾರ್ ವಡೇರ್, ದಾವಣಗೆರೆ.**

**ಮೇಷ (ಅಶ್ವಿನಿ, ಭರಣಿ, ಕೃತ್ತಿಕಾ)**
**(ಚೂ.ಚೇ.ಚೋ.ಲ.ಲಿ.ಉ.ಲೇ.ಲೊ.ಅ.)**

ಪಾಲುದಾರಿಕೆಯಲ್ಲಿ ಕೈ ಹಾಕುವುದು ಬೇಡ. ಅಗತ್ಯಕ್ಕೆ ತಕ್ಕ ಆದಾಯದಿಂದ ಹೊಸ ಯೋಜನೆ ತಾತ್ಕಾಲಿಕ ಮುಂದೂಡಿ. ಸ್ನೇಹಿತರ ಸಲಹೆ ಮರು ವಿಮರ್ಶಿಸಿ. ಮಕ್ಕಳ ಆರೋಗ್ಯದ ಕಡೆ ಗಮನ ಕೊಡಿ. ಶುಭ ಕಾರ್ಯಗಳಿಗಿದ್ದ ಅಡ್ಡಿ, ಆತಂಕ ದೂರವಾಗಲಿವೆ. ಔಷಧಿ, ಹತ್ತಿ ಬಟ್ಟೆ ತಯಾರಕರ ಮಾರುಕಟ್ಟೆ ವಿಸ್ತಾರ. ಕೃಷಿ ಉತ್ಪನ್ನಗಳಿಗೆ ಹೆಚ್ಚಿನ ಬೇಡಿಕೆ. ಹಿರಿಯರೊಂದಿಗಿದ್ದ ವೈಮನಸ್ಸು ಪರಿಹರಿಸಿಕೊಳ್ಳಿ. ಹಣಕಾಸಿನ ವಿಚಾರದಲ್ಲಿ ಕಟ್ಟುನಿಟ್ಟಾಗಿರುವುದು ಉತ್ತಮ. ಹುಸಿ ಮಾತುಗಳಿಗೆ ಮರುಳಾಗದಿರಿ. ಕೌಟುಂಬಿಕ ವಿಚಾರವನ್ನು ಹಗುರವಾಗಿ ಪರಿಗಣಿಸಬೇಡಿ. ವಿದ್ಯಾರ್ಥಿಗಳ ಮುಂದಿನ ಭವಿಷ್ಯದ ಬಗ್ಗೆ ಗಂಭೀರ ಯೋಚಿಸಿ. ಗುರುಗಳನ್ನು ಆರಾಧಿಸಿ. ಸೋಮ, ಮಂಗಳ, ಬುಧ ಶುಭ ದಿನಗಳು.

**ವೃಷಭ (ಕೃತ್ತಿಕಾ, 2,3,4, ರೋಹಿಣಿ, ಮೃಗ 1,2)**
**(ಇ.ಉ.ಎ.ಒ.ವ.ವಿ.ವು.ವೆ.ವೋ)**

ಸ್ನೇಹಿತರ ಪ್ರೇರಣೆಯಿಂದ ಹೊಸ ವಾಹನ ಕೊಳ್ಳಲು ಉತ್ತೇಜಿತರಾಗಬೇಡಿ. ಯೋಚಿಸಿ ನಿರ್ಧರಿಸಿ. ಹಿರಿಯರು ನೀಡಲಿರುವ ಸಲಹೆ ನಿಮ್ಮ ಕುಟುಂಬದ ಸಮಸ್ಯೆ ಬಗೆಹರಿಸಲಿವೆ. ಸರ್ಕಾರಿ ತೆರಿಗೆ ಪರಿಶೋಧಕರಿಗೆ ಹುದ್ದೆಯಲ್ಲಿ ಹೆಚ್ಚಿನ ಜವಾಬ್ದಾರಿ ಹೆಗಲೇರಲಿದೆ. ದೈನಂದಿನ ಚಟುವಟಿಕೆ ಬಗ್ಗೆ ತುಸು ಗಮನ ಹರಿಸಿ. ಹಣಕಾಸಿನ ಪರಿಸ್ಥಿತಿ ಅಗತ್ಯಕ್ಕೆ ತಕ್ಕಂತೆ ಇರುವುದರಿಂದ ಖರ್ಚುಗಳಲ್ಲಿ ಹಿಡಿತ ಸಾಧಿಸುವುದು ಉತ್ತಮ. ಕೌಟುಂಬಿ ವಿಚಾರದಲ್ಲಿ ಸೋದರನ ಅಸಹಕಾರದಿಂದ ಬೇಸರ. ಶುಭ ಕಾರ್ಯಗಳು ಕಾರಣಾಂತರಗಳಿಂದ ಮುಂದೆ ಹೋಗಲಿವೆ. ಸಹೋದ್ಯೋಗಿಗಳ ಜೊತೆ ಸೌಹಾರ್ದತೆಯಿಂದ ನಡೆದುಕೊಳ್ಳಿ. ಗೋ ಸೇವೆ ಮಾಡಿ. ಸೋಮ, ಶುಕ್ರ, ಶನಿ ಶುಭ ದಿನಗಳು.

**ಮಿಥುನ (3,4, ಆರಿದ್ರಾ, ಪುನರ್ವಸು 1,2,3)**
**(ಕ.ಕಿ.ಕು.ಘ, ಔ, ಚ.ಕೆ.ಕೋ.ಹ.)**

ಬಂಧುಗಳೊಂದಿಗಿದ್ದ ಆಸ್ತಿ ವಿಭಾಗದ ವಿಚಾರ ಹಿರಿಯರ ರಾಜೀ ಮೂಲಕ ಬಗೆಹರಿಯಲಿದೆ. ವ್ಯವಹಾರದಲ್ಲಿ ಹೊಸ ಪಾಲುದಾರರಿಂದ ಉತ್ತಮ ಸಲಹೆ ಸಿಗಲಿದೆ. ಉದ್ಯೋಗದ ನೆಪದಲ್ಲಿ ಅಪರಿಚಿತ ವ್ಯಕ್ತಿಗಳಿಗೆ ಹಣ ಕೊಟ್ಟು ಮೋಸ ಹೋಗುವ ಸಂಭವ. ಸಂಗೀತ ವಿದ್ವಾಂಸರಿಗೆ ಸರ್ಕಾರದಿಂದ ಸನ್ಮಾನ. ಮಕ್ಕಳ ನಡುವೆ ಹೊಂದಾಣಿಕೆ ತಪ್ಪಿ, ಮನಸ್ಸಿನ ನೆಮ್ಮದಿ ಹಾಳಾಗಬಹುದು. ವಿದ್ಯಾರ್ಥಿಗಳು ತಮ್ಮ ಮಾರ್ಗದರ್ಶಕರ ಸಲಹೆ ಯಂತೆ ನಡೆಯುವುದು ಒಳಿತು. ವೈಯಕ್ತಿಕ ಆರೋಗ್ಯ ಕಡೆಗಣಿಸಬೇಡಿ. ರಾಜಕಾರಣಿಗಳಿಗೆ ಹಿತಶತ್ರುಗಳ ಕಾಟ. ಕುಲದೇವತಾರಾಧನೆ ಮಾಡಿರಿ. ಮಂಗಳ, ಬುಧ, ಗುರು ಶುಭ ದಿನಗಳು.

**ಕರ್ಕಾಟಕ (ಪುನ 4, ಪುಷ್ಯ, ಆಶ್ಲೇಷ)**
**(ಹಿ.ಹು.ಹೆ.ಹೂ.ಡ.ಡಿ.ಡು.ಡೆ.ಡೋ)**

ಈ ಹಿಂದೆ ಪ್ರಾರಂಭಿಸಿದ್ದ ಉದ್ಯಮ ಈಗ ಫಲ ಕೊಡಲಿದೆ. ವೃತ್ತಿಯಲ್ಲಿರು ವವರಿಗೆ ನಂಬಿದ ಸಹೋದ್ಯೋಗಿಗಳಿಂದಲೇ ತೊಂದರೆ ಎದುರಾಗಬಹುದು. ಅವರಿಂದ ದೂರವಿರಿ. ಸಂಗಾತಿ ಆದಾಯದಲ್ಲಿ ಸಾಕಷ್ಟು ಏರಿಕೆ ಕಂಡು ಬರಲಿದೆ. ಆರ್ಥಿಕ ಪರಿಸ್ಥಿತಿ ತಕ್ಕಮಟ್ಟಿಗೆ ಸುಧಾರಿಸಲಿದೆ. ಪತ್ರಿಕಾ ರಂಗದಲ್ಲಿರುವವರಿಗೆ ಉತ್ತಮ ಬರಹಗಳಿಂದ ಖ್ಯಾತಿ ಸಿಗಲಿದೆ. ಸೋದರಿಯ ವಿವಾಹ ನಿಶ್ಚಯ ಮುಂದೆ ಹೋಗಲಿದೆ. ಪೂರ್ವಿಕರಿಂದ ಬರಬೇಕಾಗಿದ್ದ ನಗನಾಣ್ಯಗಳು ಇಷ್ಟರಲ್ಲೇ ಕೈ ಸೇರಲಿವೆ. ಸಾಧ್ಯವಾದಷ್ಟು ಪರಾವಲಂಬನೆ ಕಡಿಮೆ ಮಾಡುವುದು ಉತ್ತಮ. ಆದಾಯದ ಮೂಲದಲ್ಲಿ ಕೊರತೆ. ಖರ್ಚುಗಳಿಗೆ ಕಡಿವಾಣ ಹಾಕುವುದು ಮೇಲು. ಗಣಪತಿ ಆರಾಧಿಸಿ. ಸೋಮ, ಬುಧ, ಗುರು ಶುಭ ದಿನಗಳು.

**ಸಿಂಹ ( ಮಘು, ಪುಬ್ಬ, ಉತ್ತರ 1)**
**(ಮ.ಮಿ.ಮು.ಮೋ.ವೆ.ಟ.ಟಿ.ಟು.ಟೆ)**

ನಿಮ್ಮ ಮುಂಗೋಪದಿಂದ ಮನೆಮಂದಿಯೊಂದಿಗೆ ನಿಷ್ಠೂರ ಕಟ್ಟಿಕೊಳ್ಳಿ. ಕಛೇರಿ ಸಹೋದ್ಯೋಗಿಗಳ ಮೇಲೆ ಕೋಪ ಬೇಡ. ಅಪರಿಚಿತರೊಂದಿಗೆ ಹಣಕಾಸಿನ ವ್ಯವಹಾರ ಮಾಡಿ ನಷ್ಟ ತಂದುಕೊಳ್ಳುವಿರಿ. ಹೊಸ ಉದ್ಯಮಕ್ಕೆ ಇದ್ದ ಕಾನೂನು ಅಡಚಣೆ ದೂರವಾಗಲಿದೆ. ಬೇರೆಯವರ ಸಲುವಾಗಿ ತಿರುಗಾಡುವುದರಿಂದ ನಿಮ್ಮ ಪ್ರಗತಿಗೆ ಅಡ್ಡಿ. ಅನಾವಶ್ಯಕ ವಿವಾದ ಬದುಕಿನಲ್ಲಿ ಬಿರುಗಾಳಿ ಎಬ್ಬಿಸಬಹುದು. ನಿರುದ್ಯೋಗಿ ಪದ ವೀಧರರಿಗೆ ಖಾಸಗಿ ಕಂಪನಿಯಿಂದ ನೇಮಕಾತಿ ಆದೇಶ ಬರಲಿದೆ. ಆದಾಯದ ಮೂಲ ಹೆಚ್ಚಿತೆಂದು ಹೆಚ್ಚು ವೆಚ್ಚ ಮಾಡುವುದು ಬೇಡ. ಕೃಷಿಕರಿಗೆ ಸರ್ಕಾರದಿಂದ ಬರಬೇಕಾಗಿರುವ ಸೌಲಭ್ಯಗಳು ಇಷ್ಟರಲ್ಲೇ ಸಿಗಲಿವೆ. ಭಾನು, ಮಂಗಳ, ಬುಧ ಶುಭ ದಿನಗಳು.

**ಕನ್ಯಾ (ಉತ್ತರಾ 2,3,4, ಹಸ್ತಾ, ಚಿತ್ತಾ 1,2)**
**(ಟೋ.ಪ.ಪಿ.ಪು.ಷ.ಣ.ಠ.ಪೆ.ಪೋ)**

ಮಗನ ಉನ್ನತಾಧ್ಯಯನದ ಹಂಬಲಕ್ಕೆ ತಣ್ಣೀರೆರಚಬೇಡಿ. ಅದಕ್ಕೆ ಬೇಕಾದ ಆರ್ಥಿಕ ನೆರವು ಬಂಧುಗಳಿಂದ ಹಾಗೂ ಸಮಾಜದಿಂದ ಸಿಗಲಿದೆ. ದುಡುಕಿ ಆಡಿದ ಮಾತಿನಿಂದ ಉಂಟಾದ ಕೌಟುಂಬಿಕ ವೈಮನಸ್ಸನ್ನು ಸರಿಪಡಿಸಲು ಪ್ರಯತ್ನಿಸುವಿರಿ. ವಾದ-ವಿವಾದಗಳಲ್ಲಿ ಜಯಶಾಲಿಗಳಾಗುವಿರಿ. ಯಂತ್ರೋಪಕರಣಗಳ ಬಿಡಿಭಾಗ ಮಾರಾಟಗಾರರಿಗೆ ಉತ್ತಮ ವಹಿವಾಟು. ಯಾರಿಂದಲೂ ಅತೀ ನಿರೀಕ್ಷೆ ಬೇಡ. ಇಲ್ಲವಾದಲ್ಲಿ ನಿರಾಸೆ ಕಟ್ಟಿಟ್ಟ ಬುತ್ತಿ. ಆದಾಯದ ಮೂಲ ಹೆಚ್ಚಿಸಿಕೊಳ್ಳಲು ಹರಸಾಹಸ ಪಡುವಿರಿ. ಹಿರಿಯರ ಸಲಹೆ ಸಮಯೋಚಿತವಾಗಿರಲಿದೆ, ಅದರಂತೆ ನಡೆದುಕೊಳ್ಳಿ. ಸೌರಸೂಕ್ತ ಪಠಿಸಿ. ಗೊ ಸೇವೆ ಅತ್ಯುತ್ತಮ. ಮಂಗಳ, ಬುಧ, ಗುರು ಶುಭ ದಿನಗಳು.

**ತುಲಾ (ಚಿತ್ತಾ 3,4, ಸ್ವಾತಿ, ವಿಶಾಖ 1,2,3)**
**(ರ.ರಿ.ರು.ರೆ.ರೊ.ತ.ತಿ.ತು.ತೆ.)**

ಎಲ್ಲರನ್ನೂ ಸಂತೋಷಪಡಿಸಲು ಹೋಗಿ ನೀವೇ ವಿವಾದಗಳಿಗೆ ಸಿಲುಕುವಿರಿ. ಇದರ ಪರಿಣಾಮ ಬಂಧುಗಳೊಂದಿಗೆ ಶತ್ರುತ್ವ ಕಟ್ಟಿಕೊಳ್ಳುವಿರಿ. ಸಾಧ್ಯ ವಾದಷ್ಟು ವಿವಾದಗಳಿಂದ ದೂರವಿರಿ. ಮಡದಿ ನಡಾವಳಿಯಲ್ಲಿನ ವ್ಯತ್ಯಾಸದಿಂದ ಗಾಬರಿ ಯಾಗಲಿದೆ. ಅನಿರೀಕ್ಷಿತ ಪ್ರಸಂಗದಿಂದ ಮಹಿಳೆಗೆ ಕುಟುಂಬ ನಡೆಸುವ ಜವಾಬ್ದಾರಿ ಬರಲಿದ್ದು ಉತ್ತಮವಾಗಿ ನಿರ್ವಹಿಸುವಿರಿ. ಯೋಗಾಭ್ಯಾಸ ಮಾಡುವುದು ಉತ್ತಮ. ಮಂದಗತಿಯಲ್ಲಿ ಸಾಗುತ್ತಿರುವ ಕೆಲಸ ಚುರುಕು ಪಡೆಯಲಿವೆ. ಮಗಳ ವರಾನ್ವೇಷಣೆ ವಿಚಾರದಲ್ಲಿ ದುಡುಕಿನ ನಿರ್ಧಾರ ಬೇಡ. ಹಣಕಾಸಿನ ಪರಿಸ್ಥಿತಿ ಸಾಧಾರಣ. ಸರ್ಕಾರಿ ನೌಕರರಿಗೆ ಮೇಲಾಧಿಕಾರಿಗಳಿಂದ ಕಿರಿಕಿರಿ. ತಾಳ್ಮೆಯಿಂದ ವರ್ತಿಸಿ. ಗುರು, ಶುಕ್ರ, ಶನಿ ಶುಭ ದಿನಗಳು.

**ವೃಶ್ಚಿಕ (ವಿಶಾಖ 4, ಅನೂ, ಜೇಷ್ಠ)**
**(ತೊ.ನ.ನಿ.ನು.ನೆ.ನೋ.ಯ.ಯಿ.ಯು.)**

ಅಂದುಕೊಂಡ ಕೆಲಸ ಮಂದಗತಿಯಲ್ಲಿ ಸಾಗುವುದರಿಂದ ಮಿತ್ರರ ಸಲಹೆಯಂತೆ ನಡೆದುಕೊಳ್ಳಿ. ಹಿತಶತ್ರುಗಳ ಬಾಧೆ ಕಾಡಲಿದೆ. ಪದವೀಧರ ಮಹಿಳೆಯರಿಗೆ ಉದ್ಯೋಗದಲ್ಲಿ ಹೆಚ್ಚಿನ ಅವಕಾಶ. ಆಯ್ಕೆಯಲ್ಲಿ ಎಚ್ಚರದಿಂದಿರಿ. ಕೃಷಿಕರಿಗೆ ಬೇಸಾಯಕ್ಕೆ ಬೇಕಾದ ಸಲಕರಣೆಗಳ ಕೊರತೆ ಕಂಡು ಬರಲಿದೆ. ಸಂಗಾತಿಯ ಮಾತು ಕೇಳಿ ನೆರೆಹೊರೆ ಯವರೊಂದಿಗೆ ವಿರೋಧ ಕಟ್ಟಿಕೊಳ್ಳಬೇಕಾದೀತು. ಸ್ವಂತ ಉದ್ಯಮ ಕೈ ಹಿಡಿಯಲಿದೆ. ಆದಾಯ ಉತ್ತಮವಾಗಿದ್ದರೂ ಹಲವು ಗೊಂದಲಗಳಿಂದ ಉಳಿತಾಯದ ನಿರೀಕ್ಷೆ ಹುಸಿ ಯಾಗಬಹುದು. ಬೇರೆಯವರ ವೈಯಕ್ತಿಕ ವಿಚಾರದಲ್ಲಿ ಪ್ರವೇಶ ಬೇಡ. ಇದರಿಂದ ನಿಮ್ಮ ಗೌರವಕ್ಕೆ ಕುತ್ತು ಬರಬಹುದು. ಗುರು ಜಪ ಮಾಡಿ. ಸೋಮ, ಮಂಗಳ, ಗುರು ಶುಭ ದಿನಗಳು.

**ಧನಸ್ಸು (ಮೂಲ, ಪೂರ್ವಾಷಾಡ, ಉತ್ತರಾಷಾಡ)**
**(ಯೆ.ಯೋ. ಬ.ಬಿ.ಬು.ಧ.ಫ.ಡ.ಬೆ.)**

ಗುಟ್ಟಾಗಿ ನಡೆಯುತ್ತಿದ್ದ ಪ್ರೇಮ ಪ್ರಸಂಗಕ್ಕೆ ಒಂದು ಕೊನೆ ಕಾಣಿಸದೇ ಹೋದಲ್ಲಿ ಹಿರಿಯರೇ ಮಧ್ಯ ಪ್ರವೇಶಿಸಿ ಸುಖಾಂತ್ಯ ಕಾಣಿಸುವರು. ವ್ಯವಸಾಯದಲ್ಲಿರು ವವರಿಗೆ ಹಲವು ರೀತಿಯ ನೆರವು ಹರಿದು ಬರಲಿದೆ. ಇದರಿಂದ ಸಮಸ್ಯೆಗಳು ಪರಿಹಾರ ವಾಗಲಿವೆ. ಸರ್ಕಾರಿ ಮೇಲಾಧಿಕಾರಿಗಳು ತಮ್ಮ ಕರ್ತವ್ಯದಲ್ಲಿ ತುಸು ಮೈಮರೆತರೂ ಗುರುತರ ಆಪಾದನೆ ಎದುರಿಸಬೇಕಾಗಬಹುದು. ಸಂಯಮದಿಂದ ವರ್ತಿಸಿದಲ್ಲಿ ಸಮಸ್ಯೆ ನಿಮ್ಮನ್ನು ಬಾಧಿಸದು. ಆದಾಯದಲ್ಲಿ ಏರಿಳಿತಗಳಿಂದ ಹಣಕಾಸಿನ ವಿಚಾರದಲ್ಲಿ ಹಿಡಿತ ಸಾಧಿಸಿ. ಹಿರಿಯರೊಂದಿಗೆ ವಿನಾಕಾರಣ ವಾಗ್ವಾದ ಬೇಡ. ಮಗನ ಉದ್ಯೋಗದಲ್ಲಿ ತುಸು ಹಿನ್ನಡೆಯಾಗಲಿದೆ. ಚಿಂತೆ ಬೇಡ. ಭಾನು, ಗುರು, ಶನಿ ಶುಭ ದಿನಗಳು.

**ಮಕರ (ಉತ್ತರಾಷಾಢ 2,3,4, ಶ್ರವಣ, ಧನಿಷ್ಠಾ 1,2)**
**(ಜೊ.ಜ.ಜಿ.ಜೆ.ಶಿ.ಶು.ಶೇ.ಶೋ.ಗ.ಗಿ)**

ಕುಟುಂಬದ ಜವಾಬ್ದಾರಿ ಮಕ್ಕಳಿಗೆ ವಹಿಸುವ ಮೊದಲು ಎದುರಿನವರ ಸಾಮರ್ಥ್ಯ ಪರೀಕ್ಷಿಸುವುದು ಉತ್ತಮ. ಬಹಳ ವರ್ಷಗಳಿಂದ ಬಾಕಿಯಿರುವ ಹಿರಿಯರ ಸಾಲ ನೀವೇ ತೀರಿಸಿ, ಸಂತೃಪ್ತ ಭಾವ ಪಡೆಯುವಿರಿ. ಕೃಷಿಕರು ಸಾವಯವ ಬೇಸಾಯದ ಬಗ್ಗೆ ಅನುಭವಿಗಳಿಂದ ಸಲಹೆ ಪಡೆಯುವುದು ಲೇಸು. ವೈಯಕ್ತಿಕ ವಿಚಾರಗಳನ್ನು ಯಾರೊಂದಿಗೂ ಬಹಿರಂಗ ಪಡಿಸಬೇಡಿ. ಮುಂದೆ ಮುಜುಗರ ಅನುಭವಿಸಬೇಕಾದೀತು. ವ್ಯವಹಾರದಿಂದ ನಿಮ್ಮ ಸಂಪರ್ಕ ವೃದ್ಧಿಸಲಿದೆ. ಸ್ನೇಹಿತರ ನಡುವಿನ ಭಿನ್ನಾಭಿಪ್ರಾಯ ಬೇಗ ಸರಿಪಡಿಸಿಕೊಳ್ಳಿ. ಕೈಗಾರಿಕೋದ್ಯಮಿಗಳು, ಕಾರ್ಮಿಕರಿಗೆ ಹೆಚ್ಚಿನ ಸೌಲಭ್ಯದಿಂದ ಹೆಚ್ಚಿನ ಲಾಭ. ಕುಲದೇವತಾರಾಧನೆ ಮಾಡಿ. ಬುಧ, ಗುರು, ಶನಿ ಶುಭ ದಿನಗಳು.

**ಕುಂಭ (ಧನಿಷ್ಠಾ, ಶತಭಿಷಾ, ಪೂರ್ವಾಭಾದ್ರ 1,2,3)**
**(ಗು.ಗೆ.ಗೊ.ಸ.ಸಿ.ಸು.ಸೆ.ಸೋ.ದ)**

ಹೊಸ ಮನೆ ಕಟ್ಟುವ ವಿಚಾರ ಕೆಲಕಾಲ ಮುಂದೂಡುವುದು ಲೇಸು. ಬೇರೆಯವರ ವಿಷಯ ಕೆದಕದೇ ನಿಮ್ಮ ಪಾಡಿಗಿರಿ. ವೃತ್ತಿಗೆ ಸಂಬಂಧಪಟ್ಟ ಸಮಸ್ಯೆ ಪರಿಹರಿಸಿ ಕೊಳ್ಳಲು ಆತ್ಮೀಯ ಸ್ನೇಹಿತರ ಸಲಹೆಯಂತೆ ನಡೆದುಕೊಳ್ಳಿ. ಹೊಸದಾಗಿ ನೌಕರಿಗೆ ಸೇರಿರುವ ಯುವ ನೌಕರರು ತಮ್ಮ ಮೇಲಾಧಿಕಾರಿಗಳ ಬಗ್ಗೆ ಉಡಾಫೆ ಮಾತನಾಡುವುದರಿಂದ ತಮ್ಮ ನೌಕರಿಗೆ ಕುತ್ತು ತಂದುಕೊಳ್ಳಬಹುದು. ಬೆಲೆಬಾಳುವ ವಸ್ತುಗಳ ಖರೀದಿ ಬೇಡ. ಪದೇ ಪದೇ ಮಾಡುವ ಪ್ರಯಾಣದಿಂದ ಆರೋಗ್ಯದಲ್ಲಿ ತುಸು ಏರುಪೇರಾಗುವ ಸಂಭವ. ಬಂಧುಗಳ ಮನೆಗೆ ಆಗಿಂದಾಗ್ಗೆ ಹೋಗುವುದರಿಂದ ತಿರಸ್ಕಾರಕ್ಕೊಳಗಾಗಿ ಮುಜುಗರ ಅನುಭವಿಸುವಿರಿ. ರಾಜಕಾರಣಿಗಳು ತಮ್ಮ ಹಿಂಬಾಲಕರಿಂದ ಸಾರ್ವಜನಿಕವಾಗಿ ಅಪ ಮಾನ ಎದುರಿಸುವರು. ಅನ್ನದಾನದಿಂದ ಪುಣ್ಯ ಪ್ರಾಪ್ತಿ. ಮಂಗಳ, ಬುಧ, ಶನಿ ಶುಭ ದಿನಗಳು.

**ಮೀನ (ಪೂರ್ವಾಭಾದ್ರ 4, ಉತ್ತರಾಭಾದ್ರ, ರೇವತಿ)**
**(ದಿ.ದು.ಖ.ಝ.ಥ.ದೆ.ದೋ.ಖ.ಚ.ಚಿ.)**

ಹಣಕಾಸಿನ ವಿಚಾರದಲ್ಲಿ ತುಸು ಮೈಮರೆತರೂ ನಷ್ಟ ಅನುಭವಿಸ ಬೇಕಾದೀತು. ಇದರಿಂದ ಮನೆಮಂದಿಗೆಲ್ಲಾ ಕಷ್ಟವಾಗಲಿದೆ. ತಿಳಿಯದಿರುವ ವಿಚಾರ ತಿಳಿದವರಿಗಿಂತಲೂ ಹೆಚ್ಚು ತಿಳಿದವರಂತೆ ಮಾತನಾಡಲು ಹೋಗಿ ಮೂರ್ಖತನ ತೋರು ವಿರಿ. ಚಿಕ್ಕಮಕ್ಕಳ ಆರೋಗ್ಯ ಅನಿರೀಕ್ಷಿತವಾಗಿ ಏರುಪೇರಾಗುವ ಸಂಭವ. ತಜ್ಞ ವೈದ್ಯರ ಸಲಹೆ ಪಡೆಯಿರಿ. ಸಾಧ್ಯವಾದಷ್ಟು ಪ್ರಯಾಣ ಬೇಡ. ಅನಿರೀಕ್ಷಿತ ಮೂಲದಿಂದ ಧನ ಸಹಾಯ. ಪ್ರವಾಸೋದ್ಯಮ ವ್ಯವಹಾರ ನಡೆಸುತ್ತಿರುವವರಿಗೆ ವ್ಯವಹಾರ ವಿಸ್ತರಿಸಿ, ಹೆಚ್ಚಿನ ಸಂಪಾದನೆಯಾಗಲಿದೆ. ಹೈನುಗಾರಿಕೆ, ಹೂವು, ಹಣ್ಣು, ತರಕಾರಿ ಮೊದಲಾದ ವ್ಯಾಪಾರಗಳು ಭರ್ಜರಿಯಾಗಿ ನಡೆದು ಲಾಭ ಪಡೆಯಲಿವೆ. ಕ್ರೀಡಾಪಟುಗಳಿಗೆ ಉತ್ತಮ ಸಾಧನೆ ತೋರಲು ಅವಕಾಶ. ಮಡದಿ, ಮಕ್ಕಳ ಮನರಂಜನೆಗೆ ತುಸು ಹೆಚ್ಚು ಖರ್ಚು. ಭಾನು, ಸೋಮ, ಗುರು ಶುಭ ದಿನಗಳು.

**ವಿಶೇಷ ದಿನಗಳು :** 04.10.2021ನೇ ಮಂಗಳವಾರ ಘಾತ ಚತುರ್ದಶಿ.
ದಿ. 6.10.2021ನೇ ಬುಧವಾರ ಮಹಾಲಯ ಅಮಾವಾಸ್ಯೆ.
ದಿ. 7.10.2021ನೇ ಗುರುವಾರ ಶರನ್ನವರಾತ್ರಿ ಉತ್ಸವ ಆರಂಭ

## ಹನಿ ನೀರಾವರಿ ಯೋಜನೆ ಸಹಾಯಧನಕ್ಕಾಗಿ ಅರ್ಜಿ

ದಾವಣಗೆರೆ, ಅ.2- ತೋಟಗಾರಿಕೆ ಇಲಾಖೆಯಿಂದ ಅನುಷ್ಠಾನಗೊಳ್ಳಲಿರುವ ಹನಿ ನೀರಾವರಿ ಯೋಜನೆಗಳಡಿ ಕಾರ್ಯಕ್ರಮದ ಅನುಷ್ಠಾನಕ್ಕಾಗಿ ತಾಲ್ಲೂಕಿನ ರೈತರುಗಳಿಂದ ಸಹಾಯಧನಕ್ಕಾಗಿ ಅರ್ಜಿ ಅಹ್ವಾನಿಸಿದೆ.

ಆಸಕ್ತ ರೈತರು ಅರ್ಜಿಗಳನ್ನು ಕಛೇರಿ ಸಮಯದಲ್ಲಿ ಸಂಬಂಧಿಸಿದ ರೈತ ಸಂಪರ್ಕ ಕೇಂದ್ರದ ಸಹಾಯಕ ತೋಟಗಾರಿಕೆ ಅಧಿಕಾರಿಯವರಿಗೆ ಸಲ್ಲಿಸಲು ಕೋರಿದೆ. ವಾರ್ಷಿಕ ಗುರಿಗಳಿಗಿಂತ ಹೆಚ್ಚಿನ ಅರ್ಜಿಗಳು ಸ್ವೀಕೃತವಾದಲ್ಲಿ ಗುರಿಗಳನ್ವಯ ಜೇಷ್ಠತೆ ಮೂಲಕ ಪರಿಗಣಿಸಲಾಗುವುದು.

ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ (ಹನಿ ನೀರಾವರಿ)ಯಡಿ ಪರಿಶಿಷ್ಟ ಜಾತಿ ಮತ್ತು ಪ.ಪಂಗಡ, ಸಣ್ಣ ಹಾಗೂ ಅತಿ ಸಣ್ಣ ರೈತರಿಗೆ ಶೇ. 90ರಷ್ಟು ಸಹಾಯಧನ ಲಭ್ಯವಿರುತ್ತದೆ. ಇತರೆ ರೈತರಿಗೆ ಶೇಕಡ 45ರಷ್ಟು ಸಹಾಯಧನ ಲಭ್ಯವಿರುತ್ತದೆ.

ಮಾಹಿತಿಗಾಗಿ: ಸಹಾಯಕ ತೋಟಗಾರಿಕೆ ಅಧಿಕಾರಿ, ರೈತ ಸಂಪರ್ಕ ಕೇಂದ್ರ, ಆನಗೋಡು. ಮೊ. 7019819101. ಸಹಾಯಕ ತೋಟಗಾರಿಕೆ ಅಧಿಕಾರಿ,ರೈತ ಸಂಪರ್ಕ ಕೇಂದ್ರ, ಮಾಯಕೊಂಡ-1 ಮೊ. .7899445111. ಮಾಯಕೊಂಡ-2 ಮೋ:- 9902866619. ಸಹಾಯಕ ತೋಟಗಾರಿಕೆ ಅಧಿಕಾರಿ, ರೈತ ಸಂಪರ್ಕ ಕೇಂದ್ರ, ಕಸಬಾ. ಮೋ. 7022244152ಕ್ಕೆ ಸಂಪರ್ಕಿಸಬಹುದಾಗಿದೆ.

## ನಗರದಲ್ಲಿ ಇಂದು ಜಿಲ್ಲಾ ಸಹಕಾರ ಒಕ್ಕೂಟದ ಸಭೆ

ಜಿಲ್ಲಾ ಸಹಕಾರ ಒಕ್ಕೂಟದ 18ನೇ ವಾರ್ಷಿಕ ಸಾಮಾನ್ಯ ಸಭೆಯು ಇಂದು ಮಧ್ಯಾಹ್ನ 12 ಗಂಟೆಗೆ ಒಕ್ಕೂಟದ ಅಧ್ಯಕ್ಷ ಎನ್.ಎ.ಮುರುಗೇಶ್ ಅವರ ಅಧ್ಯಕ್ಷತೆಯಲ್ಲಿ ಎಂ.ಸಿ.ಸಿ ಎ ಬ್ಲಾಕ್‌ನಲ್ಲಿರುವ ಕಲಾಪ್ರಕಾಶ ವೃಂದ ದಾವಣಗೆರೆ-ಹರಿಹರ ಅರ್ಬನ್ ಸಹಕಾರ ಬ್ಯಾಂಕ್ ಸಮುದಾಯ ಭವನದಲ್ಲಿ ಏರ್ಪಡಿಸಲಾಗಿದೆ.

# ದಾವಣಗೆರೆ ವಣಿಕ ನಗರ ವೃತ್ತಿ ರಂಗ ಭೂಮಿಗೆ ಯಾವತ್ತೂ ಅನ್ನವಿಕ್ಕುವ ತವರೂರು

## ಇಲ್ಲಿಗೆ ಬಂದಿಳಿದ ಯಾವುದೇ ನಾಟಕ ಕಂಪನಿ ಬರೀಗೈಲಿ ಹೋದದ್ದೇ ಇಲ್ಲ

ಇದೀಗ ಕಳೆದೆರಡು ತಿಂಗಳಿಂದ ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನ ಚಿತ್ತರಗಿ ಗ್ರಾಮದ 'ಶ್ರೀ ಕುಮಾರ ವಿಜಯ ನಾಟಕ ಸಂಘ' ಇಲ್ಲಿ ಕ್ಯಾಂಪ್ ಹಾಕಿದೆ. ಕೊರೊನಾ ಅಬ್ಬರ ತಣ್ಣಗಾದ ಬಳಿಕ ತಳವೂರಿದ ಮೊದಲ ಕಂಪನಿ ಕೂಡ. ತನ್ನ ಕಂಪನಿಯ ಭಾರೀ ಜನಪ್ರಿಯ ಆಟ 'ಅಪ್ಪ ಚಿಂತ್ಯಾಗ ಮಗಳು ಸಂತ್ಯಾಗ' ನಾಟಕದೊಂದಿಗೆ ಇಲ್ಲಿ ನಾಂದಿ ಹಾಡಿದೆ.



ಈ ವಾರದಿಂದ 'ಬಂದರ ಬಾರಾ ಬೋರಂಗಿ' ಎಂಬ ಹೊಸ ಷೋ ಆರಂಭಿಸಿದೆ. ಮೊಬೈಲ್ ಚಾಟಿಂಗ್ ಹ್ಯಾಂಗೋವರ್‌ನಲ್ಲಿ ಸಿಲುಕಿದ ಜನರನ್ನು ಡ್ರಾಮಾ ಥಿಯೇಟರ್ ಕಡೆಗೆ ಕರೆದು ತರುವಲ್ಲಿ ಕಂಪನಿಯ ಪ್ರಯೋಗಗಳು ಯಶಸ್ಸು ಕಾಣುತ್ತಿವೆ.

ಇಂತಹ ಜೀವಂತ ನಾಟಕ ಕಲೆಗೆ ಪ್ರೋತ್ಸಾಹಿಸಲು ದಾವಣಗೆರೆ ಜಿಲ್ಲಾ ಯೋಗ ಒಕ್ಕೂಟ ತನ್ನ ಸಹಾಯ ಹಸ್ತ ಚಾಚಿದೆ. ಮಹಾತ್ಮಗಾಂಧೀಜಿ ಹಾಗೂ ಲಾಲ್‌ಬಹದ್ದೂರ್ ಶಾಸ್ತ್ರೀಜಿ ಜಯಂತಿ ಸ್ಮರಣಾರ್ಥ ಇಡೀ ಒಂದು ಪ್ರದರ್ಶನದ ಪೂರ್ತಿ ಕಲೆಕ್ಷನ್ ಮೊತ್ತ ಹದಿನೈದು ಸಾವಿರ ರೂ.ಗಳನ್ನು ಪಾವತಿಸಿ ಪ್ರಾಯೋಜಕತ್ವ ಪಡೆದಿದೆ.

ಒಕ್ಕೂಟದ ನೂರಾ ಐವತ್ತು ಸದಸ್ಯರಿಗೆ ನಾಟಕ ನೋಡುವ ಸದಾವಕಾಶ ಕಲ್ಪಿಸಿ, ತನ್ನ ಕಲಾಭಿರುಚಿಯ ಪಾರಮ್ಯ ಮೆರೆದಿದೆ. ಇದಿಷ್ಟು ಮಾತ್ರವಲ್ಲ. ಈ ಕಂಪನಿಯ ಇಪ್ಪತ್ತು ಮಂದಿ ರಂಗ ಕಲಾವಿದರಿಗೆ ಒಂದು ತಿಂಗಳಿಗಾಗುವಷ್ಟು ಕ್ವಿಂಟಾಲ್ ಅಕ್ಕಿ ಸಹಿತ ಇತರೆ ದಿನಸಿ ಕಿಟ್ ಕೂಡ ನೀಡಿ ದಾಸೋಹದ ಸಂಸ್ಕೃತಿಯನ್ನು ಮೆರೆದಿದೆ..!

ಹಾಗೆಯೇ ಈ ಒಕ್ಕೂಟದ ವಾಸುದೇವ್ ರಾಯ್ಕರ್ ಅವರ ಮನೆಯಲ್ಲಿ ಸಿಹಿ ಹೋಳಿಗೆ ಭೋಜನದ ಆತಿಥ್ಯ ನೀಡಿ ಸತ್ಕರಿಸಿದೆ. ಪ್ರತಿ ಒಬ್ಬ ಕಲಾವಿದರಿಗೆ ಹೊಸ ವಸ್ತ್ರದ ಉಡುಗೊರೆ ಕೊಟ್ಟು ಗೌರವಿಸಿದೆ. ಈ ಹಿಂದೆ ಈ ಊರಿನ ಪ್ರಸಿದ್ಧ ವರ್ತಕ ಮನೆತನಗಳು ನಾಟಕ ಕಂಪನಿ ಕಲಾವಿದರಿಗೆ ನೀಡುತ್ತಿದ್ದ ಆತಿಥ್ಯದ ಪರಂಪರೆಯನ್ನು ರಾಯ್ಕರ್ ಅವರು ನೆನಪಿಸಿದ್ದಾರೆ. 'ನಮ್ಮ ರಂಗಭೂಮಿ ಎಲ್ಲಾ ಕಲೆಗಳ ಮೂಲ ಬೇರು. ಹಾಗಾಗಿ ಯೋಗ ಒಕ್ಕೂಟ ಇಂಥದ್ದೊಂದು ಸಾಮಾಜಿಕ ಸೇವೆಗೆ ಮುಂದಾಯಿತು' ಎನ್ನುತ್ತಾರೆ ಸಿನಿಮಾ ಸಿರಿ ಸಂಸ್ಥೆಯ ಮಾಜಿ ಅಧ್ಯಕ್ಷ ವಾಸುದೇವ್ ರಾಯ್ಕರ್.

ಯೋಗ ಒಕ್ಕೂಟದ ಈ ಸತ್ಕಾರಕ್ಕೆ, ಈ ಅಭಿಮಾನಕ್ಕೆ ಹೃದಯದುಂಬಿ ಕೃತಜ್ಞತೆ ಹೇಳಿದ್ದಾರೆ.

**ರಂಗ ವಿಲಾಸದ ಚಿತ್ತರಗಿ :** ಈ 'ಚಿತ್ತರಗಿ'ಎಂಬ ಒಂದು ಸಣ್ಣ ಹಳ್ಳಿ ನಾಟಕ ಕಂಪನಿಗಳ ತವರೂರು. ಈ ಊರಲ್ಲಿ ಒಂದು ಕಾಲಕ್ಕೆ ಏಳೆಂಟು ನಾಟಕ ಕಂಪನಿಗಳು ಇದ್ದವು. ಕಾಲಾಂತರದಲ್ಲಿ ಈಗ ಅಸ್ತಿತ್ವ ಉಳಿಸಿಕೊಂಡ ಏಕೈಕ ಕಂಪನಿ ಇದೊಂದೆ. ಸ್ವಾತಂತ್ರ್ಯ ಪೂರ್ವದ ಅಂದರೆ 1942 ರಲ್ಲಿ ಗದುಗಿನ ಗಾನ ಯೋಗಿ ಶ್ರೀ ಪಂಚಾಕ್ಷರಿ ಗವಾಯಿ ಹಾಗೂ ಚಿತ್ತರಗಿಯ ಶ್ರೀ ಗಂಗಾಧರ ಶಾಸ್ತ್ರಿಗಳ ಅಭಯಾಸ್ತದೊಂದಿಗೆ ಹುಟ್ಟಿದ ಈ ಕಂಪನಿಗೆ ಮುಕ್ಕಾಲು ಶತಮಾನದ ಇತಿಹಾಸವಿದೆ. ತಂದೆ ವೀರಣ್ಣ ಜಾಲಿಹಾಳ್ ಕಟ್ಟಿದ ಕಂಪನಿಯಲ್ಲಿ ಅವರ ಪುತ್ರ ಮಂಜುನಾಥ್ ಜಾಲಿಹಾಳ್, ಪತ್ನಿ ಅಪರಂಜಿ, ಮಗ ವಿಜಯ ಮಹಾಂತೇಶ್, ಸೋದರ ಮಹಾದೇವ್ ಹೀಗೆ ಇಡೀ ಕುಟುಂಬ ನಿರಂತರ ಬಣ್ಣ ಹಚ್ಚುತ್ತಲೇ ಇದೆ. 'ಜಗವೇ ಒಂದು ನಾಟಕ ರಂಗ' ಎಂಬ ಕವಿ ವಾಣಿಗೆ ಅರ್ಥ ಹಚ್ಚುತ್ತಲೇ ಇರುವ ಈ ರಂಗ ಪರಿವಾರಕ್ಕೆ ನಮ್ಮದೊಂದು ಬಿಗ್ ಸೆಲ್ಯೂಟ್.

**- ರವಿ ಆರುಂಡಿ, ದಾವಣಗೆರೆ.**

# ಸಮಾಜ ಸಂಘಟನೆ ಮಾಡಲು ಶ್ರಮಿಸಿ

## ಎನ್ನೆಸ್ಸೆಸ್ ಪದಾಧಿಕಾರಿಗಳಿಗೆ ನಂದಿಗುಡಿ ಶ್ರೀಗಳ ಕರೆ



ಮಲೇಬೆನ್ನೂರು, ಅ.2- ನಂದಿಗುಡಿ ಬೃಹನ್ಮಠದ ಸಮುದಾಯ ಭವನದಲ್ಲಿ ಶನಿವಾರ ನೊಳಂಬ ಸೇವಾ ಘಟಕದ ವತಿಯಿಂದ ಶ್ರೀ ಸಿದ್ದರಾಮೇಶ್ವರ ಶಿವಾಚಾರ್ಯ ಸ್ವಾಮೀಜಿ ಅವರಿಗೆ ಗುರುವಂದನಾ ಕಾರ್ಯಕ್ರಮ ಏರ್ಪಡಿಸಿ, ಗೌರವ ಸಮರ್ಪಿಸಲಾಯಿತು.

ಈ ವೇಳೆ ಆಶೀರ್ವಚನ ನೀಡಿದ ಶ್ರೀಗಳು, ನೊಳಂಬ ಸೇವಾ ಸಂಘದ ರಚನೆಯನ್ನು ಶ್ಲಾಘಿಸಿದರು. ಈ ಸಂಘದ ಮೂಲಕ ರಾಜ್ಯದಲ್ಲಿರುವ ನೊಳಂಬ ವೀರಶೈವ ಸಮಾಜವನ್ನು ಸಂಘಟಿಸಿ, ಸಮಾಜಕ್ಕೆ ಸಿಗಬೇಕಾದ ಸೌಲಭ್ಯ ದೊರಕಿಸಿಕೊಡಲು ಹೋರಾಟ ಮಾಡಬೇಕೆಂದು ಶ್ರೀಗಳು ತಿಳಿಸಿದರು.

ಸಂಘದ ಮುಖ್ಯಸ್ಥ ಡಾ. ಧನಂಜಯ, ಸಮಾಜ ಮುಖಂಡ ಜಿಗಳಿ ಇಂದೂಧರ್, ನೊಳಂಬ ವೀರಶೈವ ಸಂಘದ ಕೇಂದ್ರ ಸಮಿತಿ ನಿರ್ದೇಶಕ ಈಶ್ವರಪ್ಪ ಮಾತನಾಡಿದರು.

ಉಪನ್ಯಾಸಕ ಹಿಂಡಸಘಟ್ಟೆ ಹನುಮಗೌಡ, ಲೋಕಪ್ರಿಯ, ನಾಗಯ್ಯ, ಜಿಗಳಿಯ ಎಂ.ವಿ.ನಾಗರಾಜ್, ಎಕ್ಕೆಗೊಂದಿ ರುದ್ರ ಗೌಡ, ಬಿ.ವಿ.ನಂದಿಗೌಡ, ಜಿ.ಬಿ.ರುದ್ರಗೌಡ, ಎಂ.ಬಿ.ಹನುಮ ಗೌಡ ಮುಂತಾದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಸಂಘದ ಹರಿಹರ ತಾಲ್ಲೂಕಿನ ಪದಾಧಿಕಾರಿಗಳನ್ನಾಗಿ ಕೊಕ್ಕನೂರಿನ ಕೆ.ಪಿ.ಆಂಜನೇಯ ಪಾಟೀಲ್, ಮಲೇಬೆನ್ನೂರಿನ ಗಜೇಂದ್ರ ಸ್ವಾಮಿ, ಪಾಳ್ಯದ ಪ್ರವೀಣ್, ಜಿಗಳಿಯ ಬಸವನಗೌಡ, ಗೋವಿನಹಾಳ್ ದಡ್ಡಿ ರಾಜೀವ್ ಅವರನ್ನು ಆಯ್ಕೆ ಮಾಡಲಾಯಿತು.

## ಹರಪನಹಳ್ಳಿ : ಕಾಂಗ್ರೆಸ್‌ನಿಂದ ಕಾಲ್ನಡಿಗೆ ಜಾಥಾ



ಹರಪನಹಳ್ಳಿ, ಅ.2- ಮಹಾತ್ಮ ಗಾಂಧಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಅವರ ಜನ್ಮದಿನಾಚರಣೆ ಅಂಗವಾಗಿ ಮಹಾತ್ಮ ಗಾಂಧಿ ಗ್ರಾಮ ಸ್ವರಾಜ್ ಹೆಸರಿನಡಿ ಕಾಂಗ್ರೆಸ್ ಪಕ್ಷದ ವತಿಯಿಂದ ಕಾಲ್ನಡಿಗೆ ಜಾಥಾ ಜರುಗಿತು.

ಪಟ್ಟಣದ ಕಾಂಗ್ರೆಸ್ ಕಚೇರಿಯಿಂದ ದೇವರ ತಿಮ್ಮಲಾಪುರದವರೆಗೆ ಕಾಂಗ್ರೆಸ್ ಮುಖಂಡರು, ಕಾರ್ಯಕರ್ತರು ಸಾಮರಸ್ಯ ಜಾಥಾ ನಡೆಸಿದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬೇಲೂರು ಅಂಜಿನಪ್ಪ, ಚಿಗಟೇರಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಿ. ಪ್ರೇಮಕುಮಾರ್, ಹರಪನಹಳ್ಳಿ ಉಸ್ತುವಾರಿ ವಿಜಯಕುಮಾರ್, ಕೆಪಿಸಿಸಿ ಮಾಧ್ಯಮ ವಿಶ್ಲೇಷಕರಾದ ಶ್ರೀಮತಿ ಎ.ಪಿ. ವೀಣಾ ಮಹಾಂತೇಶ್, ಕೆಪಿಸಿಸಿ ಯುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪಿ.ಟಿ. ಭರತ್, ದಾವಣಗೆರೆ ಜಿಲ್ಲಾ ಕಾಂಗ್ರೆಸ್ ಪ್ರಚಾರ ಸಮಿತಿಯ ಅಧ್ಯಕ್ಷ ಕಂಚಿಕೇರಿ ಎಂ.ಟಿ. ಸುಭಾಷ್ಚಂದ್ರ, ಎಚ್.ಬಿ. ಪರಶುರಾಮಪ್ಪ, ಪುರಸಭೆ ಸದಸ್ಯರಾದ ಎಂ.ವಿ. ಅಂಜಿನಪ್ಪ, ಜಾಕೀರ್ ಹುಸೇನ್, ಗೊಂಗಡಿ ನಾಗರಾಜ್, ಮುತ್ತಿಗಿ ಜಂಬಣ್ಣ, ಜೋಗಿನಮರ ಭರತೇಶ್, ಕವಿತಾ ವಾಗೀಶ್, ಹೆಚ್. ಕೊಟ್ರೇಶ್, ಮುಖಂಡ ರಾದ ಆಲದಹಳ್ಳಿ ಷಣ್ಮುಖಪ್ಪ, ಮುತ್ತಿಗಿ ಜಂಬಣ್ಣ, ಗಿಡ್ಡಳ್ಳಿ ನಾಗರಾಜ್ ಹುಲಿಕಟ್ಟೆ ಚಂದ್ರಪ್ಪ, ಎಂ.ಬಿ. ಹಾಲೇಶನಾಯ್ಕ, ಪಿ. ಶಿವಕುಮಾರನಾಯ್ಕ, ಶ್ರೀಕಾಂತ್ ಯಾದವ್, ಮಹಾಂತೇಶ್ ನಾಯ್ಕ್, ಎನ್. ಮುಜೀದ್, ರಿಯಾಜ್ ಅಹ್ಮದ್, ರಿಯಾಜ್, ನಯಾಜ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

# ನಗರದಲ್ಲಿ ಇಂದು ರಾಜ್ಯ ಮಟ್ಟದ ಶ್ವಾನ, ಬೆಕ್ಕಿನ ಪ್ರದರ್ಶನ ಸ್ಪರ್ಧೆ




ಯುಬಿಡಿಟಿ ಕಾಲೇಜಿನ ಮೈದಾನ ದಲ್ಲಿ ಅಕ್ಟೋಬರ್ 3ರಂದು ರಾಜ್ಯ ಮಟ್ಟದ 5ನೇ ವರ್ಷದ ಶ್ವಾನ ಪ್ರದರ್ಶನ ಹಾಗೂ ಮೊದಲನೇ ವರ್ಷದ ಬೆಕ್ಕಿನ ಪ್ರದರ್ಶನ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿದೆ ಎಂದು ದಾವಣಗೆರೆ ಪೆಟ್ ಲವರ್ಸ್ ಅಸೋಸಿಯೇಷನ್‌ನ ಸಚಿನ್ ತಿಳಿಸಿದ್ದಾರೆ.

ಇಂದು ಬೆಳಿಗ್ಗೆ 9 ಗಂಟೆಯಿಂದ ಸ್ಪರ್ಧೆಗಳು ನಡೆಯಲಿವೆ. 11 ಗಂಟೆಗೆ ಸಂಸದ ಜಿ.ಎಂ. ಸಿದ್ದೇಶ್ವರ ಪ್ರದರ್ಶನ ಸ್ಪರ್ಧೆ ಉದ್ಘಾಟಿಸಲಿದ್ದಾರೆ. ಜಿಲ್ಲಾಧಿಕಾರಿ ಮಹಾಂತೇಶ ಬೀಳಗಿ ಹಾಗೂ ಎಸ್ಪಿ ಸಿ.ಬಿ. ರಿಷ್ಯಂತ್ ಭಾಗವಹಿಸಲಿದ್ದಾರೆ. ವಿವರಕ್ಕೆ ಸಂಪರ್ಕಿಸಿ : 984417 4555, 8147912080, 9844430647.

ಸಂಜೆ ಬಹುಮಾನ ವಿತರಣಾ ಕಾರ್ಯಕ್ರಮ ವಿದ್ದು, ಮಾಜಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಬಹುಮಾನ ವಿತರಣೆ ಮಾಡಲಿದ್ದಾರೆ.

## ಜಿಗಳಿ : ಗಾಂಧೀಜಿ, ಶಾಸ್ತ್ರೀಜಿ ಜಯಂತಿ ಆಚರಣೆ



ಮಲೇಬೆನ್ನೂರು, ಅ.2- ಜಿಗಳಿ ಗ್ರಾ.ಪಂ. ಕಚೇರಿ ಮತ್ತು ಉನ್ನತೀಕರಿಸಿದ ಸ.ಹಿ.ಪ್ರಾ. ಶಾಲೆಯಲ್ಲಿ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಮತ್ತು ಮಾಜಿ ಪ್ರಧಾನಿ ಲಾಲ್ ಬಹದ್ದೂರ್ ಶಾಸ್ತ್ರೀಜಿ ಅವರ ಜನ್ಮ ದಿನಾಚರಣೆಯನ್ನು ಆಚರಿಸಲಾಯಿತು.

ಗ್ರಾ.ಪಂ. ಅಧ್ಯಕ್ಷೆ ಶ್ರೀಮತಿ ಆಶಾ ಅಣ್ಣಪ್ಪ, ಉಪಾಧ್ಯಕ್ಷ ಮಲ್ಲನಗೌಡ, ಸದಸ್ಯರಾದ ಶ್ರೀಮತಿ ಕರಿಯಮ್ಮ, ಶ್ರೀಮತಿ ವಿನೋದ ಜಿ. ಆರ್.ಹಾಲೇಶ್‌ಕುಮಾರ್, ಎನ್.ಎಂ. ಪಾಟೀಲ್, ಡಿ.ಎಂ.ಹರೀಶ್, ಕೆ.ಜಿ. ಬಸವರಾಜ್, ಗ್ರಾಮದ ಮುಖಂಡರಾದ ಜಿ. ಆನಂದಪ್ಪ, ಬಿ.ಎಂ.ದೇವೇಂದ್ರಪ್ಪ, ಎಂ.ವಿ. ನಾಗರಾಜ್, ಎಕ್ಕೆಗೊಂದಿ ರುದ್ರಗೌಡ, ಸಿ. ಎನ್.ಪರಮೇಶ್ವರಪ್ಪ, ಎಸ್‌ಡಿಎಂಸಿ ಅಧ್ಯಕ್ಷ ಜಿ.ಆರ್.ಚಂದ್ರಪ್ಪ, ಉಪಾಧ್ಯಕ್ಷೆ ರಶ್ಮಿ ವಿಜಯ ಭಾಸ್ಕರ್, ಟಿ.ಗದಿಗೆಪ್ಪ, ಶಾಲಾ ಮುಖ್ಯ ಶಿಕ್ಷಕ ಕರಿಬಸಪ್ಪ, ಗ್ರಾ.ಪಂ. ಕಾರ್ಯದರ್ಶಿ ಶೇಖರ್‌ನಾಯ್ಕ, ಬಿಲ್ ಕಲೆಕ್ಟರ್ ಬಿ. ಮೌನೇಶ್ ಮತ್ತಿತರರು ಭಾಗವಹಿಸಿದ್ದರು.

## ಫಣಿಯಾಪುರದಲ್ಲಿ ಕಬ್ಬು ಬೆಳೆ ನೆಲಸಮ




ಹರಪನಹಳ್ಳಿ, ಅ.2- ತಾಲ್ಲೂಕಿನಲ್ಲಿ ನಿನ್ನೆ ಸುರಿದ ಮಳೆಯಿಂದಾಗಿ ಅಪಾರ ಬೆಳೆ ಹಾಗೂ ಆಸ್ತಿ ಪಾಸ್ತಿಗಳಿಗೆ ಹಾನಿಯಾಗಿದೆ. ತಾಲ್ಲೂಕಿನ ಫಣಿಯಾಪುರ ಗ್ರಾಮದಲ್ಲಿ ಆಲೂರು ನಾಗಪ್ಪನವರಿಗೆ ಸೇರಿದ 2 ಎಕರೆ ಕಬ್ಬು ಪೂರ್ತಿ ನೆಲ ಸಮವಾಗಿದೆ. ಈ ವೇಳೆ ಗ್ರಾಮದ ಯುವ ಮುಖಂಡ ಫಣಿಯಾಪುರ ನಿಂಗರಾಜ್ ಇದ್ದರು.

# ದೇಶಕ್ಕಾಗಿ ಹೋರಾಡಿದ ಮಹನೀಯರ ಆದರ್ಶಗಳನ್ನು ಮೈಗೂಡಿಸಿಕೊಳ್ಳಿ

ಹರಪನಹಳ್ಳಿ, ಸೆ.2- ದೇಶಕ್ಕಾಗಿ ಹೋರಾಡಿದ ಮಹನೀಯರ ಆದರ್ಶಗಳನ್ನು ಮೈಗೂಡಿಸಿಕೊಂಡು ಇಂದಿನ ಯುವ ಸಮೂಹಕ್ಕೆ ಕಾನೂನಿನ ಅರಿವು ಮೂಡಿಸುವ ಕಾರ್ಯವನ್ನು ನಾವೆಲ್ಲರೂ ಮಾಡಬೇಕಾಗಿದೆ ಎಂದು ಜೆಎಂಎಫ್‌ಸಿ ನ್ಯಾಯಾಲಯದ ಹಿರಿಯ ಸಿವಿಲ್ ನ್ಯಾಯಾಧೀಶೆ ಹಾಗೂ ತಾಲ್ಲೂಕು ಕಾನೂನು ಸೇವಾ ಸಮಿತಿ ಅಧ್ಯಕ್ಷೆ ಎಂ. ಭಾರತಿ ಹೇಳಿದರು.

ಪಟ್ಟಣದ ತರಳಬಾಳು ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದ್ದ ತಾಲ್ಲೂಕು ಕಾನೂನು ಸೇವಾ ಸಮಿತಿ, ವಕೀಲರ ಸಂಘ, ತಾಲ್ಲೂಕು ಆಡಳಿತ ಇವರ ಸಂಯುಕ್ತಾಶ್ರಯದಲ್ಲಿ ಭಾರತ ಸ್ವಾತಂತ್ರ್ಯದ 75 ನೇ ವರ್ಷಾಚರಣೆ ಆಜಾದಿ ಕಾ ಅಮೃತ ಮಹೋತ್ಸವ ಆಚರಣೆ ಹಾಗೂ ಗಾಂಧಿ ಜಯಂತಿ, ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿ ನಿಮಿತ್ಯ ಅವರುಗಳ ಭಾವ ಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದರು.



ಹರಪನಹಳ್ಳಿಯ ಹಿರಿಯ ನ್ಯಾಯಾಧೀಶರಾದ ಎಂ. ಭಾರತಿ

ಹಿರಿಯ ಹಾಗೂ ಕಿರಿಯ ವಕೀಲರು ಕಿರು ನಾಟಕದ ಮೂಲಕ ಲೋಕ್‌ಅದಾಲತ್ ಉಪಯೋಗವನ್ನು ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ತಿಳಿಸಿಕೊಡುವ ಕಾನೂನು ಅರಿವು ಕಾರ್ಯಕ್ರಮವನ್ನು ಉದ್ಘಾಟಿಸಿದ ಬಳಿಕ ಮಾತನಾಡಿದ ಅವರು, ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಮಹನೀಯರನ್ನು ನಾವು ನೆನೆಯಬೇಕಾಗಿದೆ. ಇಂತಹ ಮಹನೀಯರ ಆದರ್ಶ ಅಳವಡಿಸಿಕೊಂಡು ಸಮಾಜದಲ್ಲಿ ಕಾನೂನಿನ ಬಗ್ಗೆ ಅರಿವು ಮೂಡಿಸಬೇಕಾಗಿದೆ ಎಂದರು.

ಈ ಸಂದರ್ಭದಲ್ಲಿ ಸಿವಿಲ್ ನ್ಯಾಯಾಧೀಶರೂ ಆದ ತಾಲ್ಲೂಕು ಕಾನೂನು ಸೇವಾ ಸಮಿತಿ ಕಾರ್ಯದರ್ಶಿ ಫಕ್ಕೀರಪ್ಪ ಕೆಳಗೇರಿ, ವಕೀಲರ ಸಂಘದ ಅಧ್ಯಕ್ಷ ಕೆ. ಚಂದ್ರೇಗೌಡ, ಉಪಾಧ್ಯಕ್ಷ ಟಿ. ವೆಂಕಟೇಶ್, ಕಾರ್ಯದರ್ಶಿ ಕೆ. ಬಸವರಾಜ್, ಸರ್ಕಾರಿ ಅಭಿಯೋಜಕ ಎನ್. ಮೀನಾಕ್ಷಿ, ಅಪರ ಸರ್ಕಾರಿ ವಕೀಲ ವಿ.ಜಿ. ಪ್ರಕಾಶ್ ಗೌಡ, ಲೋಕ ಅದಾಲತ್ ಉಪಯೋಗ ಕುರಿತು ಮಾತನಾಡಿದರು. ಪಿ. ಜಗದೀಶ್ ಗೌಡ್ರು, ಆರೋಗ್ಯ ಶಿಕ್ಷಣಾಧಿಕಾರಿ ರೇಣುಕ, ಸಿ.ಜಿ. ಭುವನೇಶ್ವರಿ, ಕಾನೂನು ಸೇವಾ ಸಮಿತಿಯ ಪ್ರಯೋಗ ಕುರಿತು ಮಂಜುನಾಥ ಕಣಿವಿಹಳ್ಳಿ ಮಾತನಾಡಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಎಂ. ವೀರಭದ್ರಯ್ಯ, ಹಿರಿಯ ನ್ಯಾಯವಾದಿಗಳಾದ ಕೆ. ಜಗದಪ್ಪ, ಗಂಗಾಧರ್ ಗುರುಮಠ್, ಎಂ. ಅಜ್ಜಪ್ಪ, ರಾಮನಗೌಡ ಪಾಟೀಲ್, ಎಸ್. ಎಂ. ರುದ್ರಮನಿ, ಬಿ. ಗೋಣಿಬಸಪ್ಪ, ಎಂ. ಮೃತುಂಜಯ್ಯ, ಜಿ.ಎಸ್. ತಿಪ್ಪೇಸ್ವಾಮಿ, ಕೆಂಗಳ್ಳಿ ಪ್ರಕಾಶ್, ರೇಣುಕಾ, ಸೀಮಾ, ನಂದೀಶ್‌ನಾಯ್ಕ, ರೇವಣಸಿದ್ದಪ್ಪ, ಮಂಜುನಾಥ್, ನಾಗರಾಜ್ ಇನ್ನಿತರರಿದ್ದರು.

# ದೊಗ್ಗಳ್ಳಿ ಗೌಡ್ರು ಸಮಾಜದ ಬೆಳ್ಳಿ ಚುಕ್ಕಿ



## ಪ್ರಥಮ ವರ್ಷದ ಪುಣ್ಯಸ್ಮರಣೆಯಲ್ಲಿ ಶಂಕರ್ ಹಲಗತ್ತಿ ಪುಟ್ಟರಾಜು ಅವರ 'ಬರಿಗೈ ಬದುಕು' ಕವನ ಸಂಕಲನ ಬಿಡುಗಡೆ

ದಾವಣಗೆರೆ, ಅ.2- ಶ್ರೇಷ್ಠ, ಧೀಮಂತ ವ್ಯಕ್ತಿತ್ವ ಹೊಂದಿದ್ದ ದೊಗ್ಗಳ್ಳಿಗೌಡ್ರು ಪುಟ್ಟರಾಜು ಅವರು ಸಮಾಜದ ಬೆಳ್ಳಿ ಚುಕ್ಕಿ ಎಂದು ಧಾರವಾಡದ ಕರ್ನಾಟಕ ಬಾಲ ವಿಕಾಸ ಅಕಾಡೆಮಿ ಮಾಜಿ ಅಧ್ಯಕ್ಷ ಶಂಕರ್ ಹಲಗತ್ತಿ ನೆನೆದರು.

ಅವರು, ನಗರದ ಸಿದ್ದಗಂಗಾ ವಿದ್ಯಾಸಂಸ್ಥೆ ಆವರಣದಲ್ಲಿ ಡಿ.ಜಿ. ಪುಟ್ಟರಾಜು ಗೆಳೆಯರ ಬಳಗ, ಜೆ.ಹೆಚ್. ಪಟೇಲ್ ಕಾಲೇಜು, ದಾವಣಗೆರೆ ರಂಗ ಅನಿಕೇತನ ಕಲಾ ತಂಡ ಹಾಗೂ ಪುಟ್ಟರಾಜು ಅವರ ಕುಟುಂಬ ವರ್ಗ ಇವರುಗಳ ಸಂಯುಕ್ತಾಶ್ರಯದಲ್ಲಿ ದೊಗ್ಗಳ್ಳಿ ಗೌಡ್ರು ಪುಟ್ಟ ರಾಜು ಅವರ ಪ್ರಥಮ ವರ್ಷದ ಪುಣ್ಯಸ್ಮರಣೆ ಸಮಾರಂಭದಲ್ಲಿ 'ಬರಿಗೈ ಬದುಕು' ಕವನ ಸಂಕಲನ ಬಿಡುಗಡೆಗೊಳಿಸಿ ಮಾತನಾಡಿದರು.

ನಾವು ಎಷ್ಟು ದಿನ ಬದುಕಿದೆವು ಎಂಬುದಕ್ಕಿಂತ ಬದುಕಿದ್ದ ಸಮಯದಲ್ಲಿ ಸಮಾಜಕ್ಕೇನು ಕೊಡುಗೆ ಕೊಟ್ಟೆವು ಎಂಬುದು ಮುಖ್ಯ. ಹೀಗೆ ತಮಗಾಗಿ ಏನನ್ನೂ ಬಯಸದೇ ಇಡೀ ಬದುಕಿನ ತುಂಬಾ ಸಮಾಜಕ್ಕೆ ಕೊಡುಗೆ ನೀಡಬೇಕೆಂಬ ತುಡಿತ, ಆಲೋಚನೆ, ಕನಸುಗಳನ್ನು ಹೊಂದಿದ್ದರು. ಅಲ್ಲದೇ, ಆ ಬದ್ಧತೆ, ಆಲೋಚನೆಗಳನ್ನು ಕ್ರಿಯೆಗೆ ತರುವ ನಿಟ್ಟಿನಲ್ಲಿ ನಿಸ್ವಾರ್ಥದಿಂದ ಸಮಾಜ ಸೇವಾ ಕಾರ್ಯದಲ್ಲಿ ತೊಡಗಿಕೊಂಡಿದ್ದರು. ಇಂತಹ ಮಾದರಿ ವ್ಯಕ್ತಿತ್ವವುಳ್ಳ ಪುಟ್ಟರಾಜು ಅವರು ಸಮಾಜದೊಳಗಿನ ಹೀರೋ ಆಗಿದ್ದು, ಯುವ ಪೀಳಿಗೆಗೆ ಆದರ್ಶವಾಗಿದ್ದಾರೆ ಎಂದು ತಿಳಿಸಿದರು.

ಶಿಕ್ಷಣ ವ್ಯಾಪಾರೀಕರಣವಾಗಿರುವ ಪ್ರಸ್ತುತ ದಿನಗಳಲ್ಲಿ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಹಂಬಲ ಹೊತ್ತು, ವಿಶಾಲವಾದ ಪ್ರದೇಶದಲ್ಲಿ ವಸತಿ ಸಹಿತ ಶಿಕ್ಷಣ ನೀಡಬೇಕೆಂಬುದು ಸೇರಿದಂತೆ ಇಂತಹ ನೂರಾರು ಸಮಾಜ ಸೇವಾ ಕಾರ್ಯಗಳ ಕನಸು ಕಂಡಿದ್ದರು ಎಂದ ಅವರು, ಪುಟ್ಟರಾಜು ಅವರ ಇಂತಹ ಕನಸುಗಳು ಮುಂದೆಯೂ ಸಾಕಾರಗೊಳ್ಳಲು ಪುಟ್ಟರಾಜು ಗೆಳೆಯರ ಬಳಗ ಪುಣ್ಯಸ್ಮರಣೆ ಮುಖೇನ ರಚನಾತ್ಮಕ ಕಾರ್ಯಕ್ರಮಗಳನ್ನು ಆಯೋಜಿಸಲು ದಿಟ್ಟ ಹೆಜ್ಜೆ ಇಟ್ಟಿದ್ದು, ಅವರ ಹೆಸರನ್ನು ಸದಾ ಹಸಿರಾಗಿಸುವ ಕಾರ್ಯಕ್ಕೆ ಅಣಿಯಾಗಿದೆ ಎಂದು ಸಂತಸ ಪಟ್ಟರು.

ಸಾನಿಧ್ಯ ವಹಿಸಿದ್ದ ವಿರಕ್ತ ಮಠದ ಶ್ರೀ ಬಸವಪ್ರಭು ಸ್ವಾಮೀಜಿ ಆಶೀರ್ವಚನ ನೀಡುತ್ತಾ, ದೊಗ್ಗಳ್ಳಿಗೌಡ್ರು ಪುಟ್ಟರಾಜು ಅವರು ಎಲ್ಲಿಯೂ ಹೋಗಿಲ್ಲ. ನಮ್ಮ ಹೃದಯದಲ್ಲಿ ನೆಲೆಸಿದ್ದಾರೆ. ಬಸವಣ್ಣ, ಅಂಬೇಡ್ಕರ್, ಗೌತಮ ಬುದ್ಧ, ವಿವೇಕಾನಂದರಂತಹ ಮಹನೀಯರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಂಡ ಪುಟ್ಟರಾಜು ಅವರು ನಿಜವಾದ ಸಾರ್ಥಕ ಜೀವನ ಹೊಂದುವ ಮೂಲಕ ಎಲ್ಲರ ಹೃದಯ ಸಿಂಹಾಸನದಲ್ಲಿದ್ದಾರೆ. ಸ್ನೇಹ ಜೀವಿಗಳಾಗಿದ್ದ ಪುಟ್ಟರಾಜು ನಮ್ಮೊಂದಿಗೆ ಭೌತಿಕವಾಗಿ ಇಲ್ಲದಿದ್ದರೂ ಮನಸು, ಹೃದಯದಲ್ಲಿ ಸದಾ ಶಾಶ್ವತವಾಗಿದ್ದಾರೆ. ಅವರಲ್ಲಿ ಉತ್ತಮ ಅಧಾತ್ಮ ಚಿಂತಕ, ವೈಚಾರಿಕ ವಿಜ್ಞಾನಿ, ತತ್ವಜ್ಞಾನಿ, ಸಮಾನತಾ ವಾದಿ, ಮಾನವತಾವಾದಿ ಇದ್ದನು ಎಂದು ಸ್ಮರಿಸಿದರು.

ವೇದನೆ ಇದ್ದಾಗ ಸಾಹಿತ್ಯ ಹುಟ್ಟಲಿದೆ. ಸಾಹಿತ್ಯಕ್ಕೆ ಎಂದಿಗೂ ಸಾವಿಲ್ಲ. ಸಾಹಿತ್ಯದ ಮುಖೇನ ಸೇವೆ ಸಲ್ಲಿಸುವುದು ಶಾಶ್ವತವಾಗಿರಲಿದೆ. ಜಗತ್ತಿನ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ವಚನ ಸಾಹಿತ್ಯದಲ್ಲಿದೆ. ಬದುಕಿನ ಅನುಭವಗಳನ್ನು ಬರೆದಿಡುವ ಕೆಲಸ ಮಾಡಬೇಕು. ಬದುಕು ಮತ್ತು ಸಾಹಿತ್ಯ ಒಂದೇ ಆದಾಗ ಸಾಹಿತ್ಯದ ಮೌಲ್ಯ ಹೆಚ್ಚಲಿದೆ. ನಡೆ-ನುಡಿ ಒಂದಾದ ಸಾಹಿತ್ಯ ಬದುಕೇ ಶ್ರೇಷ್ಠ. ಅಂತಹ ಒಳ್ಳೆಯ ಸಾಹಿತ್ಯವನ್ನು ಪುಟ್ಟರಾಜು ನೀಡಿದ್ದಾರೆ ಎಂದು ತಿಳಿಸಿದರು.

ದಾವಣಗೆರೆ ವಿವಿ ಡಾ. ಬಾಬು ಜಗಜೀವನ್ ರಾಮ್ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ನಿರ್ದೇಶಕ ಡಾ. ಹೆಚ್. ವಿಶ್ವನಾಥ್ ಮಾತನಾಡುತ್ತಾ, ದೊಗ್ಗಳ್ಳಿಗೌಡ್ರು ಪುಟ್ಟರಾಜು ಅವರೊಂದಿಗಿನ ಸ್ನೇಹ ಮತ್ತು ಒಡನಾಟದ ಬಗ್ಗೆ ಮನದುಂಬಿ ಮೆಲುಕು ಹಾಕಿದರಲ್ಲದೇ, ಸಮ ಸಮಾಜ ನಿರ್ಮಾಣದ ಬಸವಾದಿ ಶರಣರ ಆಶಯಗಳನ್ನು ಪುಟ್ಟರಾಜು ಅವರು ಬದುಕಿನಲ್ಲಿ ಮೈಗೂಡಿಸಿಕೊಂಡಿದ್ದರು. ಅಂತಹುದೇ ಆಶಯಗಳು ಅವರದ್ದಾಗಿತ್ತು. ಚೈತನ್ಯ ಪೂರಕ ಗ್ರಂಥ ಭಂಡಾರ ಅವರಲ್ಲಿತ್ತು. ಮುಂದಿನ ದಿನಮಾನಗಳಲ್ಲಿ ಅವರ ಸಮಾಜಮುಖಿಯುಳ್ಳ ಇಂತಹ ಪುಸ್ತಕಗಳು ಮೂಡಿಬರಬೇಕು. ಈ ಪುಸ್ತಕದ ಬಗ್ಗೆಯೇ ವಿವಿ ಮಟ್ಟದಲ್ಲಿ ಉಪನ್ಯಾಸ ನಡೆಸುವ ಪ್ರಯತ್ನ ನಡೆಸಲಾಗುವುದು. ಬಿಡುಗಡೆಯಾದ ಈ ಪುಸ್ತಕವನ್ನು ಕನ್ನಡ ಗ್ರಂಥಾಲಯಗಳಲ್ಲಿ ಇರಿಸಿ ಕನ್ನಡ ಐಚ್ಛಿಕ ವಿದ್ಯಾರ್ಥಿಗಳು ಓದುವಂತಹ ವ್ಯವಸ್ಥೆ ಮಾಡುತ್ತೇನೆಂದರು.

ಚಿಂತಕರಾದ ಡಾ. ಎ.ಬಿ. ರಾಮಚಂದ್ರಪ್ಪ, ದಾದಾಪೀರ್ ನವಿಲೇಹಾಳ್ ಮಾತನಾಡಿದರು. ಇದೇ ವೇಳೆ ಭಾರತಾಂಬೆ ನಾಟಕ ಪ್ರದರ್ಶನವಾಯಿತು. ಕಾರ್ಯಕ್ರಮದಲ್ಲಿ ದೊಗ್ಗಳ್ಳಿಗೌಡ್ರು ಪುಟ್ಟರಾಜು ಅವರ ಪತ್ನಿ, ಜೆ. ಹೆಚ್. ಪಟೇಲ್ ಕಾಲೇಜಿನ ಪ್ರಾಚಾರ್ಯರಾದ ಪ್ರತಿಭಾ ಪಿ. ದೊಗ್ಗಳ್ಳಿ ಅಧ್ಯಕ್ಷತೆ ವಹಿಸಿದ್ದರು. ಸಿದ್ದಗಂಗಾ ವಿದ್ಯಾಸಂಸ್ಥೆಯ ಮುಖ್ಯಸ್ಥೆ ಜಸ್ಟಿನ್ ಡಿಸೋಜಾ, ರಂಗ ನಿರ್ದೇಶಕ ರಘು ಶಿಕಾರಿ ಸೇರಿದಂತೆ ಇತರರು ಇದ್ದರು.

# ಸದಾಶಿವ ವರದಿ ಜಾರಿ ವಿರುದ್ಧದ ಹೋರಾಟಕ್ಕೆ ಬೆಂಬಲವಿಲ್ಲ

**ಛಲವಾದಿ ಸಮಾಜ**

ಹರಪನಹಳ್ಳಿ, ಅ.2- ನ್ಯಾ. ಸದಾಶಿವ ಆಯೋಗದ ವರದಿ ಜಾರಿ ಅನುಷ್ಠಾನ ವಿರೋಧಿಸಿ ನಡೆಸುವ ಹೋರಾಟಕ್ಕೆ ಛಲವಾದಿ ಸಮಾಜದ ಬೆಂಬಲ ಇಲ್ಲ ಎಂದು ಹರಪನಹಳ್ಳಿ ತಾಲ್ಲೂಕು ಛಲವಾದಿ ಸಮಾಜ ತಿಳಿಸಿದೆ.

ಸಮಾಜವು ನ್ಯಾ. ಸದಾಶಿವ ಆಯೋಗದ ವರದಿ ಜಾರಿ ಅನುಷ್ಠಾನ ವಿರೋಧಿಸಿ ನಡೆಸುವ ಹೋರಾಟಕ್ಕೆ ಛಲವಾದಿ ಸಮಾಜದ ಬೆಂಬಲ ಇಲ್ಲ. ಸೆಪ್ಟೆಂಬರ್ 26 ರಂದು ಕೆಲ ಸ್ಪೃಶ್ಯ ಜನಾಂಗಗಳು ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿ ನಡೆಸುತ್ತಿದ್ದ ಸಂದರ್ಭದಲ್ಲಿ ನಮ್ಮ ಸಮಾಜದ ಯಾವ ಮುಖಂಡರು ಭಾಗವಹಿಸಿರಲಿಲ್ಲ. ಆದರೂ ಮನವಿ ಪತ್ರದಲ್ಲಿ ನಮ್ಮ ಸಮಾಜದ ಹೆಸರು ಉಲ್ಲೇಖ ಮಾಡಿರುವುದರಿಂದ ಕೆಲ ಪತ್ರಿಕೆಗಳಲ್ಲಿ ನಮ್ಮ ಸಮಾಜದ ಹೆಸರು ವರದಿಯಾಗಿದೆ.

ಇದರಿಂದ ನಮ್ಮ ಸಮಾಜಕ್ಕೆ ನೋವು ಉಂಟಾಗಿದ್ದು ರಾಜ್ಯ, ಜಿಲ್ಲೆ ಹಾಗೂ ತಾಲ್ಲೂಕು ಛಲವಾದಿ ಮಹಾಸಭಾಗಳಿಗೆ ತಪ್ಪು ಸಂದೇಶ ರವಾನೆಯಾಗುತ್ತಿರುವುದು ಅತ್ಯಂತ ನೋವಿನ ಸಂಗತಿ ಎಂದರು.

ರಾಜ್ಯ ಹಾಗೂ ಜಿಲ್ಲಾ ಛಲವಾದಿ ಮಹಾಸಭಾದ ಪದಾಧಿಕಾರಿಗಳು ನಮಗೆ ನ್ಯಾ. ಸದಾಶಿವ ಆಯೋಗದ ವರದಿ ಕುರಿತು ಪರ ಮತ್ತು ವಿರೋಧ ಎರಡರಲ್ಲೂ ಭಾಗವಹಿಸದೇ ತಟಸ್ಥ ನಿಲುವು ತಾಳುವಂತೆ ಸೂಚನೆ ನೀಡಿದ್ದ ಹಿನ್ನೆಲೆಯಲ್ಲಿ ತಾಲ್ಲೂಕಿನಲ್ಲಿ ನಮ್ಮ ಛಲವಾದಿ ಸಮಾಜವು ತಟಸ್ಥ ನಿಲುವು ತಾಳಿದೆ ಎಂದರು.

ಹರಪನಹಳ್ಳಿ ತಾಲ್ಲೂಕಿನ ಛಲವಾದಿ ಮಹಾಸಭಾದ ಪ್ರಧಾನ ಕಾರ್ಯದರ್ಶಿಗಳು ಹಾಗೂ ಪದಾಧಿಕಾರಿಗಳು, ಹಿರಿಯ ಮುಖಂಡರುಗಳ ಗಮನಕ್ಕೆ ತರಲಾರದೆ ಸಮಾಜದ ಹೆಸರು ದುರ್ಬಳಕೆ ಮಾಡಿಕೊಂಡಿರುವುದು ಗಮನಕ್ಕೆ ಬಂದಿದೆ. ಇಂತಹ ಘಟನೆ ಮರುಕಳಿಸಬಾರದೆಂದು ಸಮಾಜದ ಪರವಾಗಿ ನ್ಯಾ. ಸದಾಶಿವ ಆಯೋಗದ ವರದಿ ಜಾರಿ ಅನುಷ್ಠಾನ ವಿರೋಧಿಸಿ ಹೋರಾಟ ನಡೆಸುತ್ತಿರುವ ಅನ್ಯ ಸಮುದಾಯಗಳಲ್ಲಿ ವಿನಂತಿಸುವುದಾಗಿ ತಾಲ್ಲೂಕು ಛಲವಾದಿ ಸಮಾಜ ತಿಳಿಸಿದೆ.

# 11 ನೇ ವೇತನಕ್ಕೆ ಬ್ಯಾಂಕ್ ಉದ್ಯೋಗಿಗಳ ಆಗ್ರಹ

ದಾವಣಗೆರೆ, ಅ.2- ಗ್ರಾಮೀಣ ಬ್ಯಾಂಕ್ ಉದ್ಯೋಗಿಗಳಿಗೆ ಬ್ಯಾಂಕಿಂಗ್ ಕ್ಷೇತ್ರದಲ್ಲಾದ 11 ನೇ ವೇತನ ಒಪ್ಪಂದವನ್ನು ಯಥಾವತ್ತಾಗಿ ಜಾರಿಗೊಳಿಸುವುದು ಸೇರಿದಂತೆ, ವಿವಿಧ ಬೇಡಿಕೆಗಳಿಗೆ ಆಗ್ರಹಿಸಿ ಬ್ಯಾಂಕ್ ಉದ್ಯೋಗಿಗಳು ಗ್ರಾಮೀಣ ಬ್ಯಾಂಕ್ ಪ್ರಾದೇಶಿಕ ಕಚೇರಿಯ ಮುಂಭಾಗ ಮುಷ್ಕರ ನಡೆಸಿದರು.

ಅಖಿಲ ಭಾರತ ಗ್ರಾಮೀಣ ಬ್ಯಾಂಕ್ ಉದ್ಯೋಗಿಗಳ ಸಂಘಟನೆಯ ಕರೆಯ ಮೇರೆಗೆ ಕರ್ನಾಟಕ ಗ್ರಾಮೀಣ ಬ್ಯಾಂಕ್ ನೌಕರರ ಸಂಘ ಹಾಗೂ ಕರ್ನಾಟಕ ಗ್ರಾಮೀಣ ಬ್ಯಾಂಕ್ ಅಧಿಕಾರಿಗಳ ಸಂಘದ ಜಿಲ್ಲಾ ಘಟಕದಿಂದ ಜಿಲ್ಲೆಯ ಎಲ್ಲಾ ಗ್ರಾಮೀಣ ಬ್ಯಾಂಕ್ ನೌಕರರು ಮತ್ತು ಅಧಿಕಾರಿಗಳು ಪ್ರತಿಭಟನೆ ನಡೆಸಿ, ಪ್ರಾದೇಶಿಕ ಕಚೇರಿಯ ಸಹಾಯಕ ವ್ಯವಸ್ಥಾಪಕರಿಗೆ ಮನವಿ ಸಲ್ಲಿಸಿದರು.

ಕೇಂದ್ರ ಸರ್ಕಾರ ತನ್ನ ಪಾಲಿನ ಬಂಡವಾಳವನ್ನು ಪ್ರವರ್ತಕ ಬ್ಯಾಂಕುಗಳಿಗೆ ವರ್ಗಾವಣೆ ಮಾಡುವುದನ್ನು ನಿಲ್ಲಿಸಬೇಕು, ದೇಶದಲ್ಲಿರುವ 43 ಗ್ರಾಮೀಣ ಬ್ಯಾಂಕುಗಳನ್ನು ಒಟ್ಟುಗೂಡಿಸಿ ರಾಷ್ಟ್ರೀಯ ಗ್ರಾಮೀಣ ಬ್ಯಾಂಕ್ ಸ್ಥಾಪನೆ ಮಾಡಬೇಕು, ಕೇಂದ್ರ ಸರ್ಕಾರ ಜಾರಿಗೊಳಿಸಿರುವ ಮಿತ್ರಾ ಕಮಿಟಿಯ ಶಿಫಾರಸ್ಸಿನಂತೆ, ಗ್ರಾಮೀಣ ಬ್ಯಾಂಕುಗಳಲ್ಲಿ ಮಾನವ ಸಂಪನ್ಮೂಲ ವರದಿ ಅನುಷ್ಠಾನಗೊಳಿಸುವುದು, ದಿನಗೂಲಿ ನೌಕರರನ್ನು ಖಾಯಂಗೊಳಿಸುವುದು ಸೇರಿದಂತೆ ವಿವಿಧ ಬೇಡಿಕೆಗಳಿಗೆ ಪ್ರತಿಭಟನಾಕಾರರು ಒತ್ತಾಯಿಸಿದರು.

ಕೆ.ಹೆಚ್. ದಫ್ತೇರ್, ವಿರುಪಾಕ್ಷಯ್ಯ ಸ್ವಾಮಿ, ಎಸ್. ನಾಗರಾಜ್, ನಾಗೇಶ್ವರಿ ನಾಯರಿ, ಜಿಲ್ಲಾ ಕಾರ್ಯದರ್ಶಿಗಳು ಎಮ್.ಟಿ. ರಫೀ, ಸುಭಾಷ್, ಕೇಂದ್ರ ಸಮಿತಿ ಸದಸ್ಯರಾದ ಎಸ್. ಎಸ್. ಮಧು, ಕೆ.ಪಿ.ಮಧುಸೂದನ್, ಸುನಿತಾ, ಈಶ್ವರಪ್ಪ ಮುಷ್ಕರದಲ್ಲಿ ಭಾಗವಹಿಸಿದ್ದರು.

# ದಂಡ ಪಾವತಿಸಿ ಸಂಘಗಳ ನವೀಕರಣಕ್ಕೆ ಅವಕಾಶ

ದಾವಣಗೆರೆ, ಅ.2- ಕರ್ನಾಟಕ ಸಂಘಗಳ ಅಧಿನಿಯಮ 1960 ರಡಿಯಲ್ಲಿ ನೋಂದಣಿಗೊಂಡು 5 ವರ್ಷಗಳಿಗೂ ಮೇಲ್ಪಟ್ಟು ನವೀಕರಣಗೊಳ್ಳದೇ ಇರುವ ಸಂಘ - ಸಂಸ್ಥೆಗಳಿಗೆ ನವೀಕರಣಕ್ಕಾಗಿ ಕಡೆಯ ಒಂದು ಅವಕಾಶ ನೀಡಲಾಗಿದೆ. ಜಿಲ್ಲಾ ವ್ಯಾಪ್ತಿಯಲ್ಲಿನ ಸಂಘ - ಸಂಸ್ಥೆಗಳು ಪ್ರತಿ ವರ್ಷಕ್ಕೆ ಹೆಚ್ಚುವರಿ 2 ಸಾವಿರ ರೂ. ನಂತೆ ದಂಡ ಪಾವತಿಸಿ ಮತ್ತು ಅವಶ್ಯ ದಾಖಲೆಗಳನ್ನು ಸಲ್ಲಿಸಿ ಡಿಸೆಂಬರ್ 31 ರ ಒಳಗಾಗಿ ನವೀಕರಣ ಮಾಡಿಸಿಕೊಳ್ಳ ಬಹುದು ಎಂದು ಜಿಲ್ಲಾ ಸಂಘಗಳ ನೋಂದಣಾಧಿಕಾರಿಗಳು ಹಾಗೂ ಸಹಕಾರ ಸಂಘಗಳ ಉಪನಿಬಂಧಕ ಬಿ. ಜಯಪ್ರಕಾಶ್ ತಿಳಿಸಿದ್ದಾರೆ.

# ಸಹಾಯಕ ಅಂತರವಳ್ಳಪ್ಪ ನಿವೃತ್ತಿ



**ಮಲೇಬೆನ್ನೂರು**

ಮಲೇಬೆನ್ನೂರು, ಅ.2- ಇಲ್ಲಿನ ಶ್ರೀ ಬೀರಲಿಂಗೇಶ್ವರ ಬಾಲಕಿಯರ ಪ್ರೌಢಶಾಲೆಯಲ್ಲಿ ಕಳೆದ 40 ವರ್ಷಗಳಿಂದ ಸಹಾಯಕರಾಗಿ ಸೇವೆ ಸಲ್ಲಿಸಿ, ಎಲ್ಲರ ಪ್ರೀತಿಗೆ ಪಾತ್ರರಾಗಿದ್ದ ಪಿ.ಕೆ. ಅಂತರವಳ್ಳಪ್ಪ ಅವರು ವಯೋನಿವೃತ್ತಿ ಹೊಂದಿದ್ದು, ಅವರನ್ನು ಬೀರಲಿಂಗೇಶ್ವರ ವಿದ್ಯಾಸಂಸ್ಥೆ ಆಡಳಿತ ಮಂಡಳಿ ವತಿಯಿಂದ ಸನ್ಮಾನಿಸಿ, ಗೌರವಿಸಲಾಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ, ಪಿ.ಕೆ. ಅಂತರವಳ್ಳಪ್ಪ, ನನ್ನ ಸೇವೆಯಲ್ಲಿ ನನಗೆ ಸಹಕಾರನೀಡಿದ ಸಂಸ್ಥೆಯವರಿಗೆ, ಶಿಕ್ಷಕರಿಗೆ, ವಿದ್ಯಾರ್ಥಿಗಳಿಗೆ ಆಭಾರಿಯಾಗಿದ್ದೇನೆಂದು ಭಾವುಕರಾದರು. ವಿದ್ಯಾಸಂಸ್ಥೆ ಆಡಳಿತ ಮಂಡಳಿ, ಶಿಕ್ಷಕರು, ವಿದ್ಯಾರ್ಥಿಗಳು ಅವರನ್ನು ಆತ್ಮೀಯವಾಗಿ ಬೀಳ್ಕೊಟ್ಟರು.

# ಮಲಬಾರ್‌ನಿಂದ ಡಾಟರ್ಸ್ ಡೇ



ದಾವಣಗೆರೆ, ಅ.2- ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್‌ನಲ್ಲಿ 'ಡಾಟರ್ಸ್ ಡೇ' ಪ್ರಯುಕ್ತ ಗ್ರಾಹಕರಾದ ಡಾ॥ ಲಕ್ಷ್ಮಿ ದೇವಿ, ರೂಪ ಮತ್ತು ಲಿಖಿತ ಇವರುಗಳು ಕೇಕ್ ಕತ್ತರಿಸುವ ಮೂಲಕ ಡಾಟರ್ಸ್ ಡೇ ಆಚರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಶಾಖೆಯ ಮುಖ್ಯಸ್ಥರಾದ ಬಾಸಿಲ್ ರಾಜನ್, ಸರ್ಫಾಜ್ ಮತ್ತು ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

# ಭಗತ್ ಸಿಂಗ್ ಜನ್ಮದಿನ ಆಚರಣೆ

ದಾವಣಗೆರೆ, ಅ.2- ಹಿಂದೂ ಜಾಗರಣಾ ವೇದಿಕೆ ಕಾರ್ಯಕರ್ತರಿಂದ ದೊಡ್ಡಪೇಟೆ ಗಣೇಶ ದೇವಸ್ಥಾನದ ಹತ್ತಿರ ಭಗತ್ ಸಿಂಗ್ ಹುಟ್ಟುಹಬ್ಬವನ್ನು ಆಚರಿಸಲಾಯಿತು. ಈ ಸಂದರ್ಭದಲ್ಲಿ ವೇದಿಕೆಯ ಸಂಚಾಲಕರಾದ ಮಂಜುನಾಥ್, ಮಲ್ಲಿಕಾರ್ಜುನ್, ರಾಕೇಶ್ ಜಾಧವ್, ವಿರೂಪಾಕ್ಷ, ತಿಲಕ್, ಪರಶುರಾಮ್, ನವೀನ್ ಕುಮಾರ್, ಶೇಖರ್, ಮದನ್ ರಾಜ್ ಹಾಗೂ ಇನ್ನಿತರರಿದ್ದರು.

# 'ಮಣ್ಣಿನೊಂದಿಗೆ ಮಾತುಕತೆ' ರೈತರೊಂದಿಗೆ ಸಂವಾದ



**ಜಗಳೂರು**

ಜಗಳೂರು, ಅ.2 - ಏಕ ಬೆಳೆ ಪದ್ಧತಿ ಮಾರಕ, ಮಿಶ್ರ ಬೆಳೆ ರಕ್ಷಕ ಎಂದು ಗಂಗಾವತಿ ಕೃಷಿ ಮಹಾವಿದ್ಯಾಲಯದ ಪ್ರಾಧ್ಯಾಪಕ ಬದ್ರಿ ಪ್ರಸಾದ್ ತಿಳಿಸಿದರು.

ತಾಲ್ಲೂಕಿನ ಭರಮಸಮುದ್ರ ಗ್ರಾಮದ ವಕೀಲ ದಿವಂಗತ ಕೆ.ಇ.ಮಂಜುನಾಥ್ ರವರ ಹೊಲದಲ್ಲಿ ಕೃಷಿ ಇಲಾಖೆ ಆಯೋಜಿಸಿದ್ದ 'ಮಣ್ಣಿನೊಂದಿಗೆ ಮಾತುಕತೆ' ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಭಾಗವಹಿಸಿ ಅವರು ಮಾತನಾಡಿದರು.

ಪಶು ಸಾಕಾಣಿಕೆ, ಹೈನುಗಾರಿಕೆ ಮತ್ತು ಕೋಳಿ ಸಾಕಾಣಿಕೆಯು ರೈತರ ಸ್ವಾವಲಂಬಿ ಜೀವನಕ್ಕೆ ಸಹಕಾರಿಯಾಗುತ್ತದೆ. ರೈತರಿಗೆ ವೈಜ್ಞಾನಿಕ ಕೃಷಿ ಹೆಚ್ಚು ಲಾಭದಾಯಕ ಎಂದು ಸಲಹೆ ನೀಡಿದರು.

ದಾವಣಗೆರೆ ವಿಭಾಗದ ಉಪ ನಿರ್ದೇಶಕ ತಿಪ್ಪೇಸ್ವಾಮಿ ಮಾತನಾಡಿ, ಕೃಷಿ ಪದ್ಧತಿಯಲ್ಲಿ ಅನೇಕ ಬದಲಾವಣೆಗಳನ್ನು ತರಲು ಕೃಷಿ ಇಲಾಖೆ ನಿರಂತರ ಪ್ರಯತ್ನ ಮಾಡುತ್ತಿದ್ದು, ಈ ಬಾರಿ ಹನಿ ನೀರಾವರಿ ಪದ್ಧತಿ ಮೂಲಕ ರಾಗಿ ಬೆಳೆಯಲು ರೈತರಿಗೆ ಉತ್ತೇಜನ ನೀಡಲಾಗುತ್ತಿದೆ. ಭರಮಸಮುದ್ರದ ಆಸಕ್ತ ರೈತರಿಗೆ ಈ ಸೌಲಭ್ಯವನ್ನು ಒದಗಿಸಲಾಗುವುದು ಎಂದು ಹೇಳಿದರು.

ಪಶು ಇಲಾಖೆಯ ಸಹಾಯಕ ನಿರ್ದೇಶಕ ಕೆ.ಬಿ.ಲಿಂಗರಾಜು ಮಾತನಾಡಿ, ಹೈನುಗಾರಿಕೆಯ ಬಗ್ಗೆ ರೈತರಿಗೆ ಉಪಯುಕ್ತ ಮಾಹಿತಿ ನೀಡಿದರು.

ಮಣ್ಣಿನೊಂದಿಗೆ ಮಾತುಕತೆ ಕಾರ್ಯಕ್ರಮದ ಬಗ್ಗೆ ಮೆಚ್ಚುಗೆ ಮಾತುಗಳನ್ನಾಡಿದ ತಾಲ್ಲೂಕು ಪಂಚಾಯತಿ ಮಾಜಿ ಸದಸ್ಯೆ ಶ್ರೀಮತಿ ಶಿಲ್ಪಾ ಮಂಜಣ್ಣ, ಅಧಿಕಾರಿಗಳ ವಿನೂತನ ಪ್ರಯತ್ನದ ಬಗ್ಗೆ ಹರ್ಷ ವ್ಯಕ್ತಪಡಿಸಿದರು. ಡಾ॥ ಬದ್ರಿ ಪ್ರಸಾದ್ ಮತ್ತು ದಿವಂಗತ ಮಂಜುನಾಥ್ ರವರ ಪತ್ನಿ ತಾಲ್ಲೂಕು ಪಂಚಾಯತಿ ಸದಸ್ಯೆ ಶಿಲ್ಪಾರವರಿಗೆ ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ತಾಲ್ಲೂಕಿನ ಕೃಷಿ ಸಹಾಯಕ ನಿರ್ದೇಶಕ ಶ್ರೀನಿವಾಸುಲು, ಜಿಲ್ಲಾ ಆತ್ಮ ಸಂಯೋಜಕ ಕೆ.ಜಿ.ಚಂದ್ರಶೇಖರ್ ತಾಲ್ಲೂಕು ತಾಂತ್ರಿಕ ವ್ಯವಸ್ಥಾಪಕ ರೇಣುಕುಮಾರ್, ಸಹಾಯಕ ತಾಂತ್ರಿಕ ವ್ಯವಸ್ಥಾಪಕ ಅನಿಲ್, ಗ್ರಾಮ ಪಂಚಾಯತಿ ಸದಸ್ಯ ಜೆ.ಟಿ.ಬಸವರಾಜ್ ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.


ದಾವಣಗೆರೆ ನಗರದ ಕೆಲವೇ ಪ್ರತಿಷ್ಠಿತ ಪತ್ತಿನ ಸಹಕಾರಿ ಸಂಸ್ಥೆಗಳಲ್ಲಿ ಒಂದು

# ಶ್ರೀ ಚೌಡೇಶ್ವರಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿ.,

ನಂ. 175/2, ಶ್ರೀ ವಿನಾಯಕ ಕಾಂಪ್ಲೆಕ್ಸ್, ವಸಂತ ರಸ್ತೆ, ದಾವಣಗೆರೆ. ದೂರವಾಣಿ : 08192-233622

## 10ನೇ ವಾರ್ಷಿಕ ಮಹಾಸಭೆಯ ನೋಟಿಸ್

**ನಮ್ಮ ಸಂಸ್ಥೆಯ ವಿವಿಧ ಠೇವಣಿಗಳ ಬಡ್ಡಿ ದರ**

| ನಮ್ಮ ವಿವಿಧ ಠೇವಣಿಗಳ ಬಡ್ಡಿದರ | | ಹಿರಿಯ ನಾಗರಿಕರಿಗೆ |
|---|---|---|
| 30 ದಿನಗಳಿಂದ 180 ದಿನಗಳವರೆಗೆ | 5.5% | - |
| 181 ದಿನಗಳಿಂದ 1 ವರ್ಷದವರೆಗೆ | 6.5% | - |
| 1 ವರ್ಷದಿಂದ 2 ವರ್ಷದವರೆಗೆ | 8% | 8.5% |
| 2 ವರ್ಷದಿಂದ 3 ವರ್ಷದವರೆಗೆ | 8.5% | 9% |
| 3 ವರ್ಷದಿಂದ 5 ವರ್ಷದವರೆಗೆ | 9% | 9.5% |
| 5 ವರ್ಷ ಮೇಲ್ಪಟ್ಟು : | 10% | 10.5% |

ಶ್ರೀ ಚೌಡೇಶ್ವರಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ ದಾವಣಗೆರೆ, ಇದರ 2020-21ನೇ ಸಾಲಿನ 10ನೇ ವಾರ್ಷಿಕ ಮಹಾಸಭೆಯನ್ನು ದಿ.: 03.10.2021ನೇ ಭಾನುವಾರ ಬೆಳಿಗ್ಗೆ 11.00 ಗಂಟೆಗೆ ಶ್ರೀ ಚೌಡೇಶ್ವರಿ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿ ನಿಯಮಿತ, ಆಡಳಿತ ಕಛೇರಿ, ಶ್ರೀ ವಿನಾಯಕ ಕಾಂಪ್ಲೆಕ್ಸ್, ವಸಂತ ರಸ್ತೆ, ದಾವಣಗೆರೆಯಲ್ಲಿ ಕರೆಯಲಾಗಿದೆ. ಮಾನ್ಯ ಸದಸ್ಯರು ಸಕಾಲಕ್ಕೆ ಆಗಮಿಸಿ, ಸಭೆಯಲ್ಲಿ ಭಾಗವಹಿಸಿ, ಸಭೆಯನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ.

## ನಿರ್ದೇಶಕರ ಮಂಡಲಿ



ಶ್ರೀ ಡಿ. ಬಸವರಾಜಪ್ಪ ಅಧ್ಯಕ್ಷರು; ಶ್ರೀಮತಿ ಅನಂತಮ್ಮ ಉಪಾಧ್ಯಕ್ಷರು; ಶ್ರೀ ಎಸ್. ರುದ್ರಪ್ಪ ನಿರ್ದೇಶಕರು; ಶ್ರೀ ಆರ್. ಶಂಕರ್ ನಿರ್ದೇಶಕರು; ಶ್ರೀ ಎನ್. ಪ್ರಕಾಶ್ ನಿರ್ದೇಶಕರು; ಶ್ರೀ ಎಲ್. ನಾಗರಾಜ್ ನಿರ್ದೇಶಕರು; ಶ್ರೀ ಆರ್. ವೆಂಕಟಾಚಲಮೂರ್ತಿ ನಿರ್ದೇಶಕರು; ಶ್ರೀ ಟಿ. ಸುರೇಶ್ ನಿರ್ದೇಶಕರು



ಶ್ರೀ ಬಿ.ಪಿ. ಮಂಜುನಾಥ ನಿರ್ದೇಶಕರು; ಶ್ರೀ ಎಲ್.ಎಸ್. ಸುಧಾಕರ್ ನಿರ್ದೇಶಕರು; ಶ್ರೀಮತಿ ಎನ್.ಹೆಚ್. ಸಾಕಮ್ಮ ನಿರ್ದೇಶಕರು; ಶ್ರೀ ಎಸ್.ಎಂ. ನಾಗರಾಜನ್ ನಿರ್ದೇಶಕರು; ಶ್ರೀ ಡಿ. ಪಾವನಮೂರ್ತಿ ಕಾರ್ಯದರ್ಶಿ

ವಿ.ಸೂ. : ವಾರ್ಷಿಕ ಮಹಾಸಭೆಯನ್ನು ದಿನಾಂಕ : 03.10.2021ನೇ ಭಾನುವಾರ ಬೆಳಿಗ್ಗೆ 11.00 ಗಂಟೆಗೆ ಹಮ್ಮಿಕೊಳ್ಳಲಾಗಿದ್ದು, ವಾರ್ಷಿಕ ಸಭೆಗೆ ಸರ್ವಸದಸ್ಯರು ಸಕಾಲಕ್ಕೆ ಆಗಮಿಸಲು ಕೋರಲಾಗಿದೆ. (ಕೋವಿಡ್ ಪ್ರಯುಕ್ತ ಮಾಸ್ಕ್ ಹಾಗೂ ಸಾಮಾಜಿಕ ಅಂತರ ಕಡ್ಡಾಯಗೊಳಿಸಲಾಗಿದೆ.)

## ದಿನಾಂಕ : 31.03.2021ಕ್ಕೆ ಇದ್ದಂತೆ

| ಕ್ರ.ಸಂ. | ಜವಾಬ್ದಾರಿಗಳ ವಿವರ | ಮೊಬಲಗು | ಮೊಬಲಗು |
|---|---|---|---|
| 01 | ಷೇರು ಬಂಡವಾಳ : | 45,65,800-00 | 56,23,800-00 |
| | ಸದಸ್ಯರಿಂದ | 10,58,000-00 | |
| | ಸಹ ಸದಸ್ಯರಿಂದ | | |
| 02 | ನಿಧಿಗಳು : | | |
| | ಅಪದ್ಧನ ನಿಧನ | 55,95,532-26 | |
| | ಕಟ್ಟಡ ನಿಧಿ | 30,20,823-49 | |
| | ಚರಾಸ್ತಿ ಸವಕಳಿ ನಿಧಿ | 4,72,896-00 | |
| | ಸದಸ್ಯರ ಮರಣೋತ್ತರ ಪರಿಹಾರ ನಿಧಿ | 65,969-00 | |
| | ಕರಡು ಸಾಲದ ನಿಧಿ | 9,58,701-32 | |
| | ಸದಸ್ಯರ ಕ್ಷೇಮಾಭಿವೃದ್ಧಿ ನಿಧಿ | 5,82,491-32 | |
| | ಸದಸ್ಯರ ಕ್ಷೇಮಾಭಿವೃದ್ಧಿ ನಿಧಿ | 4,79,350-16 | |
| | ಸಿಬ್ಬಂದಿ ಕ್ಷೇಮಾಭಿವೃದ್ಧಿ ನಿಧಿ | 5,82,491-32 | |
| | ಸಾಮಾಜಿಕ ಕ್ಷೇಮಾಭಿವೃದ್ಧಿ ನಿಧಿ | 4,79,991-32 | |
| | ದಾನದ ನಿಧಿ | 3,73,498-87 | |
| | ಸಹಕಾರ ಅಭಿವೃದ್ಧಿ ನಿಧಿ | 9,58,701-32 | |
| | ಜೂಬ್ಲಿ ಫಂಡ್ | 9,58,701-32 | 1,45,29,147-70 |
| | ಡಿವಿಡೆಂಡ್ ಸಮೀಕರಣ ನಿಧಿ | | |
| 03 | ಠೇವಣಿಗಳು : | | |
| | ಆದಿಶಕ್ತಿ ಪಿಗ್ಮಿ ಖಾತೆ | 1,14,01,464-00 | |
| | ಉಳಿತಾಯ ಖಾತೆ | 92,00,812-90 | |
| | ಚಾಲ್ತಿ ಖಾತೆ | 43,718-13 | |
| | ಶ್ರೀ ಚೌಡೇಶ್ವರಿ ಕ್ಯಾಷ್ ಸರ್ಟಿಫಿಕೇಟ್ | 2,63,89,697-00 | |
| | ಸಂಚಿತ ಠೇವಣಿ | 11,59,049-00 | |
| | ಖಾಯಂ ಠೇವಣಿ | 1,87,97,586-00 | 6,69,92,327-03 |
| 04 | ಇತರೆ ಜವಾಬ್ದಾರಿಗಳು : | | |
| | ಪಿಗ್ಮಿ ಭದ್ರತಾ ಠೇವಣಿ | 1,08,731-00 | |
| | ಸಿಬ್ಬಂದಿ ಭದ್ರತಾ ಠೇವಣಿ | 1,44,696-00 | |
| | ಸಿಬ್ಬಂದಿ ಗ್ರಾಚ್ಯುಟಿ | 3,19,000-00 | |
| | ಅಮಾನತ್ ಖಾತೆ | 12.186-00 | 5,84,613-00 |
| 4-1 | ಇತರೆ ಖಾತೆಗಳು : | | |
| 4-2 | ಲೆಕ್ಕ ಪರಿಶೋಧನಾ ಶುಲ್ಕ | 70,000-00 | |
| | ಎನ್.ಪಿ.ಎ. ಸಾಲಗಳ ಬಾಬ್ತು | 10,42,042-00 | |
| | ಕೊಡಬೇಕಾದ ಬಡ್ಡಿ | 3,81,410-00 | |
| | ಕರ್ನಾಟಕ ರಾಜ್ಯ ಸಹಕಾರ ಮಹಾ ಮಂಡಲಿ | 63,494-00 | |
| | ಸದಸ್ಯರ ಷೇರು ಡಿವಿಡೆಂಡ್ | 2,98,877-00 | |
| | ಸುಸ್ತಿ ಸಾಲದ ಮೇಲಿನ ಬಡ್ಡಿ (ಕಾಂಟ್ರಾ) | 31,02,215-00 | |
| | ಕೊಡಬೇಕಾದ ಸರಕು ಮತ್ತು ಸೇವಾ ತೆರಿಗೆ | 23,722-00 | 49,81,760-00 |
| 06 | ನಿವ್ವಳ ಲಾಭ: | | 31,80,123.55 |
| | ವರದಿ ಸಾಲಿನ ಲಾಭ 2021-21 | | |
| | | ಒಟ್ಟು | 9,58,91,771.28 |

| ಕ್ರ.ಸಂ. | ಆಸ್ತಿಗಳ ವಿವರ | ಮೊಬಲಗು | ಮೊಬಲಗು |
|---|---|---|---|
| 01 | ಕೈಯಲ್ಲಿ ನಗದು ಶಿಲ್ಕು | | 2,95,342-07 |
| 02 | ಬ್ಯಾಂಕ್ ಖಾತೆಗಳು : | | |
| | ದಾ.ಜಿ.ಕೇಂ.ಸ. ಬ್ಯಾಂಕ್ ಚಾಲ್ತಿ ಖಾತೆ | 15.337-50 | |
| | ಬಾಪೂಜಿ ಬ್ಯಾಂಕ್ ಚಾಲ್ತಿ ಖಾತೆ | 11,068-00 | |
| | ಡಿ.ಹೆಚ್.ಯು.ಸಿ. ಬ್ಯಾಂಕ್ ಚಾಲ್ತಿ ಖಾತೆ | 1,86,254-48 | |
| | ರತ್ನಾಕರ ಬ್ಯಾಂಕ್ ಚಾಲ್ತಿ ಖಾತೆ | 53.48,479-00 | |
| | ಎಸ್.ಬಿ.ಐ. ಖಾತೆ | 2,68,538-05 | 58,29,677-03 |
| 03 | ವಿನಿಯೋಗಗಳು : | | |
| | ಡಿ.ಹೆಚ್.ಯು.ಸಿ. ಬ್ಯಾಂಕ್ ಖಾಯಂ ಠೇವಣಿ | 80,09,296-00 | |
| | ಕರ್ನಾಟಕ ಕೋ ಆಪ್ ಫೆಡರೇಷನ್ ಷೇರು | 5,000-00 | |
| | ಕರ್ನಾಟಕ ಕೋ ಆಪ್ ಫೆಡರೇಷನ್ ಠೇವಣಿ | 50,000-00 | 80,64,296-00 |
| 04 | ಸದಸ್ಯರ ಸಾಲದ ಖಾತೆಗಳು : | | |
| | ಠೇವಣಿ ಆಧಾರಿತ ಸಾಲ | 7,21,299-00 | |
| | ಕಂತು ಸಾಲ | 95,28,921-00 | |
| | ವಾಹನ ಸಾಲ | 21,05,855-00 | |
| | ಅಡವು ಸಾಲ | 3,3145,573-00 | |
| | ಕಟ್ಟಡ ಸಾಲ | 1,33,76,482-00 | |
| | ಬಂಗಾರ ಸಾಲ | 9,22,668-00 | |
| | ಭದ್ರತಾ ಮೀರೆಳೆತ ಸಾಲ | 84,79,576-00 | |
| | ಆಧಾರಿತ ಹಣ ಸಾಲ | 11,68,146-00 | 6,94,48,520-00 |
| 05 | ಮುಂಗಡಗಳು : | | |
| | ಕಛೇರಿ ಬಾಡಿಗೆ ಮುಂಗಡ | 1,20,000-00 | |
| | ದೂರವಾಣಿ ಠೇವಣಿ | 500-00 | |
| | ಸಿಬ್ಬಂದಿ ಹಬ್ಬದ ಮುಂಗಡ | 15,000-00 | |
| | ಇ-ಸ್ಟ್ಯಾಂಪಿಂಗ್ | 42,494-00 | |
| | ಇತರೆ ಮುಂಗಡ | 80-00 | |
| | ಸೈಟ್ ಖಾತೆ | 79,43,820-00 | |
| | ಆರ್‌ಬಿಟೆಷನ್ ಫೀ | 51,669-00 | |
| | ಸಿ.ಸಿ. ಕ್ಯಾಮರಾ | 98,554-00 | 82,72,117-00 |
| 06 | ಚರಾಸ್ತಿಗಳು : | | |
| | ಪೀಠೋಪಕರಣಗಳು | 2,49,462-00 | |
| | ಕಂಪ್ಯೂಟರ್ ಹಾರ್ಡ್‌ವೇರ್ | 2,06,550-00 | |
| | ಕಂಪ್ಯೂಟರ್ ಸಾಫ್ಟ್‌ವೇರ್ | 2,03,550-00 | |
| | ಯು.ಪಿ.ಎಸ್. ಅಂಡ್ ಬ್ಯಾಟರಿ | 90,500-00 | 7,50,412-00 |
| | ಆಖೈರು ಮಾಲು ದಾಸ್ತಾನು | 1,29,192-18 | |
| 07 | ಬುಕ್ಸ್ ಅಂಡ್ ಫಾರ್ಮ್ಸ್ | | 1,29,192-18 |
| 08 | ಸುಸ್ತಿ ಸಾಲದ ಮೇಲಿನ ಬಡ್ಡಿ (ಕಾಂಟ್ರಾ) | | 31,02,215-00 |
| | | ಒಟ್ಟು | 9,58,91,771-28 |

## 2020-21ನೇ ಸಾಲಿನ ಲಾಭ-ನಷ್ಟ ತಃಖ್ತೆ

| ಕ್ರ.ಸಂ. | ವೆಚ್ಚದ ವಿವರಗಳು | ಮೊಬಲಗು | ಮೊಬಲಗು |
|---|---|---|---|
| 01 | ಬಡ್ಡಿ ಪಾವತಿಸಿದ್ದು | | 43,24,995-00 |
| 02 | ಸಿಬ್ಬಂದಿ ವೆಚ್ಚ : | | |
| | ಸಿಬ್ಬಂದಿ ವೇತನ | 6,71,754-00 | |
| | ಭವಿಷ್ಯ ನಿಧಿ ವಂತಿಗೆ | 74,533-00 | 7,46,287-00 |
| 03 | ಆಡಳಿತ ವೆಚ್ಚಗಳು : | | |
| | ಜಾಹೀರಾತು ವೆಚ್ಚ | 12,020-00 | |
| | ಅಂಚೆ ವೆಚ್ಚ | 19,869-00 | |
| | ಮಹಾಸಭೆ ವೆಚ್ಚ | 85,000-00 | |
| | ಪಿಗ್ಮಿ ಕಮೀಷನ್ | 7,75,190-00 | |
| | ನಿರ್ದೇಶಕರ ಸಂಭಾವನೆ | 98,000-00 | |
| | ವೃತ್ತಿ ತೆರಿಗೆ | 2,500-00 | |
| | ಬಾಡಿಗೆ ಮತ್ತು ವಿದ್ಯುಚ್ಛಕ್ತಿ | 1,32,340-00 | |
| | ರಿಪೇರಿ ಮತ್ತು ನಿರ್ವಹಣೆ | 21,757-70 | |
| | ಬ್ಯಾಂಕ್ ಚಾರ್ಜಸ್ | 3,608-05 | |
| | ಸರಕು ಮತ್ತು ಸೇವಾ ತೆರಿಗೆ ವೆಚ್ಚ | 24,802-00 | |
| | ಇತರೆ ವೆಚ್ಚ | 11,190-00 | |
| | ಜಿಎಸ್‌ಟಿ/ಐಟಿ/ಟಿಡಿಎಸ್ ಫೈಲಿಂಗ್ ಚಾರ್ಜ್ | 34,000-00 | |
| | ಮುದ್ರಣ ಮತ್ತು ಸ್ಟೇಷನರಿ | 52,966-00 | 12,73,242-75 |
| 04 | ಅವಕಾಶಗಳು : | | |
| | ಕೊಡಬೇಕಾದ ವೆಚ್ಚ ಪರಿಶೋಧನಾ ಶುಲ್ಕ | 70,000-00 | |
| | ಚರಾಸ್ತಿ ಸವಕಳಿ ಖಾತೆ | 1,00,221-00 | |
| | ಸಿಬ್ಬಂದಿ ಗ್ರಾಚ್ಯುಟಿ ನಿಧಿ | 56,750-00 | 4,47,421-00 |
| | ಎನ್‌ಪಿಎ (ಸಾಲಗಳ ಬಾಬ್ತು) | 2,20,450-00 | 31,80,123-55 |
| | ನಿವ್ವಳ ಆದಾಯ | | |
| | | ಒಟ್ಟು | 99,72,069-30 |

| ಕ್ರ.ಸಂ. | ಆಸ್ತಿಗಳ ವಿವರ | ಮೊಬಲಗು | ಮೊಬಲಗು |
|---|---|---|---|
| 01 | ಸಾಲಗಳ ಮೇಲಿನ ಬಡ್ಡಿ: | 15,84,795-00 | |
| | ಗೃಹ ಸಾಲ | 18,27,776-00 | |
| | ಕಂತು ಸಾಲ | 3,36,514-00 | |
| | ವಾಹನ ಸಾಲ | 43,23,430-00 | |
| | ಅಡವುಸಾಲ | 9,86,959-00 | |
| | ಭದ್ರತಾ ನಗದು ಮೀರೆಳೆತ ಸಾಲ | 1,38,653-00 | |
| | ಆಭರಣ ಸಾಲ | 1,18,705-00 | |
| | ನಗದು ಮೀರೆಳೆತ ಸಾಲ | 24,001-00 | |
| | ಪಿಗ್ಮಿ ಠೇವಣಿ ಸಾಲ | 8,567-00 | |
| | ಖಾಯಂ ಠೇವಣಿ ಸಾಲ | | |
| 02 | ವಿನಿಯೋಗಗಳ ಮೇಲಿನ ಬಡ್ಡಿ | | |
| 03 | ಇತರೆ ಆದಾಯ : | | |
| | ಕಮೀಷನ್ | 3,517-30 | 93,49,400-00 |
| | ಷೇರು ಫೀ | 17,500-00 | 3,04,576-00 |
| | ಷೇರು ಪ್ರವೇಶ ಧನ | 2,3000-00 | |
| | ಇ-ಸ್ಟ್ಯಾಂಪಿಂಗ್ ಕಮೀಷನ್ | 19,422-00 | |
| | ಸರ್ವೀಸ್ ಚಾರ್ಜಸ್ | 54,863-00 | |
| | ಬಡ್ಡಿ | 2,20,491-00 | 3,18,093-30 |
| | | ಒಟ್ಟು | 99,72,069-30 |

ಅಧ್ಯಕ್ಷರು ನಿರ್ದೇಶಕರು ನಿರ್ದೇಶಕರು ಕಾರ್ಯದರ್ಶಿ

## ಲೆಕ್ಕಪರಿಶೋಧನಾ ದೃಢೀಕರಣ ಪತ್ರ

ಶ್ರೀ ಚೌಡೇಶ್ವರಿ ಪತ್ತಿನ ಸಹಕಾರ ಸಂಘ ನಿಯಮಿತ, ವಸಂತ ರಸ್ತೆ, ದಾವಣಗೆರೆ, ಇದರ 2020-21ನೇ ಸಾಲಿನ ಲೆಕ್ಕ ಪತ್ರಗಳನ್ನು ನಾನು ಪರಿಶೀಲಿಸಿರುತ್ತೇನೆ. ಲೆಕ್ಕಪರಿಶೋಧನೆಗೆ ಅಗತ್ಯವಿದ್ದ ಮಾಹಿತಿಗಳನ್ನು ಮತ್ತು ಸಮಜಾಯಿಷಿಗಳನ್ನು ಪಡೆದಿರುತ್ತೇನೆ. ಇವುಗಳು ನನ್ನ ಅನುಭವ ಮತ್ತು ತಿಳುವಳಿಕೆ ಮಟ್ಟಿಗೆ ತೃಪ್ತಿಕರವಾಗಿವೆ. ನನಗೆ ಒದಗಿಸಿದ ಮಾಹಿತಿಗಳ ಆಧಾರದ ಮೇರೆಗೆ 2020-21ನೇ ಸಾಲಿನ ಲಾಭ-ನಷ್ಟ ತಃಖ್ತೆ ಮತ್ತು ದಿನಾಂಕ : 31.03.2021ಕ್ಕೆ ಇದ್ದಂತೆ ಆಸ್ತಿ-ಜವಾಬ್ದಾರಿ ತಃಖ್ತೆಯನ್ನು ಇದರೊಂದಿಗೆ ಲಗತ್ತಿಸಿದ ನನ್ನ ಪ್ರತ್ಯೇಕ ಲೆಕ್ಕಪರಿಶೋಧನಾ ವರದಿಗೊಳಪಟ್ಟಂತೆ ಈ ಸಹಕಾರ ಸಂಸ್ಥೆಯ ನೈಜ ಆರ್ಥಿಕ ಸ್ಥಿತಿಯನ್ನು ಪ್ರತಿಬಿಂಬಿಸುತ್ತದೆಂದು ಈ ಮೂಲಕ ದೃಢೀಕರಿಸುತ್ತೇನೆ.

ದಿನಾಂಕ : 16.08.2021
ಸ್ಥಳ : ದಾವಣಗೆರೆ.

"ಪರಿಶೀಲಿಸಿದೆ"
ಸಹಿ/- ಆದಿತ್ಯ ಬಿ.
ಆದಿತ್ಯ ಬೊಂದಾಡೆ ಮತ್ತು ಕೋ
ಸನ್ನದು ಲೆಕ್ಕಪರಿಶೋಧಕರು, ದಾವಣಗೆರೆ.

# ಗಾಂಧಿ ಜಯಂತಿ ಅಂಗವಾಗಿ ಖಾದಿ ಖರೀದಿ



ದಾವಣಗೆರೆ, ಅ.2- ಗಾಂಧಿ ಜಯಂತಿ ಅಂಗವಾಗಿ ಪ್ರಧಾನಿ ನರೇಂದ್ರ ಮೋದಿ ಅವರ ಆಶಯದಂತೆ ವೋಕಲ್ ಫಾರ್ ಲೋಕಲ್ ಮತ್ತು ಖಾದಿ ಬಳಕೆ ಉತ್ತೇಜನಕ್ಕೆ ಕರೆ ಕೊಟ್ಟ ಹಿನ್ನೆಲೆಯಲ್ಲಿ ನಗರದ 24ನೇ ವಾರ್ಡಿನ ಬಿಜೆಪಿ ವಾರ್ಡ್ ಕಮಿಟಿ ವತಿಯಿಂದ ಖಾದಿ ಗ್ರಾಮೋದ್ಯೋಗ ಮಳಿಗೆಗೆ ಭೇಟಿ ನೀಡಿ ಖಾದಿ ವಸ್ತ್ರ ಖರೀದಿಸಲಾಯಿತು.

ಈ ಸಂದರ್ಭದಲ್ಲಿ ರಾಜ್ಯ ಬಿಜೆಪಿಯ ಪ್ರಕೋಷ್ಠಗಳ ಸಂಚಾಲಕ ಡಾ. ಎ.ಹೆಚ್. ಶಿವಯೋಗಿಸ್ವಾಮಿ, ಬಿಜೆಪಿ ರಾಜ್ಯ ಕಾರ್ಯದರ್ಶಿ ಸುಧಾ ಜಯರುದ್ರೇಶ್, 24ನೇ ವಾರ್ಡಿನ ಪಾಲಿಕೆ ಸದಸ್ಯ ಪ್ರಸನ್ನ ಕುಮಾರ್, ಮಹಾ ಶಕ್ತಿ ಕೇಂದ್ರದ ಪ್ರಮುಖ ಪದ್ಮನಾಭ ಶೆಟ್ಟಿ, ಶಕ್ತಿ ಕೇಂದ್ರದ ಪ್ರಮುಖ ಕಿರಣ್, ಉತ್ತರ ಯುವ ಮೋರ್ಚಾ ಅಧ್ಯಕ್ಷ ಸಚಿನ್ ವೆರ್ಣೇಕರ್, ಪದಾಧಿಕಾರಿಗಳಾದ ವಿವೇಕ್, ಅನಿಲ್, ಕಾರ್ತಿಕ್, ಯತೀಶ್, ದರ್ಶನ್, ಸಾಗರ್, ಲಿಂಗರಾಜ್ ಸೇರಿದಂತೆ ಇತರರು ಇದ್ದರು.

## ಶೃಂಗ ಸಭೆ : ರದ್ದುಪಡಿಸಿದ ತರಳಬಾಳು ಶ್ರೀ

(3ನೇ ಪುಟದಿಂದ) ದೇಶಗಳಿಂದ ಪ್ರಮುಖ ಧರ್ಮಗುರುಗಳು ಮತ್ತು ವಿಜ್ಞಾನಿಗಳನ್ನು ಆಹ್ವಾನಿಸಲಾಗಿದೆ. ಇದೇ ವರ್ಷ ಸ್ಕಾಟ್ ಲ್ಯಾಂಡಿನ ಗ್ಲಾಸ್ಗೋದಲ್ಲಿ ಅಕ್ಟೋಬರ್ 31ರಿಂದ ನವೆಂಬರ್ 12 ರವರೆಗೆ ನಡೆಯಲಿರುವ ವಿಶ್ವ ರಾಷ್ಟ್ರಸಂಸ್ಥೆಯ 26ನೇ ಅಂತರರಾಷ್ಟ್ರೀಯ ಸಮ್ಮೇಳನಕ್ಕೆ ಪೂರಕವಾಗಿ ನಡೆಯಲಿರುವ ಈ ಶೃಂಗ ಸಭೆಯನ್ನು ಆಯೋಜಿಸಲು ಪ್ರಮುಖ ಪಾತ್ರ ವಹಿಸಿರುವವರು ಕ್ರೈಸ್ತ ಧರ್ಮಗುರುಗಳಾದ ಪೋಪ್ ಫ್ರಾನ್ಸಿಸ್ ಅವರು ತಮ್ಮ ರಾಯಭಾರಿಗಳ ಮುಖಾಂತರ ಸಿರಿಗೆರೆ ಶ್ರೀಗಳನ್ನು ಆಹ್ವಾನಿಸಿದ್ದರು. ಶ್ರೀಗಳು ಶೃಂಗ ಸಭೆಯ ಸಂಯೋಜಕರ ಕೋರಿಕೆ ಮೇರೆಗೆ ತಮ್ಮ ವಿಚಾರಗಳನ್ನು ಸಂಕ್ಷಿಪ್ತವಾಗಿ ವೀಡಿಯೋದಲ್ಲಿ ದಾಖಲಿಸಿ ಕಳುಹಿಸಿಕೊಟ್ಟಿದ್ದು, ಅದನ್ನು ಜಗತ್ತಿನ ಅನೇಕ ಭಾಷೆಗಳಲ್ಲಿ ಭಾಷಾಂತರಿಸಿ ಪ್ರಸಾರ ಮಾಡುವುದಾಗಿ ಸಂಯೋಜಕರು ಶ್ರೀಗಳವರಿಗೆ ಮಿಂಚೋಲೆ ಬರೆದಿದ್ದಾರೆ.

# ಗಾಂಧೀಜಿ, ಶಾಸ್ತ್ರೀಜಿ ಆದರ್ಶಗಳು ಇಂದಿಗೂ ಪ್ರಸ್ತುತ




ದಾವಣಗೆರೆ, ಅ.2- ಗಾಂಧೀಜಿ ಮತ್ತು ಲಾಲ್‌ಬಹದ್ದೂರ್ ಶಾಸ್ತ್ರೀಜಿ ಭವ್ಯ ಭಾರತದ ಅತಿ ದೊಡ್ಡ ಶಕ್ತಿ. ಇವರ ಸೇವಾ ಮನೋಭಾವ, ಆದರ್ಶಗಳು ಎಂದಿಗೂ ಪ್ರಸ್ತುತ ಎಂದು ಬಾಪೂಜಿ ವಿದ್ಯಾಸಂಸ್ಥೆಯ ಶೈಕ್ಷಣಿಕ ನಿರ್ದೇಶಕ ಡಾ. ಎಂ.ಜಿ. ಈಶ್ವರಪ್ಪ ಹೇಳಿದರು.

ನಗರದ ಕರುಣಾ ಜೀವ ಕಲ್ಯಾಣ ಟ್ರಸ್ಟ್ ವತಿಯಿಂದ ಹಮ್ಮಿಕೊಂಡಿದ್ದ ಗಾಂಧಿ ಜಯಂತಿ, ಹಿರಿಯ ನಾಗರಿಕರ ದಿನಾಚರಣೆ ಮತ್ತು ಕೃಷಿಕ ರತ್ನ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಅವರು ಮಾತನಾಡಿದರು.

ಶಾಂತಿ, ಅಹಿಂಸೆ, ಸತ್ಯ ಮಂತ್ರವನ್ನು ಅಸ್ತ್ರವನ್ನಾಗಿಸಿಕೊಂಡು ಹೋರಾಟ ನಡೆಸುವ ಮೂಲಕ, ದೇಶಕ್ಕೆ ಸ್ವಾತಂತ್ರ್ಯ ತಂದು ಕೊಟ್ಟವರು. ಅವರ ತತ್ವಾದರ್ಶಗಳನ್ನು ಪ್ರತಿಯೊಬ್ಬರೂ ಕೂಡ ಅಳವಡಿಸಿಕೊಳ್ಳಬೇಕೆಂದು ಕರೆ ನೀಡಿದರು.

ಬುದ್ದ, ಬಸವ ಮತ್ತು ಗಾಂಧಿ ದೇಶದ ಮೂರು ಆತ್ಮಗಳು. ನಾಡಿನ ಆಸ್ತಿ. ಅವರ ಆದರ್ಶಗಳು ಇಂದಿಗೂ ಪ್ರಸ್ತುತ. ಅವುಗಳ ಆಚರಣೆಯಿಂದ ಮಾತ್ರ ದೇಶದ ಅಭಿವೃದ್ಧಿ ಸಾಧ್ಯ ಎಂದು ಹೇಳಿದರು.

ಕೃಷಿ ಕ್ಷೇತ್ರದಲ್ಲಿ ನಾರಾಯಣ ರೆಡ್ಡಿ ಅವರ ಪ್ರಯೋಗಗಳನ್ನು ಶ್ಲಾಘಿಸಿದ ಅವರು, ಸಮ

**ಡಾ. ಎಂ.ಜಿ. ಈಶ್ವರಪ್ಪ**

ಸಮಾಜ ನಿರ್ಮಾಣ ಮಾಡುವಲ್ಲಿ ಬುದ್ದ, ಬಸವ, ಗಾಂಧಿ ಅವರ ಸಮಾಜಸೇವಾ ಕಾರ್ಯ ಅತ್ಯುತ್ತಮ ಎಂದು ತಿಳಿಸಿದರು.

ಸಂಸ್ಥೆಯ ಪ್ರಮುಖರಾದ ಮಂಜುಳಾ ಬಸವಲಿಂಗಪ್ಪ ಮಾತನಾಡಿ, ಸೇವೆಯ ಗುರಿ ಗಾಂಧೀಜಿಯವರದಾಗಿತ್ತು. ಅಂತಹ ಸೇವಾ ಕಾರ್ಯಗಳನ್ನು ಕರುಣಾ ಜೀವ ಕಲ್ಯಾಣ ಟ್ರಸ್ಟ್ ಮಾಡುತ್ತಾ ಬಂದಿದೆ ಎಂದರು.

ಸಾಮಾಜಿಕ, ಆರ್ಥಿಕ, ದೈಹಿಕವಾಗಿ ಯಾರು ತೊಂದರೆಗೆ ಒಳಗಾಗುತ್ತಾರೋ ಅಂತವರಿಗೆ ಕರುಣೆ, ಅನುಕಂಪದ ಬದಲು ಸಹಾಯ, ಸಹಕಾರ, ಪ್ರೀತಿ ಮತ್ತು ಸೇವೆ ಅವಶ್ಯಕ ಎಂದು ತಿಳಿಸಿದರು.

ಕರುಣಾ ಜೀವ ಕಲ್ಯಾಣ ಟ್ರಸ್ಟ್ ಸಂಸ್ಥಾಪಕ ಶಿವನಕೆರೆ ಬಸವಲಿಂಗಪ್ಪ ಅಧ್ಯಕ್ಷತೆ ವಹಿಸಿ ಮಾತನಾಡಿದರು. ತರಳಬಾಳು ಕೃಷಿ ವಿಜ್ಞಾನ ಕೇಂದ್ರದ ಕೃಷಿ ವಿಜ್ಞಾನಿ ಡಾ. ಟಿ.ಎನ್. ದೇವರಾಜ್ ಅವರು ಬಾಳೆಕಾಯಿ ಹುಡಿಯ ಪ್ರಯೋಜನದ ಬಗ್ಗೆ ಮಾಹಿತಿ ನೀಡಿದರು.

ಹಿರಿಯ ನಾಗರೀಕರ ಪ್ರಶಸ್ತಿ ಪುರಸ್ಕೃತ ಪ್ರೊ. ಕೆ.ಆರ್. ಸಿದ್ದಪ್ಪ, ಬಿ. ಸದಾಶಿವಪ್ಪ ಶ್ಯಾಗಲೆ, ಸತ್ಯನಾರಾಯಣ, ಗಂಗಾಧರಪ್ಪ, ಮಲ್ಲಾಬಾದಿ ಬಸವರಾಜ್, ಟಿ.ಎಸ್. ಶೈಲಜ ಹಾಗೂ ನಾಡೋಜ ನಾರಾಯಣರೆಡ್ಡಿ ಸ್ಮರಣಾರ್ಥ ಕೃಷಿಕ ರತ್ನ ಪ್ರಶಸ್ತಿ ಪುರಸ್ಕೃತ ಹೆಚ್. ಎಂ. ದ್ಯಾಮಪ್ಪ ಅವರು ಪ್ರಶಸ್ತಿ ಸ್ವೀಕರಿಸಿ, ತಮ್ಮ ಅನುಭವ ಹಂಚಿಕೊಂಡರು.

ಕರುಣಾ ಜೀವ ಕಲ್ಯಾಣ ಟ್ರಸ್ಟ್ ನಿರ್ದೇಶಕ ಬಸವರಾಜ್ ಒಡೆಯರ್ ವರದಿ ವಾಚಿಸಿದರು. ಡಾ. ಹೆಚ್.ಎಂ. ಮಲ್ಲಿಕಾರ್ಜುನ ವಂದಿಸಿದರು.

## ಹಿಂದೂ ಮಹಾಗಣಪತಿ ಅಧ್ಯಕ್ಷರು ಸೇರಿ 15 ಮಂದಿ ವಿರುದ್ಧ ಮೊಕದ್ದಮೆ

ದಾವಣಗೆರೆ, ಅ.2- ನಗರದ ಹೈಸ್ಕೂಲ್ ಮೈದಾನದಲ್ಲಿನ ಗಣೇಶ ಮೂರ್ತಿಯನ್ನು ಸಾವಿರಾರು ಜನರೊಂದಿಗೆ ಮೆರವಣಿಗೆ ಮುಖೇನ ವಿಸರ್ಜಿಸಿದ ಆರೋಪದಡಿ ಹಿಂದೂ ಮಹಾಸಭಾ ಗಣಪತಿ ಸಮಿತಿ ಅಧ್ಯಕ್ಷರು ಸೇರಿ ಒಟ್ಟು 15 ಮಂದಿ ವಿರುದ್ಧ ಇಲ್ಲಿನ ಬಡಾವಣೆ ಪೊಲೀಸ್ ಠಾಣೆಯಲ್ಲಿ ಮೊಕದ್ದಮೆ ದಾಖಲಾಗಿದೆ.

ಹಿಂದೂ ಮಹಾಸಭಾ ಗಣಪತಿ ಸಮಿತಿ ಅಧ್ಯಕ್ಷ ಜೊಳ್ಳಿ ಗುರು, ಗುರುಪ್ರಸಾದ್, ಕುಮಾರ್, ಚೌಹಾನ್ ಪಿಸಾಳೆ, ಕಿರಣ್, ನವೀನ್ ಕುಮಾರ್, ವಜ್ರಸ್ವಾಮಿ, ನಾಗೇಂದ್ರ ರೆಡ್ಡಿ, ಕರಿಬಸಯ್ಯ, ವಿಠೋಬರಾವ್, ಸಿದ್ದು, ಅಜಿತ್ ಆಲೂರು, ಅನಿಲ್, ಶಶಾಂಕ್, ಜರೀಕಟ್ಟೆ ತಮ್ಮಣ್ಣ ಅವರುಗಳ ವಿರುದ್ಧ ದೂರು ದಾಖಲಾಗಿದೆ. ಕಳೆದ ಸೆ.25ರಂದು ಅದ್ದೂರಿ ಮೆರವಣಿಗೆ ಮೂಲಕ ವಿಸರ್ಜಿಸಲಾಗಿತ್ತು.

ಮೆರವಣಿಗೆಯಲ್ಲಿ 20 ಮಂದಿಗಿಂತ ಹೆಚ್ಚು ಜನ ಸೇರಿಸದಂತೆ, ಪೊಲೀಸ್ ಅಧಿಕಾರಿಗಳು ಸೂಚನೆ ನೀಡಿದ್ದರೂ ಸಹ ಸಮಿತಿ ಅಧ್ಯಕ್ಷರ ಪ್ರಚೋದನೆಯಿಂದಾಗಿ ಸುಮಾರು 4,500 ರಿಂದ 5 ಸಾವಿರದಷ್ಟು ಜನರು ಭಾಗವಹಿಸಿದ್ದರು ಎಂದು ದೂರಿನಲ್ಲಿ ತಿಳಿಸಲಾಗಿದೆ.

## ಗುಡಾಳು ಗ್ರಾ.ಪಂ ಅಧ್ಯಕ್ಷರಾಗಿ ಪುಷ್ಪ



ದಾವಣಗೆರೆ, ಅ.2 - ಗುಡಾಳು ಗ್ರಾಮ ಪಂಚಾಯಿತಿಗೆ ಅಧ್ಯಕ್ಷರಾಗಿ ಶ್ರೀಮತಿ ಪುಷ್ಪ ಡಿ.ಸಿ. ರುದೇಶ್ ಆಯ್ಕೆಯಾಗಿದ್ದಾರೆ. ಉತ್ತರದ ಕ್ಷೇತ್ರ ಶಿಕ್ಷಣಾಧಿಕಾರಿ ಜಿ. ಕೊಟ್ರೇಶ್ ಆಯ್ಕೆ ಪ್ರಕ್ರಿಯೆಯ ಅಧಿಕಾರಿಯಾಗಿದ್ದರು. ಪಂಚಾಯಿತಿಯ ಅಭಿವೃದ್ಧಿ ಅಧಿಕಾರಿ ಮುಜಾಮಿಲ್ ಉಪಸ್ಥಿತರಿದ್ದರು.

## ಡಯಟ್ : ಗಾಂಧೀ, ಶಾಸ್ತ್ರಿ ಜಯಂತಿ ಆಚರಣೆ



ದಾವಣಗೆರೆ, ಅ.2- ನಗರದ ಡಯಟ್‌ನಲ್ಲಿ ಗಾಂಧಿ ಜಯಂತಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿಯನ್ನು ಉತ್ಸಾಹಪೂರ್ಣ ಮತ್ತು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಡಯಟ್‌ನ ಪ್ರಾಂಶುಪಾಲರು ಹಾಗೂ ಉಪನಿರ್ದೇಶಕ ಹೆಚ್.ಕೆ. ಲಿಂಗರಾಜು ಅವರು ಮಾತನಾಡಿ, ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರೀ ಅವರ ಆದರ್ಶಗಳು ನಮ್ಮ ನಡೆಯಾಗಿ ಶಿಕ್ಷಕರ ಮೂಲಕ ವಿದ್ಯಾರ್ಥಿಗಳ ಮನಸ್ಸನ್ನು ಮುಟ್ಟಬೇಕು. ಆ ಮೂಲಕ ನಾವೆಲ್ಲ ಗಾಂಧಿ ಕಂಡ ರಾಮರಾಜ್ಯ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿಯವರ ಪ್ರಾಮಾಣಿಕ ಜೀವನದ ಮುಂಬೆಳಕುಗಳಿಗೆ ಆದರ್ಶದ ಕಾಣಿಕೆಯಂತಾಗುವಂತೆ ಮಾಡಿ ದೇಶಾಭಿಮಾನ ಸಂಸ್ಕೃತಿ ಉಳಿಸಬೇಕು ಎಂದು ಕರೆ ನೀಡಿದರು.

ನಂತರ ಡಯಟ್‌ನ ಎಲ್ಲ ಸಿಬ್ಬಂದಿಗಳೂ ರಘುಪತಿ ರಾಘವ ರಾಜಾರಾಂ... ಪ್ರಾರ್ಥನೆ ಮಾಡುವುದರ ಮೂಲಕ ಮಹಾತ್ಮ ಗಾಂಧೀಜಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿಯವರನ್ನು ಹೃನ್ಮನದಿಂದ ಸ್ಮರಿಸಿ, ಪೂಜಿಸಿ, ವಂದಿಸಿ, ಗೌರವ ಸಲ್ಲಿಸಿದರು.

## ಖಾದಿ-ಗ್ರಾಮೋದ್ಯೋಗಕ್ಕೆ ಆದ್ಯತೆ

(3ನೇ ಪುಟದಿಂದ) ಕರ್ತವ್ಯ ಪ್ರಜ್ಞೆಯಿಂದ ಕೆಲಸ ಮಾಡಿದರೆ, ಅದುವೇ ಗಾಂಧೀಜಿಯವರಿಗೆ ನಾವು ನೀಡುವ ಗೌರವ ಎಂದು ಮುಖ್ಯಮಂತ್ರಿಯವರು ತಿಳಿಸಿದರು.

ಗಾಂಧೀಜಿಯವರು ಜನರಿಂದ ಉತ್ಪಾದನಾ ಚಟುವಟಿಕೆಗಳು ನಡೆಯಬೇಕು ಎಂದು ಬಯಸಿದ್ದರು. ದುಡಿಮೆಯಲ್ಲಿ ಆರ್ಥಿಕತೆ ಇದೆ. ದುಡ್ಡಿನಲ್ಲಿ ಅಲ್ಲ ಎಂದ ಮುಖ್ಯಮಂತ್ರಿಗಳು, ಅದಕ್ಕಾಗಿಯೇ ಬಸವಣ್ಣನವರು ಕಾಯಕವೇ ಕೈಲಾಸ ಎಂದು ನುಡಿದರು. ಕಾಯಕ ಪೂಜೆಗಿಂತಲೂ ಮಿಗಿಲಾದದ್ದು. ಸ್ವರ್ಗ ಸಮಾನ ಎಂದು ಮುಖ್ಯಮಂತ್ರಿ ಹೇಳಿದರು.

ಪರಿವರ್ತನೆ ಗಾಂಧೀಜಿಯವರ ದೊಡ್ಡ ಗುಣ. ನಾವು ಇಂದು ಸುಳ್ಳನ್ನು ಉಳಿತಾಯ ಮಾಡಿ, ಸತ್ಯವನ್ನು ಖರ್ಚು ಮಾಡಬೇಕಾಗಿದೆ ಎಂದು ಅಭಿಪ್ರಾಯಪಟ್ಟರು.

ಗಾಂಧೀಜಿಯವರ ಹೋರಾಟಕ್ಕೆ ತಾತ್ವಿಕ, ಸೈದ್ಧಾಂತಿಕ ಹಾಗೂ ವೈಜ್ಞಾನಿಕ ಹಿನ್ನೆಲೆಯಿದೆ. ಪ್ರತಿಯೊಬ್ಬರೂ ಬದ್ಧತೆಯೊಂದಿಗೆ ಕೆಲಸ ಮಾಡಿದಾಗ ಸಾರ್ಥಕತೆ ಮೂಡುತ್ತದೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಗಾಂಧಿ ಭವನ ನಿರ್ಮಾಣ ಪ್ರಗತಿಯಲ್ಲಿದೆ. ದಾವಣಗೆರೆಯ ಗಾಂಧೀ ಭವನ ಇತ್ತೀಚೆಗೆ ಉದ್ಘಾಟನೆಯಾಗಿದ್ದು ಶಿವಮೊಗ್ಗ, ಬಳ್ಳಾರಿ ಜಿಲ್ಲೆಗಳಲ್ಲಿ ಉದ್ಘಾಟನೆಗೆ ಸಜ್ಜುಗೊಂಡಿವೆ. ಉಳಿದ ಜಿಲ್ಲೆಗಳ ಗಾಂಧಿ ಭವನಗಳೂ ಶೀಘ್ರವೇ ಸಿದ್ಧವಾಗಲಿವೆ ಎಂದು ಹೇಳಿದರು.

# ಜಿಲ್ಲೆಯಲ್ಲಿ 42.87 ಮಿ.ಮೀ. ಮಳೆ

(3ನೇ ಪುಟದಿಂದ) ಜಗಳೂರು ತಾಲ್ಲೂಕಿನಲ್ಲಿ 11.50 ಮಿ.ಮೀ. ನಷ್ಟು ಮಳೆಯಾಗಿದೆ.

ದಾವಣಗೆರೆ ತಾಲ್ಲೂಕು ವ್ಯಾಪ್ತಿಯಲ್ಲಿ 15 ಕಚ್ಚಾ ಮನೆಗಳಿಗೆ ಭಾಗಶಃ ಹಾನಿಯಾಗಿದ್ದು ಅಂದಾಜು4 ಲಕ್ಷ ರೂ. ನಷ್ಟ ಸಂಭವಿಸಿದೆ. 4 ಎಕರೆ ಭತ್ತ ಮತ್ತು 2.20 ಎಕರೆ ಶೇಂಗಾ ಬೆಳೆಗೆ ಹಾನಿಯಾಗಿದ್ದು ಅಂದಾಜು2.50 ಲಕ್ಷ ರೂ. ನಷ್ಟ ಸೇರಿ ಒಟ್ಟು6.50 ಲಕ್ಷ ರೂ. ಅಂದಾಜು ನಷ್ಟ ಸಂಭವಿಸಿದೆ.

ಹರಿಹರ ತಾಲ್ಲೂಕು ವ್ಯಾಪ್ತಿಯಲ್ಲಿ 2 ಪಕ್ಕಾ ಮನೆಗಳಿಗೆ ಭಾಗಶಃ ಹಾನಿಯಾಗಿದ್ದು 95 ಸಾವಿರ ರೂ., 1 ತೀವ್ರ ಅಥವಾ ಪೂರ್ಣ ಕಚ್ಚಾ ಮನೆಗೆ ಹಾನಿಯಾಗಿದ್ದು 80 ಸಾವಿರ ರೂ., 1 ಭಾಗಶಃ ಕಚ್ಚಾ ಮನೆ ಹಾನಿಯಿಂದ 30 ಸಾವಿರ ರೂ. ಸೇರಿದಂತೆ ಒಟ್ಟು 2.05 ಲಕ್ಷ ಅಂದಾಜು ನಷ್ಟ ಸಂಭವಿಸಿದೆ.

ಹೊನ್ನಾಳಿ ತಾಲ್ಲೂಕು ವ್ಯಾಪ್ತಿಯಲ್ಲಿ 1 ತೀವ್ರ ಅಥವಾ ಪೂರ್ಣ ಪಕ್ಕಾ ಮನೆ ಹಾನಿ ಯಾಗಿದ್ದು 3 ಲಕ್ಷ ರೂ. ಮತ್ತು 1 ಭಾಗಶಃ ಪಕ್ಕಾ ಮನೆ ಹಾನಿಯಾಗಿದ್ದು 40 ಸಾವಿರ ರೂ. ಸೇರಿದಂತೆ ಒಟ್ಟು 3.40 ಲಕ್ಷ ಅಂದಾಜು ನಷ್ಟ ಸಂಭವಿಸಿದೆ.

ನ್ಯಾಮತಿ ತಾಲ್ಲೂಕು ವ್ಯಾಪ್ತಿಯಲ್ಲಿ 6 ಭಾಗಶಃ ಪಕ್ಕಾ ಮನೆ ಹಾನಿ ಯಾಗಿದ್ದು ರೂ.1.50 ಲಕ್ಷ ಅಂದಾಜು ನಷ್ಟ ಸಂಭವಿಸಿದೆ. ಚನ್ನಗಿರಿ ತಾಲ್ಲೂಕು ವ್ಯಾಪ್ತಿಯಲ್ಲಿ 1 ತೀವ್ರ ಅಥವಾ ಪೂರ್ಣ ಪಕ್ಕಾ ಮನೆ ಹಾನಿಯಾಗಿದ್ದು 1 ಲಕ್ಷ ರೂ. ಮತ್ತು 4 ಭಾಗಶಃ ಪಕ್ಕಾ ಮನೆಗೆ ಹಾನಿಯಾಗಿದ್ದು1.80 ಲಕ್ಷ ರೂ. ಹಾಗೂ 3 ಭಾಗಶಃ ಕಚ್ಚಾ ಮನೆ ಗಳಿಗೆ ಹಾನಿಯಾಗಿದ್ದು1.50 ಲಕ್ಷ ರೂ. ಸೇರಿದಂತೆ ಒಟ್ಟು 4.30 ಲಕ್ಷ ರೂ. ಅಂದಾಜು ನಷ್ಟ ಸಂಭವಿಸಿದೆ. ಸರ್ಕಾರದ ಮಾರ್ಗಸೂಚಿ ಅನ್ವಯ ಸಂತ್ರಸ್ತರಿಗೆ ಪರಿಹಾರ ವಿತರಿಸಲು ಕ್ರಮ ವಹಿಸಲಾಗುವುದೆಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

### ನಾಗರಿಕರಿಂದ ರಸ್ತೆ ತಡೆ

(3ನೇ ಪುಟದಿಂದ) ರಸ್ತೆ ತಡೆ ನಡೆಸಿ, ಸ್ಥಳಕ್ಕೆ ನಗರ ಪಾಲಿಕೆ ಆಯುಕ್ತರು, ಸ್ಮಾರ್ಟ್ ಸಿಟಿ ಮುಖ್ಯಸ್ಥರು ಆಗಮಿಸಬೇಕೆಂದು ಪಟ್ಟುಹಿಡಿದರು. ಕಳೆದ 15 ವರ್ಷಗಳಿಂದ ಇದೇ ಸಮಸ್ಯೆ ಇದ್ದು ದೊಡ್ಡ ಮಳೆಯಾದರೆ ಮನೆಗಳಿಗೆ ನೀರು ನುಗ್ಗುತ್ತಿದ್ದು, ಹಲವು ಬಾರಿ ಜಿಲ್ಲಾಡಳಿತಕ್ಕೂ ಹಾಗೂ ನಗರ ಪಾಲಿಕೆಗೆ ಮನವಿ ಮಾಡಿದರೂ ಶಾಶ್ವತ ಪರಿಹಾರ ಸಿಕ್ಕಿಲ್ಲ ಎಂದು ಆಕ್ರೋಶ ಹೊರ ಹಾಕಿದರು.

ಪ್ರತಿಭಟನಾ ಸ್ಥಳಕ್ಕಾಗಮಿಸಿದ ಸ್ಮಾರ್ಟ್ ಸಿಟಿ ವ್ಯವಸ್ಥಾಪಕ ನಿರ್ದೇಶಕ ರವೀಂದ್ರ ಮಲ್ಲಾಪುರ ಹಾಗೂ ನಗರ ಪಾಲಿಕೆಯ ಅಧಿಕಾರಿಗಳು, ಮಳೆ ನೀರು ನುಗ್ಗದಂತೆ ಕಾಮಗಾರಿ ಕೈಗೊಂಡು ಅತಿ ಶೀಘ್ರದಲ್ಲಿ ಮುಗಿಸುವುದಾಗಿ ಭರವಸೆ ನೀಡಿದರು. ನಂತರ ಪ್ರತಿಭಟನೆಯನ್ನು ಹಿಂಪಡೆಯಲಾಯಿತು.

ಪ್ರತಿಭಟನೆಯಲ್ಲಿ ವಿ.ಎಸ್. ನರಸಿಂಹಮೂರ್ತಿ, ಹರೀಶ್, ಆಕಾಶ್, ಮಲ್ಲಿಕ್, ತಿಪ್ಪೇಶ್, ಶಿವು ಕುಮಾರ್ ಸೇರಿದಂತೆ ಇತರರು ಭಾಗವಹಿಸಿದ್ದರು.

## ನಗರದಲ್ಲಿ ಇಂದು ಓಶೋ ಧ್ಯಾನ ಶಿಬಿರ

ಓಶೋ ಧ್ಯಾನ ಶಿಬಿರ ದೃಶ್ಯಕಲಾ ಮಹಾವಿದ್ಯಾಲಯದಲ್ಲಿ ಇಂದು ಬೆಳಿಗ್ಗೆ 8ರಿಂದ ಸಂಜೆ 6 ರವರೆಗೆ ನಡೆಯಲಿದೆ. ಶಿಬಿರವನ್ನು ಗೋವಾದ ಸ್ವಾಮಿ ಗೋಪಾಲ ಭಾರತಿ ನಡೆಸಿ ಕೊಡಲಿದ್ದಾರೆ. ವಿವರಕ್ಕೆ : ಮೊ : 98867 63469, 97385 72318.

# ಗ್ರಾಮೀಣ ಪ್ರದೇಶಕ್ಕೂ ಕಸಾಪ ವಿಸ್ತರಣೆ: ಶೇಖರಗೌಡ



ಬಸವಾಪಟ್ಟಣ, ಅ.2 - ಕನ್ನಡ ಸಾಹಿತ್ಯ ಪರಿಷತ್ತನ್ನು ವಿಕೇಂದ್ರಿಕರಣಗೊಳಿಸಿ, ಹಳ್ಳಿ ಹಳ್ಳಿಗೂ ವಿಸ್ತರಿಸಲಾಗುವುದು. ಗ್ರಾಮೀಣ ಯುವ ಬರಹಗಾರರಿಗೆ ರಾಜ್ಯಮಟ್ಟದ ಶಿಬಿರ, ತರಬೇತಿ ನೀಡಲಾಗುವುದು. ಯುವಜನರ ಮೌಲಿಕ ಕೃತಿಗಳನ್ನು ಪರಿಷತ್ತಿನ ಮೂಲಕ ಪ್ರಕಟಿಸುವ ಯೋಜನೆ ಇದೆ ಎಂದು ರಾಜ್ಯ ಕಸಾಪ ರಾಜ್ಯಾಧ್ಯಕ್ಷ ಸ್ಥಾನದ ಅಭ್ಯರ್ಥಿ ಶೇಖರಗೌಡ ಮಾಲಿ ಪಾಟೀಲ ತಿಳಿಸಿದ್ದಾರೆ.

ಎರಡು ದಿನಗಳಿಂದ ದಾವಣಗೆರೆ ಜಿಲ್ಲೆಯ ಸಂತೇಬೆನ್ನೂರು, ಚನ್ನಗಿರಿ, ನ್ಯಾಮತಿ, ಹೊನ್ನಾಳಿ, ಬಸವಾಪಟ್ಟಣ, ಹರಿಹರ ಹಾಗೂ ತಾಲ್ಲೂಕಿನ ಹಲವು ಪಟ್ಟಣ, ಹಳ್ಳಿಗಳಲ್ಲಿ ಕಸಾಪ ಆಜೀವ ಸದಸ್ಯರ ಭೇಟಿ, ಸಭೆಗಳನ್ನು ಯಶಸ್ವಿಯಾಗಿ ನಡೆಸಿ ಮಾತಾಡಿದರು.

ಕಸಾಪ ಆಜೀವ ಸದಸ್ಯರು ನಿರೀಕ್ಷೆಗೂ ಮೀರಿ ಶೇಖರಗೌಡ ಅವರಿಗೆ ಸ್ಪಂದಿಸಿದ್ದಾರೆ. ರಾಜ್ಯ ಕಸಾಪ ಅಭ್ಯರ್ಥಿ ಜೊತೆಗೆ ದಾವಣಗೆರೆ ಜಿಲ್ಲಾ ಕಸಾಪ ಅಭ್ಯರ್ಥಿ ಬಿ. ವಾಮದೇವಪ್ಪ, ಮಾಜಿ ಜಿಲ್ಲಾಧ್ಯಕ್ಷ, ಎ.ಆರ್.ಉಜ್ಜನಪ್ಪ, ನಿಕಟಪೂರ್ವ ಜಿಲ್ಲಾಧ್ಯಕ್ಷ ಡಾ. ಹೆಚ್.ಎಸ್. ಮಂಜುನಾಥ್ ಕುರ್ಕಿ, ಬಯಲಾಟ ಅಕಾಡೆಮಿ ಸದಸ್ಯ ಎನ್.ಎಸ್. ರಾಜು, ದಿಳ್ಳೆಪ್ಪ, ಕನ್ನಡ ಪರಿಚಾರಕರಾದ ಬಿ.ಜಿ. ರುದ್ರೇಶ್, ಎಲ್. ಜಿ. ಮಧುಕುಮಾರ್ ಬಸವಾಪಟ್ಟಣ, ಶಿಕ್ಷಕರ ಸಂಘದ ಅಧ್ಯಕ್ಷ ಎಜಾಜ್ ಅಹಮದ್, ಮುಖಂಡರುಗಳಾದ ಬಿ.ಜಿ. ನಾಗರಾಜ್, ಕೆ.ಎನ್. ತಿಪ್ಪೇಸ್ವಾಮಿ, ಡಾ. ಬಿ.ಎನ್. ರಂಗಪ್ಪ, ಆಲಂ ಪಾಷ, ಕೆ.ಎನ್. ಮಂಜುನಾಥ್, ಪ್ರಶಾಂತ್ ಪಾಟೀಲ್ ವಾಲ್ಮೀಕಿ ನೌಕರ ಬಳಗದ ದಾಗಿನಕಟ್ಟೆ ಪರಮೇಶ್, ಡಿ.ಜಿ. ಬಸವರಾಜ್, ಡಿ.ಡಿ. ಕುಮಾರ್, ಎಂ.ಎಸ್. ಸಂಗಮೇಶ್, ಶಿ.ಸಂ.ದ ಕಾರ್ಯದರ್ಶಿ ಡಿ.ಕೆ.ರಾಜು, ಮು.ಶಿ. ಸಂಘದ ಬಿ. ಆರ್. ಬಸಪ್ಪ, ಕೆ.ಎಸ್. ಶಾಂತರಾಜ್, ಮು.ಶಿ. ಉಮೇಶ್, ಶ್ರೀನಿವಾಸ್, ಪುಂಡಲೀಕ್ ಹಾಗೂ ಮಯೂರ ಕನ್ನಡ ಬಳಗ ಮತ್ತು ಭಗತ್ ಸಿಂಗ್ ಯುವಕ ಬಳಗದ ಸದಸ್ಯರು ಹಾಗೂ ಹರೋಸಾಗರ, ಕಂಸಾಗರ, ದಾಗಿನಕಟ್ಟೆ, ಕಣಿವೆಬಿಳಚಿ, ಮರಬನಹಳ್ಳಿ ಗ್ರಾಮದ ಆಜೀವ ಸದಸ್ಯರು ಹಾಜರಿದ್ದು ರಾಜ್ಯಕ್ಕೆ ಶೇಖರಗೌಡರಿಗೆ, ಜಿಲ್ಲೆಗೆ ಬಿ. ವಾಮದೇವಪ್ಪ ಅವರಿಗೆ ಬೆಂಬಲ ಸೂಚಿಸಿದರು.

## ಕಾಮಗಾರಿಗಳಿಗೆ ಎಸ್ಸೆಸ್ ಚಾಲನೆ



(3ನೇ ಪುಟದಿಂದ) ಅಧಿಕಾರಿಗಳು, ಗುತ್ತಿಗೆದಾರರಿಗೆ ಸೂಚಿಸಿದರು.

ಪಾಲಿಕೆ ವಿಪಕ್ಷ ನಾಯಕ ಎ.ನಾಗರಾಜ್, ಸದಸ್ಯರುಗಳಾದ ವಿನಾಯಕ ಪೈಲ್ವಾನ್, ಶ್ರೀಮತಿ ಸುಧಾ ಇಟ್ಟಿಗುಡಿ ಮಂಜುನಾಥ್, ಉದಯಕುಮಾರ್, ಕೆ.ಚಮನ್ ಸಾಬ್, ಜಿ.ಎಸ್.ಮಂಜುನಾಥ್, ಮುಖಂಡರುಗಳಾದ ಅಬ್ದುಲ್ ಘನಿ ತಾಹೇರ್, ಬಾಬುರಾವ್ ಸಾಳಂಕಿ, ರಹಮತ್‌ವುಲ್ಲಾ, ಅನಿಲ್ ಕುಮಾರ್, ಪುಟ್ಟಪ್ಪ, ನೂರ್ ಅಹ್ಮದ್, ಸತೀಶ್, ಹಬೀಬ್, ವಿರೂಪಾಕ್ಷಪ್ಪ, ಶ್ರೀಮತಿ ಕವಿತಾ ಚಂದ್ರಶೇಖರ್, ಗುತ್ತಿಗೆದಾರ ಮಂಜುನಾಥ್, ಆರ್.ವಾಸುದೇವ್, ಅಧಿಕಾರಿಗಳಾದ ಗಣೇಶಬಾಬು, ಸ್ಮಾರ್ಟ್ ಸಿಟಿ ನಿರ್ದೇಶಕ ಎಂ. ನಾಗರಾಜ್ ಮತ್ತಿತರರಿದ್ದರು.

ಶ್ರೀ ಕುಮಾರ ವಿಜಯ ನಾಟಕ ಸಂಘ (ರಿ.) ಚಿತ್ತರಗಿ ಇವರಿಂದ
ಭಾರೀ ಜನದಟ್ಟಣೆಯ 50ನೇ ಪ್ರಯೋಗದತ್ತ
ಬಂದರ ಬಾರ ಬೋರಂಗಿ

ಕೌಟುಂಬಿಕ ಹಾಸ್ಯಭರಿತ ಸಾಮಾಜಿಕ ನಾಟಕ ಪ್ರದರ್ಶನ
ಪ್ರತಿದಿನ 2 ಪ್ರಯೋಗಗಳು, ಮಧ್ಯಾಹ್ನ 3 ಕ್ಕೆ, ಸಂಜೆ 6 ಕ್ಕೆ
ದಾವಣಗೆರೆ ಪಿ.ಬಿ. ರಸ್ತೆ, (ಶ್ರೀ ನರಹರಿಶೇಟ್ ಕಲ್ಯಾಣ ಮಂಟಪದ ಎದುರಿಗೆ) ಟಿ.ಎಂ.ಪಿ.ಎನ್. ಕಾಂಪೌಂಡ್‌ನಲ್ಲಿ
ಸಂಚಾಲಕರು : ಮಂಜುನಾಥ್ ಜಾಲ್ಯಾಳ 98803 42862

SHREE VEERABHADRESHWARA CONSULTANCY SERVICES
CIVIL ENGINEERS AND DEVELOPERS
# 80/18, Opp. P.J. Lodge, A.V.K. College Road, P.J. Extension, DAVANGERE-577 002.
Cell: 9916173399, 9343277422
WE OFFER THE FOLLOWING SERVICE :
✦ CONSTRUCTION CONSULTANTS
✦ ARCHITECTURAL VASTU PLAN
✦ ESTIMATION & VALUATION
✦ 3D VIEW & INTERIOR DESIGN .
✦ ASSISTANCE FOR BUILDING LICENSE PLAN
✦ ASSISTANCE FOR LAY OUT DESIGN & LAND DEVELOPMENT
✦ A4 TO AO PLOTTER PRINTS & BLUE PRINTS


# ಒಳ್ಳೆಯ ಸರ್ಕಾರ, ಭ್ರಷ್ಟಾಚಾರ ಒಟ್ಟೊಟ್ಟಿಗೆ ಸಾಗಲು ಸಾಧ್ಯವಿಲ್ಲ



ದಾವಣಗೆರೆ, ಅ.2 - ಮಹಾತ್ಮ ಗಾಂಧೀಜಿ ಸೇರಿದಂತೆ ಎಲ್ಲ ಆದರ್ಶ ವ್ಯಕ್ತಿಗಳ ದಿನದಂದು ಶಾಲೆಗಳಿಗೆ ರಜೆ ನೀಡಿ ಆಚರಿಸುವ ಬದಲು ರಜೆ ನೀಡದೇ ವಿದ್ಯಾರ್ಥಿಗಳಿಗೆ ಅವರ ತತ್ವ, ಸಿದ್ಧಾಂತಗಳನ್ನು ತಿಳಿಸಿ ಕೊಡುವ ಕೆಲಸ ಆಗಬೇಕು ಎಂದು ಹಿರಿಯ ವಕೀಲ ಎಲ್. ಎಚ್.ಅರುಣ ಕುಮಾರ್ ಕರೆ ನೀಡಿದರು.

ನೆರಳು ಬೀಡಿ ಕಾರ್ಮಿಕರ ಯೂನಿಯನ್ ವತಿಯಿಂದ ಮಹಾತ್ಮ ಗಾಂಧಿ ಜಯಂತಿ ಪ್ರಯುಕ್ತ ಯೂನಿಯನ್‌ನ ಸಭಾಂಗಣದಲ್ಲಿ ಶನಿವಾರ ಹಮ್ಮಿಕೊಂಡ 'ಗಾಂಧಿ ಮತ್ತು ಕೋಮು ಸೌಹಾರ್ದ' ವಿಚಾರ ಸಂಕಿರಣ ಹಾಗೂ ಮನೆಗೆಲಸ, ಕಟ್ಟಡ ಕಾರ್ಮಿಕರಿಗೆ ಫುಡ್‌ಕಿಟ್ ವಿತರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಗಾಂಧೀಜಿಯ ಚಿಂತನೆಗಳನ್ನು, ಅವರ ಸತ್ಯಾನ್ವೇಷಣೆಯ ಬದುಕಿನ ರೀತಿಯನ್ನು ಮುಂದಿನ ಪೀಳಿಗೆಗೆ ತಿಳಿಸಬೇಕು. ವರ್ಷಗಳು ಕಳೆದಂತೆ ಗಾಂಧೀಜಿಯವರನ್ನು ಜನಮಾನಸದಿಂದ ಸರಿಸುವ ಪ್ರಯತ್ನಗಳಾಗುತ್ತಿವೆ. ಎಲ್ಲ ಕಾಲಕ್ಕೂ ಪ್ರಸ್ತುತರಾದ ಗಾಂಧೀಜಿಯವರನ್ನು ಈ ರೀತಿ ಮರೆಯಾಗಲು ಬಿಡಬಾರದು ಎಂದು ಹೇಳಿದರು.



ಪ್ರಜಾಪ್ರಭುತ್ವ ಮತ್ತು ಹಿಂಸೆ, ಒಳ್ಳೆಯ ಸರ್ಕಾರ ಮತ್ತು ಭ್ರಷ್ಟಾಚಾರ ಒಟ್ಟೊಟ್ಟಿಗೆ ಸಾಗಲು ಸಾಧ್ಯವಿಲ್ಲ. ಗಾಂಧೀಜಿಯ ತತ್ವಕ್ಕೆ ವಿರುದ್ಧವಾಗಿ ಆಡಳಿತ ನಡೆಸುವವರು, ಅಧಿಕಾರಿಗಳು ಇದ್ದಾರೆ. ಸತ್ಯ, ಅಹಿಂಸೆ, ಜಾತ್ಯತೀತತೆ, ಕೋಮು ಸೌಹಾರ್ದಕ್ಕೆ ಮತ್ತೊಂದು ಹೆಸರಾದ ಗಾಂಧೀಜಿಯ ತತ್ವಗಳು ಆಡಳಿತ ನಡೆಸುವವರಿಗೆ ಪಾಠ ಆಗಬೇಕು ಎಂದರು.




**ಹಿರಿಯ ನ್ಯಾಯವಾದಿ ಎಲ್.ಹೆಚ್. ಅರುಣ್‌ಕುಮಾರ್**

ಪೀಪಲ್ಸ್ ಲಾಯರ್ಸ್ ಗಿಲ್ಡ್ ಅಧ್ಯಕ್ಷ ಅನೀಸ್ ಪಾಷ ಮಾತನಾಡಿ ಪ್ರೀತಿ, ಸೌಹಾರ್ದತೆ, ಶಾಂತಿ, ಅಹಿಂಸೆಯಿಂದ ಕಟ್ಟಿದ ದೇಶ ಉನ್ನತ ಸ್ಥಾನಕ್ಕೆ ಏರುತ್ತದೆ. ದ್ವೇಷದಿಂದ ದೇಶ ಕಟ್ಟಲು ಹೊರಟರೆ ಅದಕ್ಕೆ ದೀರ್ಘಾಯುಷ್ಯ ಇರುವುದಿಲ್ಲ. ಬ್ರಿಟಿಷರಿಂದ ವಿಮೋಚನೆ, ಹಸಿವು, ಬಡತನ, ಅಸಮಾನತೆ, ವಿಮೋಚನೆ ಗಾಂಧೀಜಿಯ ಗುರಿಯಾಗಿತ್ತು. ಅದರಲ್ಲಿ ಬ್ರಿಟಿಷರಿಂದ ವಿಮೋಚನೆ ಮಾತ್ರ ಸಿಕ್ಕಿದ್ದು, ಹಸಿವು, ಬಡತನ, ಅಸಮಾನತೆಯಿಂದ ಇನ್ನೂ ವಿಮೋಚನೆ ಸಿಕ್ಕಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಅಂಬೇಡ್ಕರ್, ಗಾಂಧೀಜಿ, ನೆಹರೂ ಅವರ ಸಿದ್ಧಾಂತಗಳಲ್ಲಿ, ಹೋರಾಟಗಳಲ್ಲಿ ವ್ಯತ್ಯಾಸ ಇರಬಹುದು. ಎಲ್ಲವನ್ನೂ ಗೌರವಿಸುತ್ತಾ, ಒಳ್ಳೆಯ ಅಂಶಗಳನ್ನು ನಾವು ಪಡೆದುಕೊಳ್ಳಬೇಕು. ದ್ವೇಷಿಸುವುದು ಅದಕ್ಕೆ ಪರಿಹಾರ ಅಲ್ಲ ಎಂದು ಸಲಹೆ ನೀಡಿದರು.

ನೆರಳು ಬೀಡಿ ಕಾರ್ಮಿಕರ ಯೂನಿಯನ್ ಅಧ್ಯಕ್ಷೆ ಜಬೀನಾ ಖಾನಂ ಅಧ್ಯಕ್ಷತೆ ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ಎಂ. ಕರಿಬಸಪ್ಪ, ಮನೆಕೆಲಸದವರ ಯೂನಿಯನ್‌ನ ಲಕ್ಷ್ಮಮ್ಮ, ಬೀಡಿ ಕಾರ್ಮಿಕರ ಯೂನಿಯನ್‌ನ ಶಿರಿನ್ ಬಾನು, ಪ್ರಗತಿಪರ ಚಿಂತಕರಾದ ಅಬ್ದುಲ್ ಘನಿ ತಾಹೇರ್, ಬಾಲಕೃಷ್ಣ ಉಪಸ್ಥಿತರಿದ್ದರು.

ಸೂರ್ಯ ನವೋದಯ ಕೋಚಿಂಗ್ ಸೆಂಟರ್, ದಾವಣಗೆರೆ
(ಯಶಸ್ವಿ 26ನೇ ವರ್ಷಕ್ಕೆ ಪಾದಾರ್ಪಣೆ)
2021-2022 ನೇ ಸಾಲಿನಲ್ಲಿ ನಮ್ಮ ಕೋಚಿಂಗ್ ಸೆಂಟರ್‌ನಿಂದ ನವೋದಯ ಶಾಲೆಗೆ ಆಯ್ಕೆಯಾದ ಕೇವಲ ಕೆಲವು ಮಕ್ಕಳ ಪಟ್ಟಿ

ಅಜಿತ ಬಿ.ಎಂ
ಶ್ರೀ ಸೋಮೇಶ್ವರ ವಿದ್ಯಾಲಯ, ದಾವಣಗೆರೆ

ಪ್ರವೀಣ್ ಜಿ.ಆರ್
ಶ್ರೀ ಸೋಮೇಶ್ವರ ವಿದ್ಯಾಲಯ, ದಾವಣಗೆರೆ

ಪ್ರೀತಮ್ ಕೆ. ನಾಯ್ಕ
ಶ್ರೀ ವಾಸವಿ ರಾಷ್ಟ್ರೀಯ ವಿದ್ಯಾಲಯ, ಹೊನ್ನೂರು ಗೊಲ್ಲರಹಟ್ಟಿ, ದಾವಣಗೆರೆ ತಾ||

ಪ್ರತಿಭಾ ಎ.
ಸ.ಕಿ.ಪ್ರಾ ಶಾಲೆ, ತೋಳಹುಣಸೆ, ದಾವಣಗೆರೆ ತಾ||

ಮನು ಬಿ.ವಿ.
ಪೂರ್ಣ ಪ್ರಜ್ಞಾ ಕಾನ್ವೆಂಟ್, ಆಲ್ದೂರು, ಚಿಕ್ಕಮಗಳೂರು ತಾ||

ವಿಕಾಸ್
ಸ.ಕಿ.ಪ್ರಾ ಶಾಲೆ, ಮಡ್ಡಿ ತಾಂಡಾ, ಯಾದಗಿರಿ ತಾ||
ಈ ಮಕ್ಕಳಿಗೆ ಅವರ ಶಾಲೆಯ ಮುಖ್ಯೋಪಾಧ್ಯಾಯರು, ಶಿಕ್ಷಕ ವೃಂದ, ಕಾರ್ಯದರ್ಶಿ, ಎಸ್.ಡಿ.ಎಂ.ಸಿ ಅಧ್ಯಕ್ಷರು, ತಂದೆ-ತಾಯಿ, ಬಂಧುಗಳು ಹಾಗೂ ಇವರಿಗೆ ತರಬೇತಿ ನೀಡಿದ ಶಿಕ್ಷಕರು ಶುಭ ಹಾರೈಸಿದ್ದಾರೆ. ಈ ವರ್ಷದ ತರಬೇತಿಯು ಈಗಷ್ಟೇ ಆರಂಭಗೊಂಡಿರುತ್ತದೆ.
ಶ್ರೀ ಸುರೇಶ್ ಪಿ. ಮುರಗಿ M.Sc., B.Ed, ನವೋದಯ ತರಬೇತಿ ಶಿಕ್ಷಕರು
99028 24909, 98447 48763

## ರಾಜ್ಯದ 31ನೇ ಜಿಲ್ಲೆಯಾಗಿ ವಿಜಯನಗರ ಅಸ್ತಿತ್ವಕ್ಕೆ

ಹೊಸಪೇಟೆ, ಅ. 2 - ರಾಜ್ಯದ 31ನೇ ಜಿಲ್ಲೆಯಾಗಿ ವಿಜಯನಗರ ಇಂದು ಅಸ್ತಿತ್ವಕ್ಕೆ ಬಂದಿದೆ. ಇಲ್ಲಿನ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ಅದ್ಧೂರಿ ಸಮಾರಂಭದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೂತನ ಜಿಲ್ಲೆಯನ್ನು ಉದ್ಘಾಟಿಸಿದ್ದಾರೆ.

ನೂತನ ಜಿಲ್ಲೆ ಉದ್ಘಾಟನೆ ಸಂದರ್ಭದಲ್ಲಿ ಬಸವರಾಜ ಬೊಮ್ಮಾಯಿ ಅವರು ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಚಾಲನೆ ನೀಡಿದ್ದಾರೆ.

ನಂತರ ಮಾತನಾಡಿರುವ ಅವರು, ವಿಜಯನಗರ ಜಿಲ್ಲೆಯಲ್ಲಿ ಸಂಸ್ಕೃತಿ, ಪುರಾತನ ಕಾಲವನ್ನು ಬಿಂಬಿಸುವ ಇತಿಹಾಸವಿದೆ. ಹಂಪಿಗೆ ಯಾತ್ರಿಗಳು ಇನ್ನೂ ಹೆಚ್ಚಿನ ಮಟ್ಟದಲ್ಲಿ ಬರಬೇಕು. 643 ಕೋಟಿಯಲ್ಲಿ ಈ ಭಾಗದಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಗೆ ಯೋಜನೆ ರೂಪಿಸಲಾಗುತ್ತಿದೆ. ವಿಶಾಲವಾದ ಜಿಲ್ಲಾಡಳಿತ ಕೇಂದ್ರ ಸ್ಥಾಪನೆ ಮಾಡಲಾಗುತ್ತಿದೆ. ಜಿಲ್ಲಾ ಕೇಂದ್ರಕ್ಕೆ ಎಲ್ಲ ರೀತಿಯ ಹಣಕಾಸಿನ ನೆರವನ್ನು ಸರ್ಕಾರ ಮಾಡಲಿದೆ. ಸಮಯಕ್ಕನುಸಾರವಾಗಿ ಎಲ್ಲ ಅನುದಾನಗಳನ್ನು ಬಿಡುಗಡೆ ಮಾಡಲಾಗುವುದು. ವಿಜಯನಗರ ಜಿಲ್ಲೆ ಸ್ಥಾಪನೆಯಾದ ದಿನವೇ ಅಭಿವೃದ್ಧಿ ಪರ್ವ ಆರಂಭವಾಗಿದೆ ಎಂದು ಹೇಳಿದರು.

## ಕ್ರಿಕೆಟ್ ಬೆಟ್ಟಿಂಗ್ : ಓರ್ವನ ಬಂಧನ

ದಾವಣಗೆರೆ, ಅ.2- ಕ್ರಿಕೆಟ್ ಬೆಟ್ಟಿಂಗ್ ಅಡ್ಡೆ ಮೇಲೆ ದಾಳಿ ನಡೆಸಿರುವ ಪೊಲೀಸರು ಓರ್ವನನ್ನು ಬಂಧಿಸಿ 14 ಸಾವಿರ ರೂ. ನಗದು ವಶಪಡಿಸಿಕೊಂಡಿದ್ದಾರೆ. ನಗರದ ಆರ್.ಎಂ.ಸಿ ಲಿಂಕ್ ರಸ್ತೆಯ ಸಾರ್ವಜನಿಕ ಸ್ಥಳದಲ್ಲಿ ಕ್ರಿಕೆಟ್ ಬೆಟ್ಟಿಂಗ್ ಆಡುತ್ತಿದ್ದ ವೇಳೆ ಸಿಇಎನ್ ಪೊಲೀಸ್ ಠಾಣೆಯ ಪೊಲೀಸ್ ನಿರೀಕ್ಷಕ ಬಿ.ವಿ. ಗಿರೀಶ್ ಹಾಗೂ ಸಿಬ್ಬಂದಿಗಳ ತಂಡ ದಾಳಿ ಮಾಡಿದೆ. ಈ ಸಂಬಂಧ ಸಿಇಎನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

## ಅಲ್ಹಾಜ್ ರಹಮತ್‌ಉಲ್ಲಾ ಸಾಬ್ ನಿಧನ



ದಾವಣಗೆರೆ ಮಿಲ್ಲತ್ ಕಾಲೋನಿ 4ನೇ ಕ್ರಾಸ್ ವಾಸಿ, ಕೆಎನ್‌ಆರ್ ಮಂಡಕ್ಕಿ ಹಾಗೂ ಕೆಎನ್‌ಆರ್ ಅವಲಕ್ಕಿ ಮಿಲ್ ಮಾಲೀಕರಾದ **ಅಲ್ಹಾಜ್ ಕೆ.ಎನ್. ರಹಮತ್‌ಉಲ್ಲಾ ಸಾಬ್** (61) ಅವರು ದಿನಾಂಕ 02.10.2021ರಂದು ರಾತ್ರಿ 9.30ರ ಸಮಯದಲ್ಲಿ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರು ಪತ್ನಿ, ನಾಲ್ವರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧು-ಮಿತ್ರರನ್ನು ಅಗಲಿದ್ದಾರೆ. ದಿನಾಂಕ 03.10.2021ರಂದು 2 ಗಂಟೆಗೆ ರಜಾವುಲ್ ಮುಸ್ತಾಫಾ ನಗರದಲ್ಲಿರುವ ಹೊಸ ಖಬರಸ್ತಾನದಲ್ಲಿ ದಫನ್ (ಅಂತ್ಯಕ್ರಿಯೆ) ನೆರವೇರಲಿದೆ. ಮೃತರ ಆತ್ಮಕ್ಕೆ ಶಾಂತಿ ಕೋರಿ ದುವಾ-ಯೇ- ಮಗ್ಫಿರತ್ ದುವಾ ಮಾಡಲು ಕುಟುಂಬ ವರ್ಗದವರು ಕೋರಿದ್ದಾರೆ.

– ಇಂತಿ ದುಃಖತಪ್ತ ಕುಟುಂಬ ವರ್ಗ

ಮೊ. : 9449607967, 9986849957






## ನಾಳೆಯಿಂದ ಖಾದಿ ಮಾರಾಟ ಮತ್ತು ಪ್ರದರ್ಶನ

ದಾವಣಗೆರೆ, ಅ.2- ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯಿಂದ ಗಾಂಧಿ ಜಯಂತಿ ಪ್ರಯುಕ್ತ ಖಾದಿ ಸಂಘ-ಸಂಸ್ಥೆಗಳನ್ನು ಪುನಶ್ಚೇತನಗೊಳಿಸುವ ನಿಟ್ಟಿನಲ್ಲಿ ಹಾಗೂ ಗಾಂಧೀಜಿಯವರ ಕನಸನ್ನು ಸಾಕಾರಗೊಳಿಸಲು ನಾಡಿದ್ದು ದಿನಾಂಕ 4 ರಿಂದ 6 ರವರೆಗೆ 3 ದಿನಗಳ ಕಾಲ ಜಿಲ್ಲಾಡಳಿತ ಭವನದ ಆವರಣದಲ್ಲಿ ಖಾದಿ ಮಾರಾಟ, ಪ್ರದರ್ಶನವನ್ನು ಹಮ್ಮಿಕೊಳ್ಳಲಾಗಿದೆ.

ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಖಾದಿ ಸಂಘ-ಸಂಸ್ಥೆಗಳ ಮಾಲೀಕರು ಖಾದಿ ಉತ್ಪನ್ನ ಮಾರಾಟ ಮಾಡಲು ಖಾದಿ ಮಳಿಗೆಗಳನ್ನು ತೆರೆದಿದ್ದು, ಜಿಲ್ಲೆಯ ಸಾರ್ವಜನಿಕರು ಹಾಗೂ ಅಧಿಕಾರಿಗಳು ಭೇಟಿ ನೀಡಿ, ಖಾದಿ ಬಟ್ಟೆಯನ್ನು ಖರೀದಿಸುವ ಮೂಲಕ ಖಾದಿ ಕಸಬುದಾರರಿಗೆ ನೆರವಾಗಬೇಕು ಎಂದು ಖಾದಿ ಮಂಡಳಿ ಜಿಲ್ಲಾ ಅಭಿವೃದ್ಧಿ ಅಧಿಕಾರಿಗಳು ತಿಳಿಸಿದ್ದಾರೆ.

## ಸಂಜೆ ಕಾಲೇಜಿನಲ್ಲಿ ಪ್ರವೇಶ ಪ್ರಾರಂಭ

ದಾವಣಗೆರೆ, ಅ.2- ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಂಜೆ ಕಾಲೇಜು ಆರಂಭಿಸಲು ಸರ್ಕಾರ ಅನುಮತಿ ನೀಡಿದ್ದು, ಈಗಾಗಲೇ ಪ್ರವೇಶ ಪ್ರಕ್ರಿಯೆಗಳು ಆರಂಭಗೊಂಡಿವೆ.

ಪ್ರಸಕ್ತ ವರ್ಷ ಬಿ.ಕಾಂ ಮತ್ತು ಬಿ.ಸಿ.ಎ ಕೋರ್ಸ್‌ಗಳು ಮಾತ್ರ ಲಭ್ಯವಿರುತ್ತವೆ. ಪದವಿ ವಿದ್ಯಾರ್ಥಿಗಳಿಗೆ ಅನ್ವಯಿಸುವ ಪ್ರವೇಶ ಶುಲ್ಕವೇ ಸಂಜೆ ಕಾಲೇಜು ವಿದ್ಯಾರ್ಥಿಗಳಿಗೆ ಅನ್ವಯಿಸಲಿದೆ. ಸ್ಮಾರ್ಟ್ ಕ್ಲಾಸ್ ಕೊಠಡಿಗಳು, ಗ್ರಂಥಾಲಯ, ಕಂಪ್ಯೂಟರ್ ಪ್ರಯೋಗಾಲಯ, ಡಿಜಿಟಲ್ ಬೋರ್ಡ್ ಹಾಗೂ ಅನುಭವಿ ಪ್ರಾಧ್ಯಾಪಕರ ತರಬೇತಿ ಇರುತ್ತದೆ.

ವಿವರಕ್ಕೆ ಡಾ.ಡಿಹೆಚ್ ಮಹಮೂದ್ ಖಾನ್ (95356 80786) ಡಾ. ಜೆ.ಎಂ ಮಂಜುನಾಥ (99459 73222) ಅವರನ್ನು ಸಂಪರ್ಕಿಸಬಹುದು ಎಂದು ಸರ್ಕಾರಿ ಕಾಲೇಜು ಪ್ರಾಂಶುಪಾಲ ಶ್ರೀಮತಿ ಡಾ.ಸಾಯಿರಾಬಾನು ಎ. ಘರೂಖಿ ತಿಳಿಸಿದ್ದಾರೆ.

ಈಶ್ವರಮ್ಮ ಟ್ರಸ್ಟ್ (ರಿ.)
ಈಶ್ವರಮ್ಮ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ
ಪಿ.ಜೆ. ಬಡಾವಣೆ, ದಾವಣಗೆರೆ – 577 002.

## ಗೌರವಪೂರ್ವಕ ಅಭಿನಂದನೆಗಳು



ರುಪ್ಸ ಕರ್ನಾಟಕ ಖಾಸಗಿ ಶಾಲೆಗಳ ಸಂಘಟನೆಯಿಂದ ಕೊಡಮಾಡುವ 'ಕರ್ನಾಟಕ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ-2021'ಕ್ಕೆ ಭಾಜನರಾಗಿ, ಬೆಂಗಳೂರಿನಲ್ಲಿ ನಡೆದ ಸಮಾರಂಭದಲ್ಲಿ ರಾಜ್ಯದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಾದ ಬಿ.ಸಿ. ನಾಗೇಶ್‌ರವರಿಂದ 'ರಾಜ್ಯಮಟ್ಟದ ರುಪ್ಸ ಕರ್ನಾಟಕ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ' ಸ್ವೀಕರಿಸಿದ ನಮ್ಮ ಶಾಲೆಯ ಹೆಮ್ಮೆಯ ಪ್ರಾಚಾರ್ಯರಾದ

**ಶ್ರೀ ಕೆ.ಎಸ್. ಪ್ರಭುಕುಮಾರ್**

ಅವರಿಗೆ ಹಾರ್ದಿಕ ಅಭಿನಂದನೆಗಳು.



'ಜ್ಞಾನಜ್ಯೋತಿ' ವನಿತಾ ಶಿಕ್ಷಕಿಯರ ವೇದಿಕೆಯಿಂದ ಕೊಡಮಾಡುವ 'ಜ್ಞಾನಜ್ಯೋತಿ - ಉತ್ತಮ ಶಿಕ್ಷಕಿ-2021' ಪ್ರಶಸ್ತಿಗೆ ಭಾಜನರಾಗಿರುವ ನಮ್ಮ ಶಾಲೆಯ ಉಪ ಪ್ರಾಂಶುಪಾಲರೂ ಹಾಗೂ ಶೈಕ್ಷಣಿಕ ಸಲಹೆಗಾರರೂ ಆದ

**ಶ್ರೀಮತಿ ಜಿ.ಎಸ್. ಶಶಿರೇಖಾ**

ಅವರಿಗೆ ಹಾರ್ದಿಕ ಅಭಿನಂದನೆಗಳು.



ಅಖಿಲ ಭಾರತ ಖೋ ಖೋ ರೆಫ್ರಿಯಾಗಿ ಆಯ್ಕೆಯಾಗಿರುವ ನಮ್ಮ ಶಾಲೆಯ ದೈಹಿಕ ಶಿಕ್ಷಣ ಶಿಕ್ಷಕರಾದ

**ಶ್ರೀ ರವಿ ಕೆ.**

ಅವರಿಗೆ ಹಾರ್ದಿಕ ಅಭಿನಂದನೆಗಳು.

- ಅಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ಪದಾಧಿಕಾರಿಗಳು ಈಶ್ವರಮ್ಮ ಟ್ರಸ್ಟ್ (ರಿ.)
- ಅಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ಪದಾಧಿಕಾರಿಗಳು
- ಈಶ್ವರಮ್ಮ ಶಾಲೆ ಮತ್ತು ಶ್ರೀ ಸತ್ಯಸಾಯಿ ವಿದ್ಯಾನಿಕೇತನ, ಶಾಸ್ತ್ರಿಹಳ್ಳಿ
- ಪ್ರಾಂಶುಪಾಲರು ಮತ್ತು ಗುರುವೃಂದ, ಈಶ್ವರಮ್ಮ ಶಾಲೆ ಮತ್ತು ಸತ್ಯಸಾಯಿ ಶಾಲೆ
- ಸಂಚಾಲಕರು ಮತ್ತು ಸದಸ್ಯರು, ಶ್ರೀ ಸತ್ಯಸಾಯಿ ಸೇವಾ ಸಮಿತಿ, ದಾವಣಗೆರೆ.

## ಸವಿನೆನಪು...



ದಾವಣಗೆರೆ ನಗರದ ಪಿ.ಜೆ. ಬಡಾವಣೆ ನಿವಾಸಿ
ಶ್ರೀ ವಿನಾಯಕ ರೈಸ್ ಮಿಲ್ ಮಾಲೀಕರೂ, ಗಣ್ಯ ವರ್ತಕರೂ, ಕೊಡುಗೈ ದಾನಿಗಳೂ ಆದ

**ಶ್ರೀಯುತ ಜಿ. ವೇದಮೂರ್ತಿ (ಮೂರ್ತ್ಯೆಪ್ಪ)**

ನೀವು ನಮ್ಮೆಲ್ಲರನ್ನಗಲಿ ಇಂದಿಗೆ ಒಂದು ವರ್ಷವಾಯಿತು.... ಸದಾ ನಿಮ್ಮ ನೆನಪಿಸುತ್ತಾ...
ಭಗವಂತನು ನಿಮ್ಮ ಆತ್ಮಕ್ಕೆ ಶಾಂತಿ ನೀಡಲೆಂದು ಪ್ರಾರ್ಥಿಸುವ....

ಡಾ. ಸಿ.ವಿ. ರಾಮನ್ ಕಾಲೇಜ್, ಜಿ.ವಿ. ಪಿ.ಯು. ಕಾಲೇಜ್
ಆಡಳಿತ ಮಂಡಳಿ ಹಾಗೂ ಸಿಬ್ಬಂದಿ ವರ್ಗ, ದಾವಣಗೆರೆ.

## ಶ್ರೀಮತಿ ಹೆಚ್.ಎಂ. ವನಜಾಕ್ಷಿ ನಿಧನ



ದಾವಣಗೆರೆ ಎಸ್.ಎಸ್. ಬಡಾವಣೆ 'ಬಿ' ಬ್ಲಾಕ್ 4ನೇ ಮೇನ್, 2 ಕ್ರಾಸ್ (ರಾಘವೇಂದ್ರ ಕಾಲೇಜ್ ಹತ್ತಿರ) ವಾಸಿ ಬಾಪೂಜಿ ವಿದ್ಯಾಸಂಸ್ಥೆಯ ಬಾಪೂಜಿ ಪ್ರಾಥಮಿಕ ಶಾಲೆಯ ನಿವೃತ್ತ ಶಿಕ್ಷಕಿ, ಪ್ರಭು ಸ್ವಾಮಿ ಬಾಣಾಪೂರ್ ಮಠ್ ಇವರ ಧರ್ಮಪತ್ನಿ ಹಾಗೂ ದಿ. ಹೆಚ್.ಎಮ್. ಪಾಲಾಕ್ಷಯ್ಯ ಬೊಮ್ಮಲಿಂಗಪ್ಪನವರ ಮಠ ಇವರ ಜೇಷ್ಠ ಪುತ್ರಿ

**ಹೆಚ್.ಎಂ. ವನಜಾಕ್ಷಿ**

ಇವರು ದಿನಾಂಕ 2.10.2021ರ ಸಂಜೆ 7 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 68 ವರ್ಷ ವಯಸ್ಸಾಗಿತ್ತು. ಪತಿ ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 03.10.2021ರ ಭಾನುವಾರ ಮಧ್ಯಾಹ್ನ 12 ಗಂಟೆಗೆ ಬೂದಾಳ್ ರಸ್ತೆಯ ವೀರಶೈವ ರುದ್ರಭೂಮಿಯಲ್ಲಿ ನೆರವೇರಿಸಲಾಗವುದು.

ಇಂತಿ ದುಃಖತಪ್ತ

ಬಾಣಾಪೂರ್‌ಮಠ್ ಹಾಗೂ ಬೊಮ್ಮಲಿಂಗಪ್ಪನವರ ಮಠದ ವಂಶಸ್ಥರು

ಮೊ: 98442 22697






JANATHAVANI - Published, Owned and Printed by Vikas Shadaksharappa Mellekatte, at Jayadhara Offset Printers, # 605, 'Jayadhara' Hadadi Road, Davangere - 5, Published from # 605, 'Jayadhara' Hadadi Road, Davangere - 5. Editor Vikas Shadaksharappa Mellekatte